

ಐಕ್ಯರಂಗ

ಸಂಪುಟ 21 ಸಂಚಿಕೆ 47

ನವೆಂಬರ್ 16-22, 1998 ರೂ. 2.00

ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ವಾರಪತ್ರಿಕೆ

ಡಿಸೆಂಬರ್ 11ರ ಮುಷ್ಕರದ ಯಶಸ್ಸು ಕೇಂದ್ರ ಸರ್ಕಾರದ ಹಾದಿ ಬದಲಿಸಬಲ್ಲದು

- ಕಾಂ. ಸೂರ್ಯನಾರಾಯಣ ರಾವ್

ನವೆಂಬರ್ ೧೬ ರ ರಾಜ್ಯಮಟ್ಟದ ರ್‍ಯಾಲಿಯ ನಂತರ ಹೋರಾಟದ ಮುಂದಿನ ಕಾರ್ಯಕ್ರಮವಾದ ರಾಷ್ಟ್ರೀಯ ಸಾಮೂಹಿಕ ಸಂಘಟನೆಗಳ ವೇದಿಕೆಯ ಕರೆಯ ಮೇರೆಗೆ ಡಿಸೆಂಬರ್ ೧೧ ರಂದು ದೇಶಾದ್ಯಂತ ನಡೆಯಲಿರುವ ಸಾರ್ವತ್ರಿಕ ಮುಷ್ಕರ ಯಶಸ್ವಿಯಾದರೆ ಕೇಂದ್ರ ಸರಕಾರಕ್ಕೆ ತನ್ನ ಈಗಿನ ಜನ-ವಿರೋಧಿ, ಬೆಲೆಯೇರಿಕೆಯ ನೀತಿಗಳನ್ನು ಬದಲಿಸದೆ ಬೇರೆ ದಾರಿಯೇ ಉಳಿಯುವುದಿಲ್ಲ ಎಂದು ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಹಾಗೂ ಹಿರಿಯ ಕಾರ್ಮಿಕ ಮುಖಂಡ ಎಸ್.ಸೂರ್ಯನಾರಾಯಣ ರಾವ್ ಹೇಳಿದ್ದಾರೆ. ದಕ್ಷಿಣ ಕೋರಿಯಾದಲ್ಲಿ ಕಾರ್ಮಿಕರ ಒಗ್ಗಟ್ಟಿನ ಹೋರಾಟ ಅಲ್ಲಿನ ಸರಕಾರವನ್ನು ಹಿಂದೆ ಸರಿಯುವಂತೆ ಮಾಡಿದೆ. ಇಂಡೋನೇಶ್ಯಾದಲ್ಲಿ ಅಧ್ಯಕ್ಷ ಸುಹಾರ್ತೋ ರಾಜೀನಾಮೆ ನೀಡುವಂತಹ ಪರಿಸ್ಥಿತಿ ಉಂಟಾದ ಸಂಗತಿ ನಮ್ಮ ಮುಂದಿದೆ. ಭಾರತದ 70% ರಷ್ಟಿರುವ ಶ್ರಮಿಕ ಜನ ಈ ಹೋರಾಟವನ್ನು ಕೈಗೆತ್ತಿಕೊಂಡರೆ ಯಾವುದೇ ಸರ್ಕಾರವೂ ಅದನ್ನು ಮೆಟ್ಟಿ ನಿಲ್ಲಲು ಸಾಧ್ಯವಿಲ್ಲ ಎಂದು ಅವರು 'ಐಕ್ಯರಂಗ'ಕ್ಕೆ ನೀಡಿರುವ ಸಂದರ್ಶನವೊಂದರಲ್ಲಿ ಹೇಳಿದ್ದಾರೆ. ದುಡಿಯುವ ಜನರ ಪಕ್ಷವಾದ ಸಿಪಿಐ(ಎಂ) ದೇಶದಲ್ಲಿ ವರ್ಗ ಬಲಾಬಲವನ್ನು ದುಡಿಯುವ ಜನಗಳ ಪರವಾಗಿ ಬದಲಿಸಲು ಶ್ರಮಿಸುತ್ತಿದ್ದು ಈ ನಿಟ್ಟಿನಲ್ಲಿ ರಾಷ್ಟ್ರೀಯ ವೇದಿಕೆಯ ಈ ದೇಶವ್ಯಾಪಿ ಹೋರಾಟದ ಕಾರ್ಯಕ್ರಮಕ್ಕೆ ಬಹಳ ಮಹತ್ವ ನೀಡಿದೆ. ಇತ್ತೀಚೆಗೆ ಕಲ್ಕತ್ತೆಯಲ್ಲಿ ನಡೆದ ಸಿಪಿಐ(ಎಂ)ನ ಹದಿನಾರನೇ ಮಹಾಧಿವೇಶ ಈ ಬಗ್ಗೆ ಒಂದು ಪ್ರತ್ಯೇಕ ಗೊತ್ತುವಳಿಯನ್ನು ಅಂಗೀಕರಿಸಿದೆ ಎಂದು ಅವರು ಹೇಳಿದರು.

ರಾಷ್ಟ್ರದ ಜನ ಸಾಮಾನ್ಯರು ಎದುರಿಸುತ್ತಿರುವ ಸಂಕಷ್ಟಗಳ ಪರಿಹಾರಕ್ಕಾಗಿ ಹಾಗೂ ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರದ ಕೋಮು ಹಾದಿಯನ್ನು ಮುಚ್ಚಲಿಕ್ಕಾಗಿ ದೇಶದ 50 ಕ್ಕೂ ಹೆಚ್ಚು ಸಂಘಟನೆಗಳು ರಚಿಸಿಕೊಂಡಿರುವ ಸಾಮೂಹಿಕ ಸಂಘಟನೆಗಳ ರಾಷ್ಟ್ರೀಯ ವೇದಿಕೆಯ ಹೋರಾಟದ ಸ್ವರೂಪ ತೀವ್ರಗೊಳ್ಳುತ್ತಿರುವ ಸಂದರ್ಭದಲ್ಲಿ ರಾಜ್ಯದ ಶ್ರಮಿಕರ ಧ್ವನಿ 'ಐಕ್ಯರಂಗ' ಪತ್ರಿಕೆಯು ಕಾಂ|| ಎಸ್.ಸೂರ್ಯನಾರಾಯಣ ರಾವ್ ಜೊತೆ ನಡೆಸಿದ ಸಂದರ್ಶನದ ಅಂಶಗಳನ್ನು ಮುಂದೆ ಕೊಡಲಾಗಿದೆ.

☑ ***ಸಾಮೂಹಿಕ ಸಂಘಟನೆಗಳ ರಾಷ್ಟ್ರೀಯ ವೇದಿಕೆ ಯಾವ ಉದ್ದೇಶದಿಂದ ರಚನೆಗೊಂಡಿತು?***

ಸೂರಿ: 1991 ರಲ್ಲಿ ನರಸಿಂಹ ರಾವ್ - ಮನಮೋಹನ ಸಿಂಗ್ ಜೋಡಿ ಹೊಸ ಆರ್ಥಿಕ ನೀತಿ ತಂದಾಗ ಇದು ಸಾರ್ವಜನಿಕ ಉದ್ದಿಮೆಗಳ ಮೇಲೆ, ನಮ್ಮ ಕೈಗಾರಿಕೆಗಳ ಬೆಳವಣಿಗೆ ಮೇಲೆ ದುಷ್ಪರಿಣಾಮ ಬೀರುತ್ತಿದೆ ಎಂದು ಮನಗಂಡು ಸಿಐಟಿಯು ದೇಶವ್ಯಾಪಿ ಹೋರಾಟಕ್ಕೆ ಸಿಪಿಎಸ್‌ಟಿಯು ಕರೆ ಕೊಡುವ ಹಾಗೆ ಪ್ರಯತ್ನಿಸಿತು. ಈ ಕರೆಯ ಮೇರೆಗೆ ದೇಶವ್ಯಾಪಿ 15 ಲಕ್ಷ ಕಾರ್ಮಿಕರು ಈ ಮುಷ್ಕರದಲ್ಲಿ ಭಾಗವಹಿಸಿ ಯಶಸ್ವಿಗೊಳಿಸಿದರು. ಇದಾದ ಮೇಲೆ ಸರ್ಕಾರದ ಧೋರಣೆಯನ್ನು ಬದಲಿಸಲು ಕೇವಲ ಸಾರ್ವಜನಿಕ ವಲಯದ ನೌಕರರಿಂದ ಅಸಾಧ್ಯವೆಂದು, ಪ್ರಬಲ ವಿರೋಧಕ್ಕಾಗಿ ಒಂದು ಸಮಿತಿ ರಚನೆಗೊಂಡಿತು. ಇದರಲ್ಲಿ ಬ್ಯಾಂಕ್, ವಿಮಾ ನೌಕರರು ಕೂಡ ಸೇರ್ಪಡೆ ಗೊಂಡರು.

ಕೇಂದ್ರ ಸರ್ಕಾರ ಇವರು ಹಾಕಿಕೊಂಡ ಕಾರ್ಯಕ್ರಮವನ್ನು ನಿರ್ಲಕ್ಷಿಸಿದನ್ನು ಅರಿತು, ಇವರು ತೆಗೆದುಕೊಂಡಿರುವ ರಾಜಕೀಯ ತೀರ್ಮಾನದಿಂದ ಸಂಕಷ್ಟಕ್ಕೊಳಗಾಗಿರುವ ಎಲ್ಲಾ ವಿಭಾಗದ ಜನತೆಯನ್ನು ಸಂಘಟಿಸಿ, ಕೇಂದ್ರ ಸರ್ಕಾರದ ಮೇಲೆ ಬಲಿಷ್ಠವಾದ ಒತ್ತಡ ಹೇರಬೇಕೆಂಬ ಉದ್ದೇಶದಿಂದ ಸಾಮೂಹಿಕ ಸಂಘಟನೆಗಳ ರಾಷ್ಟ್ರೀಯ ವೇದಿಕೆ ರಚನೆಗೊಂಡಿತು.

☑ ***ವೇದಿಕೆಯಲ್ಲಿ ಯಾವ್ಯಾವ ಸಂಘಟನೆಗಳು ಪಾಲ್ಗೊಂಡಿವೆ?***

ಸೂರಿ: ಇದರಲ್ಲಿ ಕಾರ್ಮಿಕ ಸಂಘಟನೆಗಳು, ರೈತ ಸಂಘಟನೆಗಳು, ವಿದ್ಯಾರ್ಥಿ-ಯುವಜನ, ಮಹಿಳಾ, ಮಧ್ಯಮ ವರ್ಗದ ನೌಕರರಾದ ಬ್ಯಾಂಕ್, ವಿಮಾ ಮತ್ತು ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ನೌಕರರ ಸಂಘಟನೆಗಳು ಸೇರ್ಪಡೆಗೊಂಡಿವೆ.

☑ ***ಸಾಮೂಹಿಕ ಸಂಘಟನೆಗಳ ರಾಷ್ಟ್ರೀಯ ವೇದಿಕೆ ಇಲ್ಲಿಯವರೆಗೆ ನಡೆಸಿರುವ ಹೋರಾಟಗಳಾವುವು?***

ಸೂರಿ: ಆರಂಭದಲ್ಲಿ ಈ ಸಂಘಟನೆಗಳು ದೇಶಾದ್ಯಂತ ಹೋರಾಟ ನಡೆಸಿದ ಹಿನ್ನೆಲೆಯಲ್ಲಿ ನರಸಿಂಹರಾವ್ ಸರ್ಕಾರ ತನ್ನ ಖಾಸಗೀಕರಣ ನೀತಿಯ ಜಾರಿಯ ತೀವ್ರತೆಯನ್ನು ತಡೆ ಹಿಡಿಯಬೇಕಾಯಿತು. ಈ ಅನುಭವದಲ್ಲಿ ಸಾಮೂಹಿಕ ಸಂಘಟನೆಗಳ ವೇದಿಕೆ ತನ್ನ ಹೋರಾಟವನ್ನು ತೀವ್ರಗೊಳಿಸಿದರೆ ಕೇಂದ್ರ ಸರ್ಕಾರದ ಆರ್ಥಿಕ ನೀತಿಯನ್ನು ಹಿಮ್ಮೆಟ್ಟಿಸಬಹುದೆಂಬ ಅಭಿಪ್ರಾಯವಿತ್ತು. ಆದರೆ........

☑ ***ಮಧ್ಯೆ ಏನಾಯಿತು?***

ಸೂರಿ: ಬಿಜೆಪಿ ಬಾಬ್ರಿ ಮಸೀದಿ ಕೆಡವಿ, ದೇಶದ ಜನತೆಯ ಗಮನ ಬೇರೆಡೆ ಹೋದದ್ದರಿಂದ ಅಂದಿನ ಪರಿಸ್ಥಿತಿಯಲ್ಲಿ ಈ ಹೋರಾಟ ಮುಂದುವರಿಸಲು

ಪುಟ 2 ಕ್ಕೆ

'ಭಾರತಕ್ಕಾಗಿ, ದಯವಿಟ್ಟು ಜಾಗ ಖಾಲಿ ಮಾಡಿ'

- ಸೀತಾರಾಂ ಯೆಚೂರಿ

ಇದು ಸಿಪಿಐ(ಎಂ) ಪೊಲಿಟ್ ಬ್ಯೂರೋ ಸದಸ್ಯ ಸೀತಾರಾಂ ಯೆಚೂರಿಯವರು ಬಿಜೆಪಿ ಮುಖಂಡರಿಗೆ ಹೇಳಿರುವ ಮಾತು. ನಾಲ್ಕು ರಾಜ್ಯಗಳಲ್ಲಿ ವಿಧಾನಸಭಾ ಚುನಾವಣೆಗಳು ಸಮೀಪಿಸುತ್ತಿದ್ದಂತೆ ಬಿಜೆಪಿ ಮುಖಂಡರ ಹತಾಶೆ ಮುಗಿಲು ಮುಟ್ಟುತ್ತಿದೆ. ತಮ್ಮನ್ನು ಕಿತ್ತು ತಿನ್ನುತ್ತಿರುವ ಬೆಲೆಯೇರಿಕೆಯ ಬಗ್ಗೆ ಜನರ ಆಕ್ರೋಶವನ್ನು ಎದುರಿಸಲಾರದ ಬಿಜೆಪಿ ಮುಖಂಡರ "ಉತ್ತಮ ಆಡಳಿತ'ದ ಮಾತು ಮತ್ತಷ್ಟು ಹಾಸ್ಯಾಸ್ಪದಗೊಳ್ಳುತ್ತಿದೆ ಎಂದು ಅವರು ಹೇಳಿದ್ದಾರೆ.

ಬಿಜೆಪಿಯ ಆಡಳಿತ (ಅಥವಾ ಆಡಳಿತದ ಅಭಾವ) ಪ್ರತಿಯೊಂದು ರಂಗದಲ್ಲೂ ದೇಶಕ್ಕೆ ಅನರ್ಥವನ್ನೇ ತಂದಿದೆ. ವಿದೇಶಾಂಗ ವ್ಯವಹಾರಗಳಿಂದ ಹಿಡಿದು ಆರ್ಥಿಕ ನಿರ್ವಹಣೆಯವರೆಗೆ ಪ್ರತಿಯೊಂದು ರಂಗದಲ್ಲೂ ಭಾರತದಂತಹ ವಿಶಾಲ ಹಾಗೂ ವೈವಿಧ್ಯಮಯ ದೇಶವನ್ನು ಆಳಲು ತಾವು ಸಂಪೂರ್ಣ ನಾಲಾಯಕ್ಕು ಎಂದು ಇವರು ತೋರಿಸಿ ಕೊಂಡಿದ್ದಾರೆ ಎಂದು ಯೆಚೂರಿಯವರು ಟೀಕಿಸಿದ್ದಾರೆ.

ತನ್ನ 'ಹಿಂದುರಾಷ್ಟ್ರ' ದ ಅಸಹಿಷ್ಣು ಉದ್ದೇಶ ಸಾಧನೆಗೆ ಆಡಳಿತದಲ್ಲಿ ತೂರಿಕೊಳ್ಳುವ ಪ್ರಯತ್ನದಲ್ಲಷ್ಟೇ ಈ ಬಿಜೆಪಿ ಮುಖಂಡರು ಭಾರೀ ಮುತುವರ್ಜಿ ವಹಿಸಿದ್ದಾರೆ. ಇನ್ನೊಂದೆಡೆ ಬಿಜೆಪಿ ನೇತೃತ್ವದ ಸರಕಾರ ಜನಗಳ ಮೇಲೆ ಆರ್ಥಿಕ ಸಂಕಟಗಳನ್ನೇ ಹೇರುತ್ತಿದೆ. ದಿನಬಳಕೆಯ ಪ್ರತಿಯೊಂದು ವಸ್ತುವಿನ ಬೆಲೆಯೂ ಮುಗಿಲು ಮುಟ್ಟುತ್ತಿದೆ. (ಪುಟ 5 ರ ಲೇಖನ ನೋಡಿ). ಇದರಲ್ಲಿ ಅತ್ಯಂತ ಗಮನಾರ್ಹ ಸಂಗತಿಯೆಂದರೆ ಈ ಸರಕಾರಕ್ಕೆ ಈ ಭಾರೀ ಹಣದುಬ್ಬರವನ್ನು ತಡೆಯುವುದು ಹೇಗೆ ಎಂದು ತೋಚುತ್ತಲೇ ಇಲ್ಲ, ಅಥವಾ ಬೆಲೆಯೇರಿಕೆಯನ್ನು ತಡೆಯುವ ಆಕಾಂಕ್ಷೆಯೇ ಅದಕ್ಕೆ ಇಲ್ಲವೋ ಏನೋ.

ಏಕೆಂದರೆ ಬಿಜೆಪಿಯ ವ್ಯಾಪಾರೀ-ಪರ ಪಕ್ಷಪಾತ ಮತ್ತೆ-ಮತ್ತೆ ಪ್ರಕಟಗೊಳ್ಳುತ್ತಿದೆ. ಇದಕ್ಕೆ ಅವರು ಇತ್ತೀಚಿನ ನಿದರ್ಶನವನ್ನು ತೋರಿಸುತ್ತಾರೆ. ದಿಲ್ಲಿ ಹೈಕೋರ್ಟ್‌ನಲ್ಲಿ ಅಖಿಲ ಭಾರತ ವಕೀಲರ ಸಂಘ ಹಾಕಿರುವ ಸಾರ್ವಜನಿಕ ಹಿತಾಸಕ್ತಿಯ ಅರ್ಜಿಯ ವಿಚಾರಣೆಗಳಲ್ಲಿ ಹೈಕೋರ್ಟ್ ಕಾಳಸಂತೆ ಕೋರತನವನ್ನು, ಕಳ್ಳ ದಾಸ್ತಾನನ್ನು ತಡೆಯಲು ಅಗತ್ಯ ವಸ್ತುಗಳ ಶಾಸನವನ್ನು ಮತ್ತೆ ಪ್ರಯೋಗಿಸುವ ಬಗ್ಗೆ ಕೇಂದ್ರ ಸರಕಾರ ತನ್ನ ನಿಲುವನ್ನು ಸ್ಪಷ್ಟಪಡಿಸುವಂತೆ ಹೇಳಿತ್ತು. ಇದಕ್ಕೆ ಉತ್ತರವಾಗಿ ಸರ್ಕಾರದ ಪರವಾಗಿ ಅಫಿಡವಿಟ್ ಸಲ್ಲಿಸಿರುವ ಆಹಾರ ಮತ್ತು ನಾಗರೀಕ ಪೂರೈಕೆ ಇಲಾಖೆಯ ಆಯುಕ್ತರು ಬೆಲೆಯೇರಿಕೆಗೆ ವ್ಯಾಪಾರೀ ಸಮುದಾಯ ಕಾರಣವಲ್ಲ ಎಂದಿದ್ದಾರೆ!

ಬಿಜೆಪಿ ನೇತೃತ್ವದ ಸರಕಾರ ಆರು ತಿಂಗಳು ಜನಗಳ ಬದುಕಿನ ಮೇಲೆ ಅತ್ಯಂತ ಗಂಭೀರ ಘಾತ ಮಾಡಿರುವ ಅವಧಿ. ಇಂತಹ ಪೀಡೆಯಿಂದ ದೇಶವನ್ನು ಮುಕ್ತಗೊಳಿಸುವ ಕಾಲವೀಗ ಬಂದಿದೆ ಎಂದು ಸೀತಾರಾಂ ಯೆಚೂರಿ ಹೇಳಿದ್ದಾರೆ.

ದಿಲ್ಲಿಯ ಪ್ರಸಕ್ತ ಆಡಳಿತದ ದಿವಾಳಿಕೋರತನವನ್ನು ಬಯಲಿಗೆಳೆಯಿರಿ

- ಜ್ಯೋತಿಬಸು

ಇಪ್ಪತ್ತೊಂದನೇ ಶತಮಾನಕ್ಕೆ ಕಾಲಿಡುತ್ತಿರುವ ಸಮಯದಲ್ಲಿ ಕೋಮುವಾದದ ರಾಜಕೀಯ ದೇಶದ ಮುಂದಿರುವ ಅತ್ಯಂತ ಗಂಭೀರ ಸವಾಲು. ಈ ಸವಾಲನ್ನೆದುರಿಸಿ ದೇಶವನ್ನು ಉಳಿಸಬೇಕು ಎಂದು ಹಿರಿಯ ಮುತ್ಸದ್ದಿ ಹಾಗೂ ಸಿಪಿಐ(ಎಂ) ಪೊಲಿಟ್‌ಬ್ಯೂರೋ ಸದಸ್ಯ ಜ್ಯೋತಿ ಬಸುರವರು ಹೇಳಿದ್ದಾರೆ. ಇದಕ್ಕಾಗಿ ದೇಶದ ಎಲ್ಲಾ ಎಡ, ಪ್ರಜಾಪ್ರಭುತ್ವವಾದಿ ಹಾಗೂ ಜಾತ್ಯಾತೀತ ಶಕ್ತಿಗಳು ಒಂದುಗೂಡಿ ದಿಲ್ಲಿಯಲ್ಲಿನ ಪ್ರಸಕ್ತ ಆಡಳಿತದ ದಿವಾಳಿಕೋರತನವನ್ನು ಬಯಲಿಗೆಳೆಯಬೇಕು ಎಂದು ಅವರು ಕರೆ ನೀಡಿದರು. ಜ್ಯೋತಿ ಬಸುರವರು ನವದೆಹಲಿಯಲ್ಲಿ 30ನೇ ಜವಾಹರಲಾಲ್ ನೆಹರೂ ಸ್ಮಾರಕ ಭಾಷಣವನ್ನು ಮಾಡುತ್ತಿದ್ದರು.

ಸಂಘ ಪರಿವಾರ ಭಾರತದ ವಿಶಾಲ ಮನೋಭಾವದ ಸಹಿಷ್ಣುತೆಯ ಪರಂಪರೆಯನ್ನು ಬುಡಮೇಲು ಮಾಡುತ್ತಿದೆ ಎಂದು ಬಲವಾಗಿ ಖಂಡಿಸಿದ ಜ್ಯೋತಿಬಸುವರು "ಬಹಳ ವರ್ಷಗಳಿಂದ ಸಂಘಪರಿವಾರ ಮುಸ್ಲಿಮರ ಮೇಲೆ ವಿಷ ಕಾರುತ್ತಿತ್ತು. ಈಗ ಕ್ರಿಶ್ಚಿಯನ್ ಕೋಮಿನ ಮೇಲೂ ಗುರಿಯಿಡಲಾರಂಭಿಸಿದೆ. ಇಂತಹ ಕೃತ್ಯಗಳು ಯಾವುದೇ ನಾಗರಿಕ ಸಮಾಜದ ವಿಧಿ-ವಿಧಾನಗಳನ್ನು ಉಲ್ಲಂಘಿಸುವ ಕೃತ್ಯಗಳು" ಎಂದು ಟೀಕಿಸಿದರು. ಒಂದು ಖೋಟಾ ಹಿಂದೂ ರಾಷ್ಟ್ರೀಯವಾದದ ಪರಿಕಲ್ಪನೆಯನ್ನು ಹೇರಿದರೆ ಅದು ರಾಷ್ಟ್ರೀಯ ಹಂದರವನ್ನು ಛಿದ್ರ-ಛಿದ್ರಗೊಳಿಸುತ್ತದೆ. ಭಾರತ ಒಂದು ರಾಷ್ಟ್ರವಾಗಿ ಉಳಿಯಬೇಕಾದರೆ ಸಂಕುಚಿತ ರಾಜಕೀಯದೊಂದಿಗೆ ಹಣಾಹಣಿಗಿಳಿಯಲೇ ಬೇಕಾಗುತ್ತದೆ ಎಂದು ಜ್ಯೋತಿಬಸು ಎಚ್ಚರಿಸಿದರು.

ನೆಹರೂ ಸ್ಮಾರಕ ನಿಧಿಯವರು ಜವಾಹರಲಾಲ್ ನೆಹರೂ ಬಗ್ಗೆ ತನ್ನ ಅಭಿಪ್ರಾಯಗಳು ಅವರ ಅಭಿಪ್ರಾಯಗಳಿಗಿಂತ ಭಿನ್ನವಾಗಿದೆ ಎಂದು ಗೊತ್ತಿದ್ದರೂ ತನ್ನನ್ನು ಈ ಸ್ಮಾರಕ ಭಾಷಣ ನೀಡಲು ಆಹ್ವಾನಿಸಿರುವುದು ಈ ಹೋರಾಟದ ಅಗತ್ಯದ ದೃಷ್ಟಿಯಿಂದ ಪ್ರೋತ್ಸಾಹಕಾರಿ ಎಂದ ಜ್ಯೋತಿಬಸುರವರು ಈಗಿನ ಗಂಭೀರ ಪರಿಸ್ಥಿತಿಗೆ ಕಾಂಗ್ರೆಸ್‌ನ ವಿಫಲತೆಯೂ ಕಾರಣ ಎಂದು ನೇರವಾಗಿಯೇ ನೆನಪಿಸಿದರು. 1975 ರಲ್ಲಿ ಕಾಂಗ್ರೆಸ್‌ನ ಸರ್ವಾಧಿಕಾರಿಶಾಹಿ ಪ್ರವೃತ್ತಿಯನ್ನು ಟೀಕಿಸಿದ ಅವರು "ಕಾಂಗ್ರೆಸ್ 45 ವರ್ಷಗಳ ಕಾಲ ಸುಮಾರಾಗಿ ಅಧಿಕಾರದ ಗುತ್ತೇದಾರಿಕೆಯನ್ನು ಅನುಭವಿಸಿತು. ದುರದೃಷ್ಟವಶಾತ್ ಅದು ಧಾರ್ಮಿಕ ಸಂಕುಚಿತವಾದ ಹಾಗೂ ಮೂಲಭೂತವಾದದ ರಾಜಕೀಯನ್ನು ಎದುರಿಸುವಲ್ಲಿ ವಿಫಲವಾಯಿತು" ಎಂದರು.

ಸರ್ವತೋಮುಖ ರೀತಿಯಲ್ಲಿ ವಿಕೇಂದ್ರೀಕರಣ ನಡೆಯಬೇಕು ಎಂದು ಪ್ರತಿಪಾದಿಸಿದ ಜ್ಯೋತಿಬಸುರವರು ಪಶ್ಚಿಮ ಬಂಗಾಳದಲ್ಲಿ ಈ ಪ್ರಕ್ರಿಯೆ ಸಾಧಿಸಿದ ಯಶಸ್ಸನ್ನು ವಿವರಿಸಿದರು.

ಸಮಾಜವಾದವೆಂಬ ರಾಜಕೀಯ ತತ್ವ ಸತ್ತಿಲ್ಲ, ಅದು ಹಿನ್ನಡೆ ಕಂಡಿದೆಯಷ್ಟೆ. ಇಪ್ಪತ್ತೊಂದನೇ ಶತಮಾನದಲ್ಲಿ ಒಂದು ಸಮಾಜವಾದಿ, ಶೋಷಣಾರಹಿತ ಮಾನವೀಯ ಸಮಾಜ ಭಾರತದಲ್ಲಿ ಮೂಡಿಬರುತ್ತದೆ ಎಂಬುದು ನಮ್ಮ ಆಶಯ. ಈ ಸಮಾಜ ಆರ್ಥಿಕ ಮತ್ತು ಸಾಮಾಜಿಕ ವ್ಯವಸ್ಥೆಯನ್ನು ಪರಿವರ್ತಿಸುತ್ತದೆ ಮಾತ್ರವೇ ಅಲ್ಲ, ಒಂದು ಹೊಸ ಮಾನವನನ್ನು ಸೃಷ್ಟಿಸುತ್ತದೆ ಎಂದು ಮುಂಬರುವ ಶತಮಾನದ ಮುನ್ನೋಟವನ್ನು ಜ್ಯೋತಿಬಸು ತಮ್ಮ ಭಾಷಣದಲ್ಲಿ ನೀಡಿದರು. ○

ಡಿಸೆಂಬರ್ 11 ರ ಮುಷ್ಕರದ ಯಶಸ್ಸು.....

ಪುಟ 1 ರಿಂದ

ಸಾಧ್ಯವಾಗಲಿಲ್ಲ.

☑ ***ಕೇಂದ್ರದಲ್ಲಿ ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ಆರ್ಥಿಕ ನೀತಿಯಲ್ಲಿ ಏನಾದರೂ ಬದಲಾವಣೆಯಾಯಿತೆ?***

ಸೂರಿ: ಕೇಂದ್ರದಲ್ಲಿ ಬಿಜೆಪಿ ನೇತೃತ್ವದ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ಈ ಜಾಗತೀಕರಣ, ಉದಾರೀಕರಣ, ಖಾಸಗೀಕರಣ ರಭಸಗೊಳ್ಳುತ್ತಿದೆ.

ಕೇಂದ್ರ ಹಣಕಾಸು ಮಂತ್ರಿ ಯಶವಂತ ಸಿನ್ಹಾ ತನ್ನ ಬಜೆಟ್ ಭಾಷಣದಲ್ಲಿ ಸಾರ್ವಜನಿಕ ವಲಯದ ಶೇ 74 ಶೇರುಗಳನ್ನು ಖಾಸಗಿಯವರಿಗೆ ಮಾರಾಟ ಮಾಡುವುದಾಗಿ ಘೋಷಿಸಿದ್ದಾರೆ. ರೋಗಗ್ರಸ್ತ ಕೈಗಾರಿಕೆಗಳನ್ನು ಪುನಶ್ಚೇತನಗೊಳಿಸಲು ಸಾಧ್ಯವಿಲ್ಲವೆಂದು ಸ್ಪಷ್ಟಪಡಿಸಿದ್ದಾರೆ. ಇಷ್ಟೇ ಅಲ್ಲದೆ ತನ್ನ ಖೋತಾ ಬಜೆಟ್ ಮಾಡಿಕೊಳ್ಳಲು ಶೇರುಗಳ ಮಾರಾಟವನ್ನು ತ್ವರಿತಗೊಳಿಸು ತ್ತೇವೆಂದು ಘೋಷಿಸಿದ್ದಾರೆ. ಇದನ್ನು ಕೇಂದ್ರ ಕಾರ್ಮಿಕ ಸಂಘಟನೆಗಳಾದ ಸಿಐಟಿಯು, ಎಐಟಿಯುಸಿ, ಹೆಚ್‌ಎಂಎಸ್, ಬಿಎಂಎಸ್ ಪ್ರತಿಭಟಿಸಿ ಮನವಿ ಸಲ್ಲಿಸಿವೆ.

ಪೋಖ್ರಾನ್ ಅಣು ಸ್ಫೋಟದ ನಂತರ ಅಮೆರಿಕ ಹಲವು ವಸ್ತುಗಳ ಆಮದು ಮೇಲೆ ನಿರ್ಬಂಧ ಹಾಕಿದೆ. ಇದನ್ನು ಪ್ರಬಲವಾಗಿ ವಿರೋಧಿಸುವ ಬದಲು ಕೇಂದ್ರ ಸರ್ಕಾರ ಬಹುರಾಷ್ಟ್ರೀಯ ಕಂಪನಿಗಳಿಗೆ ಅನೇಕ ಸವಲತ್ತುಗಳನ್ನು ನೀಡಿ, ದೇಶ ಲೂಟಿ ಮಾಡಲು ಅವಕಾಶ ನೀಡುತ್ತಿದೆ. ಉದಾಹರಣೆಗೆ ವಿದ್ಯುಚ್ಛಕ್ತಿ ಉತ್ಪಾದನೆ, ಕಲ್ಲಿದ್ದಲು ತೆಗೆಯುವುದು, ಎಣ್ಣೆ ಉತ್ಪಾದನೆ ಇತ್ಯಾದಿ. ಇವುಗಳೆಲ್ಲವುಗಳ ದುಷ್ಪರಿಣಾಮ ದಿಂದ ನಮ್ಮ ದೇಶೀಯ ಕೈಗಾರಿಕೆಗಳು ಮುಚ್ಚುತ್ತಿವೆ. ನಮ್ಮ ರಫ್ತು ಕುಂಠಿತ ಗೊಳ್ಳುತ್ತಿದ್ದರೆ ಬೆಲೆಗಳು ಗಗನ ಮುಟ್ಟಿವೆ. ಇದೆಲ್ಲವನ್ನು ಗಮನಿಸಿದ ರಾಷ್ಟ್ರೀಯ ಸಾಮೂಹಿಕ ಸಂಘಟನೆಗಳ ರಾಷ್ಟ್ರೀಯ ವೇದಿಕೆ ಆಗಸ್ಟ್ 12, 98 ರಂದು ನವದೆಹಲಿ ಯಲ್ಲಿ ಒಂದು ಸಮಾವೇಶ ನಡೆಸಿತು. ಈ ಸಮಾವೇಶದಲ್ಲಿ 50 ಸಾಮೂಹಿಕ ಸಂಘಟನೆಗಳ 5 ಸಾವಿರ ಪ್ರತಿನಿಧಿಗಳು ಹಾಜರಿದ್ದರು.

ಅಂದಿನ ಸಮಾವೇಶವು ಒಕ್ಕೊರಲಿನಿಂದ ಡಿಸೆಂಬರ್ 11 ರ ಮುಷ್ಕರ ದಲ್ಲಿ ಕಾರ್ಮಿಕರು, ರೈತರು, ಕೃಷಿಕೂಲಿ ಕಾರರು, ವಿದ್ಯಾರ್ಥಿ- ಯುವಜನರು, ಮಹಿಳೆಯರು ಜೊತೆಗೂಡಿದಂತೆ ಅಂಚೆ-ತಂತಿ ನೌಕರರು, ರೈಲ್ವೆ, ಏರ್‌ಲೈನ್ಸ್, ಕೇಂದ್ರ ಹಾಗೂ ರಾಜ್ಯ ಸರ್ಕಾರಿ ನೌಕರರು ಬೃಹತ್ ಸಂಖ್ಯೆಯಲ್ಲಿ ಪಾಲ್ಗೊಂಡು ಯಶಸ್ವಿಗೊಳಿಸಲು ತೀರ್ಮಾನಿಸಿತು.

ಈ ಮುಷ್ಕರವನ್ನು ಯಶಸ್ವಿಗೊಳಿಸಲು ಹಲವಾರು ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಇದರ ಅಂಗವಾಗಿ ದೇಶ ಹಾಗೂ ನಮ್ಮ ರಾಜ್ಯದ ಜಿಲ್ಲಾ, ತಾಲ್ಲೂಕು ಮಟ್ಟದಲ್ಲಿ ಸಾಮೂಹಿಕ ಸಂಘಟನೆಗಳ ವೇದಿಕೆ ರಚಿಸಿಕೊಂಡು ರಾಜ್ಯಾದ್ಯಂತ ಜನತೆಯಲ್ಲಿ ಜಾಗೃತಿ ಮೂಡಿಸುವ ಜಾಥಾ ನಡೆಸಿತು. ಇದಕ್ಕೆ ಎಲ್ಲಾ ಕಡೆಯಿಂದಲೂ ಉತ್ತಮ ಪ್ರತಿಕ್ರಿಯೆ ವ್ಯಕ್ತಗೊಂಡಿದೆ.

ನಮ್ಮ ರಾಜ್ಯದ ಪ್ರಮುಖ ಕೇಂದ್ರ ಉದ್ದಿಮೆಗಳಾದ ಹೆಚ್‌ಎಎಲ್, ಐಟಿಐ, ಬಿಇಎಂಎಲ್ ನೌಕರರು ಜುಲೈ 4 ರಂದು ಒಂದು ಸಮಾವೇಶ ನಡೆಸಿ ಡಿಸೆಂಬರ್ 10 ಮತ್ತು 11ರ ಮುಷ್ಕರ ಯಶಸ್ವಿಗೊಳಿಸಲು ನಿರ್ಣಯಿಸಿರುವುದು ಸ್ವಾಗತಾರ್ಹ. ರಾಜ್ಯದ ಈ ಉದ್ದಿಮೆಗಳ ನೌಕರರು 2 ದಿನಗಳ ಮುಷ್ಕರ ಮಾಡುವುದರಲ್ಲಿ ಯಾವ ಸಂದೇಹವೂ ಇಲ್ಲ.

☑ ***ಸಾಮೂಹಿಕ ಸಂಘಟನೆಗಳ ರಾಷ್ಟ್ರೀಯ ವೇದಿಕೆಯ ಹೋರಾಟದಲ್ಲಿ ಸಿಪಿಐ(ಎಂ)ನ ಪಾತ್ರವೇನು?***

ಸೂರಿ: ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷ ದುಡಿಯುವ ವರ್ಗದ ಪಕ್ಷವಾಗಿರುವುದರಿಂದ ಕೇಂದ್ರ ಸರ್ಕಾರದ ಆರ್ಥಿಕ ಧೋರಣೆ ದೇಶದ ಜನತೆಯ ಹಿತಕ್ಕೆ ಮಾರಕವಾಗಿದೆ ಎಂಬುದನ್ನು ಗುರುತಿಸಿ, ಜೊತೆಗೆ ಹಿಂದೆ ಯಾವ ಕೇಂದ್ರ ಸರ್ಕಾರವೂ ಬಿತ್ತದ ಕೋಮು ವಿಷ ಬೀಜವನ್ನು ಇಂದಿನ ಬಿಜೆಪಿ ಸರ್ಕಾರ ಬಿತ್ತುತ್ತಿದೆ. ಇದು ಯಶಸ್ವಿಯಾದರೆ ದುಡಿಯುವ ಜನತೆಯ ಐಕ್ಯತೆಗೆ ಬಲವಾದ ಪೆಟ್ಟು ಬೀಳುತ್ತದೆ. ಬಂಡವಾಳಿಗರಿಗೆ, ಶೋಷಕರಿಗೆ ಶೋಷಣೆಗೆ ಅವಕಾಶ ಮಾಡಿಕೊಡುತ್ತಿದೆ ಎಂದು ತಿಳಿದ ಸಿಪಿಐ(ಎಂ) ತನ್ನ 16ನೇ ಮಹಾಧಿವೇಶನ ದಲ್ಲಿ ಒಂದು ಗೊತ್ತುವಳಿಯನ್ನು ಮಂಡಿಸಿ, ಮಾರ್ಕ್ಸ್‌ವಾದಿ ಪಕ್ಷದ ಸದಸ್ಯರು ಹಾಗೂ ಅಭಿಮಾನಿಗಳು ವೇದಿಕೆ ಹಮ್ಮಿಕೊಂಡಿರುವ ಹೋರಾಟವನ್ನು ಯಶಸ್ವಿಗೊಳಿಸಬೇಕೆಂದು ಡಿಸೆಂಬರ್ 11 ರ ಮುಷ್ಕರದ ಮೂಲಕ ಕೇಂದ್ರ ಸರ್ಕಾರಕ್ಕೆ ಎಚ್ಚರಿಕೆ ಗಂಟೆ ಬಾರಿಸಬೇಕೆಂದು ತೀರ್ಮಾನಿಸಿದೆ.

ಸಿಪಿಐ(ಎಂ) ಅಭಿಪ್ರಾಯದಲ್ಲಿ ನಮ್ಮ ದೇಶದ ಬೆಳವಣಿಗೆಗೆ ಸಾರ್ವಜನಿಕ ವಲಯ ಪ್ರಮುಖವಾಗಿದೆ. ಇದನ್ನು ನಾಶ ಪಡಿಸುವುದೆಂದರೆ ದೇಶದ ಬೆಳವಣಿಗೆಯನ್ನು ಬಗ್ಗು ಬಡಿದಂತೆ. ಇದು ಸಾಮ್ರಾಜ್ಯಶಾಹಿಗಳ ಹಸ್ತಕ್ಷೇಪಕ್ಕೆ ಸುಲಭ ಹಾದಿಯಾಗುತ್ತದೆ ಎಂದು ತಿಳಿದು ಸಾಮೂಹಿಕ ಸಂಘಟೆಗಳ ಮುಷ್ಕರದ ಮಹತ್ವವನ್ನು ದೊಡ್ಡ ಪ್ರಮಾಣದಲ್ಲಿ ಪ್ರಚಾರ ಮಾಡಬೇಕೆಂದು ನಿರ್ಣಯಿಸಿದೆ.

☑ ***ಸಾಮೂಹಿಕ ಸಂಘಟನೆಗಳ ರಾಷ್ಟ್ರೀಯ ವೇದಿಕೆಯ ಹೋರಾಟಗಳು ಉದಾರೀಕರಣ ನೀತಿಯನ್ನು ಹಿಮ್ಮೆಟ್ಟಿಸಲು ಸಾಧ್ಯವೆ?***

ಸೂರಿ: ಡಿಸೆಂಬರ್ 11 ಸಾರ್ವತ್ರಿಕ ಮುಷ್ಕರ ಯಶಸ್ವಿಯಾದರೆ ಕೇಂದ್ರ ಸರ್ಕಾರ ಆದರ ಇಂದಿನ ಆರ್ಥಿಕ ನೀತಿಯನ್ನು ಬದಲಿಸದೆ ಬೇರೆ ಮಾರ್ಗೋಪಾಯವಿಲ್ಲ. ದಕ್ಷಿಣ ಕೊರಿಯದಲ್ಲಿನ ಒಗ್ಗಟ್ಟಿನ ಹೋರಾಟ, ಅಲ್ಲಿನ ಸರ್ಕಾರ ತೆಗೆದುಕೊಂಡ ಕಾರ್ಮಿಕ ವಿರೋಧಿ ನೀತಿಯಿಂದ ಹಿಂದೆ ಸರಿದಿದೆ. ಇಂಡೋನೇಶ್ಯಾದ ವಿದ್ಯಾರ್ಥಿಗಳ ಪ್ರತಿಭಟನೆಯಿಂದಾಗಿ ಅಧ್ಯಕ್ಷ ಸುಹಾರ್ತೋ ರಾಜಿನಾಮೆ ನೀಡುವಂತಾಯಿತು, ಇದು ನಮ್ಮ ಮುಂದಿದೆ.

ಭಾರತದ ಶೇಕಡ 70 ರಷ್ಟು ಶ್ರಮಿಕ ವರ್ಗ ಈ ಹೋರಾಟವನ್ನು ಕೈಗೆತ್ತಿಕೊಂಡರೆ ಯಾವುದೇ ಸರ್ಕಾರವು ಇದನ್ನು ಮೆಟ್ಟಿ ನಿಲ್ಲಲು ಸಾಧ್ಯವಿಲ್ಲ. ಆ ನಂಬಿಕೆ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷಕ್ಕಿದೆ.

ನಮ್ಮ ರಾಜ್ಯದ ಎಲ್ಲಾ ಪಕ್ಷದ ಸದಸ್ಯರು, ಅಭಿಮಾನಿಗಳು ಸಾಮೂಹಿಕ ಸಂಘಟೆಗಳ ಡಿಸೆಂಬರ್ 11 ರ ಮುಷ್ಕರ ಯಶಸ್ವಿ ಗೊಳಿಸುವುದರ ಜೊತೆಗೆ ಸಾರ್ವಜನಿಕ ಉದ್ದಿಮೆಯ ಕಾರ್ಮಿಕರು ಹಮ್ಮಿಕೊಂಡಿ ರುವ 2 ದಿನಗಳ(ಡಿಸೆಂಬರ್ 10 ಮತ್ತು 11) ಮುಷ್ಕರವನ್ನು ಯಶಸ್ವಿಗೊಳಿಸಬೇಕೆಂದು ಮನವಿ ಮಾಡಿಕೊಳ್ಳುತ್ತೇನೆ.

ಪೂರ್ಣ ಪರಿವರ್ತನೀಯತೆಗೆ ತಜ್ಞ(?) ವಿರೋಧ



ಭಾರತ ರೂಪಾಯಿಯ ಪೂರ್ಣ ಪರಿವರ್ತನೀಯತೆಯನ್ನು ಎರಡು ಮೂರು ವರ್ಷಗಳೊಳಗೆ ಜಾರಿಗೆ ತರಬೇಕೆಂದು ಭಾರತೀಯ ರಿಸರ್ವ್ ಬ್ಯಾಂಕಿನ ಮಾಜಿ ಉಪ ಗವರ್ನರ್ ಶ್ರೀ ಎಸ್.ಎಸ್. ತಾರಾಪೂರ್ ಅವರ ನೇತೃತ್ವದ ಸಮಿತಿ ಶಿಫಾರಸ್ಸು ಮಾಡಿದ ಮೇಲೆ ಈಗ ಅದಕ್ಕೆ ವಿರೋಧವೂ ವ್ಯಕ್ತವಾಗಿದೆ. ಈ ವಿರೋಧ ಯಾರಿಂದ ಗೊತ್ತೆ? ವಿಶ್ವ ಬ್ಯಾಂಕ್‌ನ ಅರ್ಥಶಾಸ್ತ್ರಜ್ಞ ವಿಲಿಯಮ್ಸನ್ ಎಂಬಾತನೇ ಈ ವಿರೋಧ ವ್ಯಕ್ತಪಡಿಸಿರುವ ಮಹಾಶಯ.

ತಾರಾಪೂರ್ ಸಮಿತಿಯ ಉಳಿದೆಲ್ಲ ಶಿಫಾರಸುಗಳು ಉತ್ತಮವಾದವು ಎಂದಿರುವ ಈತ ಭಾರತ ಪೂರ್ಣ ಪರಿವರ್ತನೀಯತೆಯನ್ನು ಸಾಧಿಸಲು 20-30 ವರ್ಷಗಳಷ್ಟು ಸಮಯ ಬೇಕಾಗುತ್ತದೆ ಎಂದಿದ್ದಾನೆ. ಬ್ರಿಟನ್, ಫ್ರಾನ್ಸ್‌ನಂತಹ ದೇಶಗಳೇ ಪೂರ್ಣ ಪರಿವರ್ತನೀಯತೆಯನ್ನು ಎಪ್ಪತ್ತರ ದಶಕದಲ್ಲಷ್ಟೇ ಜಾರಿಗೆ ತಂದವು ಎಂದು ನಿದರ್ಶನ ನೀಡಿರುವ ಈತ ಜಪಾನ್ ಇನ್ನೂ ತಡವಾಗಿ ಇದನ್ನು ಜಾರಿಗೆ ತಂದಿತು ಎಂದಿದ್ದಾನೆ.

ಭಾರತದ ಆರ್ಥಿಕ ಅಂತಹ ಕಷ್ಟದಲ್ಲೇನೂ ಇಲ್ಲ ಎಂದಿರುವ ಆತ ಜಾಗತೀಕವಾಗಿ ಹಿಂಜರಿತ ಇರುವಾಗ ಭಾರತ ಸಾಧಿಸಿರುವ ಶೇ 5 ರ ಬೆಳವಣಿಗೆ ಒಳ್ಳೆಯದೇ ಎಂದಿದ್ದಾನೆ. ಆದರೆ ಭಾರತ ಆರ್ಥಿಕ ಶಿಸ್ತನ್ನು ರೂಢಿಸಿಕೊಂಡು ಹೋಗಬೇಕು ಎಂದಿರುವ ಈತ ಹಣಕಾಸು ಕೊರತೆಯನ್ನು ಹಿಡಿತದಲ್ಲಿಡಬೇಕು ಎಂದಿದ್ದಾನೆ.

ಈತನ ಪ್ರಕಾರ ಜಾಗತೀಕರಣದ ನೀತಿಯಲ್ಲಿ ದೋಷವೇನೂ ಇಲ್ಲ, ಆದರೆ ಭಾರತದಂತಹ ದೇಶ ಈ ವಿಷಯಗಳಲ್ಲಿ ತನಗೆ ಬೇಕಾದ ಸಮಯ ತೆಗೆದುಕೊಳ್ಳಬೇಕು.

ಇದು ಸಾಮ್ರಾಜ್ಯಶಾಹಿಗಳ ಏಜೆಂಟರು ಈಗ ಹೇಗೆ ವಿಚಾರ ಮಾಡುತ್ತಿರುವರೆಂಬ ಬಗ್ಗೆ ಕೈಗನ್ನಡಿ. ಆಗ್ನೇಯ ಏಶಿಯಾ ದೇಶಗಳ ಆರ್ಥಿಕ ಕುಸಿತದ ನಂತರ ಸಾಮ್ರಾಜ್ಯಶಾಹಿಗಳ ಒಂದುಬಣ ವಿಚಾರ ಮಾಡುತ್ತಿರುವ ರೀತಿ ಇದು. ಆಗ್ನೇಯ ಏಶಿಯಾ ದೇಶಗಳಲ್ಲಿ ಬಿಕ್ಕಟ್ಟಿನಿಂದಾಗಿ ತಮ್ಮ ಆರ್ಥಿಕ ನೀತಿಗಳಿಗೆ ಆಗಿರುವ ಮುಖಭಂಗವನ್ನು ಈ ರೀತಿ ಹೋಗಲಾಡಿಸಿಕೊಳ್ಳುವ ತೀವ್ರ ಪ್ರಯತ್ನವನ್ನು ಇವರು ಮಾಡುತ್ತಿದ್ದಾರೆ. ಪರೋಕ್ಷವಾಗಿ ಬಂಡವಾಶಾಹಿ ಆರ್ಥಿಕ ನೀತಿಗಳ ಸೋಲನ್ನು ಒಪ್ಪಿಕೊಳ್ಳುತ್ತಿರುವ ಇವರು ಈ ನೀತಿಗಳ ದಿವಾಳಿಕೋರತನವನ್ನು ಒಪ್ಪಿಕೊಳ್ಳುವುದಿಲ್ಲ.

ಒಟ್ಟಾರೆಯಾಗಿ ಸರಿಯಾಗಿರುವ ಈ ನೀತಿಗಳನ್ನು ಜಾರಿಗೆ ತರುವಲ್ಲಿ ಎಡವಟ್ಟಾಗಿದೆ ಎಂದು ಹೇಳುವ ತಂತ್ರವನ್ನು ಇವರೆಲ್ಲ ಅನುಸರಿಸುತ್ತಿದ್ದಾರೆ. ಆದರೆ ಬಂಡವಾಳಶಾಹಿ ಆರ್ಥಿಕ ನೀತಿಗಳ ದಿವಾಳಿಕೋರತನವನ್ನು ಶಾಶ್ವತವಾಗಿ ಬಚ್ಚಿಡಲಂತೂ ಇವರಿಂದ ಸಾಧ್ಯವಿಲ್ಲ ಅಲ್ಲವೇ?

ನೆಲ ನೋಡುತ್ತಿರುವ ರಫ್ತು

ರಫ್ತು ಆಧಾರಿತ ಬೆಳವಣಿಗೆಯ ದಾರಿ ಉದಾರೀಕರಣ ಜಾಗತೀಕರಣದ ಆರ್ಥಿಕ ನೀತಿಯದ್ದು-ಅಂತಹ ರಫ್ತನ್ನು ಸಾಧಿಸುವುದಕ್ಕಾಗಿ ಹಿಂದಿನ ಕಾಂಗ್ರೆಸ್ ಸರ್ಕಾರ, ನಂತರದ ಸಂಯುಕ್ತ ರಂಗ ಸರ್ಕಾರ ಮತ್ತು ಇಂದಿನ ಬಿಜೆಪಿ ಸರ್ಕಾರಗಳು ಆರ್ಥಿಕ ಸರ್ಕಸ್ಸುಗಳನ್ನು ಮಾಡುತ್ತಲೇ ಇವೆ. ಆದರೆ ಭಾರತದ ರಫ್ತು ಏರುತ್ತಿಲ್ಲ. ಬದಲಿಗೆ ರಫ್ತು ಬೆಳವಣಿಗೆ ಕುಸಿಯುತ್ತಿದೆ. ರಫ್ತು ಬೆಳವಣಿಗೆ ಸಾಧಿಸುವ ಹೆಸರಿನಲ್ಲಿ ದೇಶದ ಸ್ವಾವಲಂಬನೆಯನ್ನೇ ಬದಿಗೊತ್ತುವ ಸರ್ಕಾರಗಳಿಗೆ ಈಗ ಭಾರತ ಸಾಧಿಸಿರುವ ರಫ್ತು ಪಾಠ ಕಲಿಸುವಂತಿದೆ.

ಸಾವಿರದೊಂಭೈನೂರ ತೊಂಬತ್ತೆಂಟು - ತೊಂಬತೊಂಬತ್ತರ ಮೊದಲ ಅರ್ಧ ವರ್ಷದಲ್ಲಿ ಭಾರತದ ರಫ್ತು ಶೇ 3 ರಷ್ಟು ನಕಾರಾತ್ಮಕ ಬೆಳಣಿಗೆಗೆ ಕೊಡುಗೆ ನೀಡಿರುವ ವಲಯಗಳೆಂದರೆ ಹತ್ತಿ ಜವಳಿ, ಎಲೆಕ್ಟ್ರಾನಿಕ್ಸ್, ಚರ್ಮದ ವಸ್ತುಗಳು,ಉಕ್ಕು ಮತ್ತು ವಾಹನಗಳ ಬಿಡಿ ಭಾಗಗಳು.

ಇಲ್ಲಿ ರಫ್ತು ಕಡಿಮೆಯಾಗಿರುವಂತಹ ಜೊತೆಗೆ ಆಮದು ಬೆಳವಣಿಗೆ ಕಳೆದ ವರ್ಷದ ಇದೇ ಅವಧಿಯದಕ್ಕಿಂತ ಹೆಚ್ಚಿಗೆ ಇರುವುದನ್ನು ನಾವು ಗಮನಿಸಬೇಕು. ರಫ್ತು ಹೆಚ್ಚಿಸುವ ಹೆಸರಿನಲ್ಲಿ ಆಗುತ್ತಿರುವ ಆಮದು ದುರುದ್ದೇಶಕ್ಕಾಗಿ ಬಳಕೆ ಆಗುತ್ತಿರುವುದು ಇದರಿಂದ ಸ್ಪಷ್ಟವಾಗುತ್ತದೆ.

ವಿಶ್ಲೇಷಕರ ಪ್ರಕಾರ ಈ ವರ್ಷ ರಫ್ತು ಬೆಳವಣಿಗೆಯಲ್ಲಿ ಅಂತಹ ಹೆಚ್ಚಿನ ಬೆಳವಣಿಗೆ ಆಗುವ ಸಾಧ್ಯತೆಗಳೂ ಇಲ್ಲ. ರಫ್ತು ಆಧಾರಿತ ಆರ್ಥಿಕ ಬೆಳವಣಿಗೆಯ ದಾರಿ ಹಿಡಿದಿರುವ ಭಾರತದ ಸರ್ಕಾರ ಆಶಾವಾದಿಯಾಗಿರಲು ಕಾರಣಗಳೇನೂ ಇಲ್ಲ.

ಸಿಗರೇಟು ಉದ್ದಿಮೆಯಿಂದ ಹೊರಹರಿಯಲಿರುವ ವಿದೇಶಿ ವಿನಿಮಯ

ಸಿಗರೇಟು ಉದ್ಯಮದಲ್ಲಿ ಶೇ 100 ರಷ್ಟು ವಿದೇಶಿ ಹೂಡಿಕೆಗೆ ಅನುಮತಿ ನೀಡಿರುವುದರಿಂದ ಈ ಉದ್ಯಮದ ಮೂಲಕ ವಿದೇಶಿ ವಿನಿಮಯ ದೇಶದಿಂದ ಹೊರಗೆ ಹರಿದುಹೋಗಲಿದೆ ಎಂದು ಹೇಳಲಾಗುತ್ತಿದೆ.

ವಿದೇಶಿ ಬ್ರ್ಯಾಂಡಿನ ಸಿಗರೇಟು ಗಳನ್ನು ತಯಾರಿಸಲು ವಿದೇಶೀ ತಂಬಾಕನ್ನು ಆಮದು ಮಾಡಿಕೊಳ್ಳ ಬೇಕಾಗಿದೆ. ಯಾಕೆಂದರೆ ದೇಶಿ ತಂಬಾಕಿನ ಗುಣ ವಿದೇಶಿ ಸಿಗರೇಟುಗಳಿಗೆ ಸೂಕ್ತವಾದದ್ದಲ್ಲ.

ಆಗ ಭಾರತ ಒಟ್ಟಾರೆ ತಂಬಾಕು ರಫ್ತು ಮಾಡುವ ಪ್ರಮಾಣಕ್ಕಿಂತ ಹೆಚ್ಚಿನ ಪ್ರಮಾಣ ದಲ್ಲಿ ಆಮದು ಮಾಡಿಕೊಳ್ಳ ಬೇಕಾಗ ಬಹುದು. ಅಂತರ್ರಾಷ್ಟ್ರೀಯ ವ್ಯಾಪಾರಸ್ಥರು ಬಹುರಾಷ್ಟ್ರೀಯ ಕಂಪನಿಗಳಿಗೆ ತಂಬಾಕು ಪೂರೈಸುವುದರಿಂದ ಅವರು ವಿದೇಶಿ ತಂಬಾಕನ್ನೇ ಪೂರೈಸುತ್ತಾರೆ. ಆಗ ದೇಶಿ ತಂಬಾಕು ಉದ್ಯಮ ತೀವ್ರ ಹೊಡೆತ ಅನುಭವಿಸ ಬೇಕಾಗುತ್ತದೆ.

ಕೈಗಾರಿಕಾ ಮಂತ್ರಾಲಯದ ಈ ನಿರ್ಧಾರ ದೇಶಿ ತಂಬಾಕು ಉದ್ಯಮವನ್ನು ಪೂರ್ತಿಯಾಗಿ ಹಾಳುಗೆಡುವುತ್ತದೆ, ಅದರಲ್ಲೂ ಬೀಡಿ ಉದ್ಯಮ ನಶಿಸಿ ಹೋಗುವ ಸ್ಥಿತಿ ಉಂಟಾಗುತ್ತದೆ ಎಂದು ಸಿಪಿಐ (ಎಂ)ನ ಪ್ರಧಾನ ಕಾರ್ಯದರ್ಶಿ ಹರ್ಕಿಶನ್ ಸಿಂಗ್ ಸುರ್ಜಿತ್ ಅಭಿಪ್ರಾಯ ಪಟ್ಟಿದ್ದಾರೆ. ಇದರಿಂದಾಗಿ ಬೀಡಿ ಉದ್ಯಮದ ಲಕ್ಷ ಲಕ್ಷ ಕಾರ್ಮಿಕರು ಮತ್ತು ತಂಬಾಕು ಬೆಳೆಗಾರರು ಹಾನಿ ಅನುಭವಿಸ ಬೇಕಾಗುತ್ತದೆ ಎಂದಿದ್ದಾರೆ ಅವರು.

ಶೇರು ಮಾರಾಟದ ಗೋಲ್‌ಮಾಲ್

ಕಂಟೇನರ್ ಕಾರ್ಪೋರೇಷನ್ ಆಫ್ ಇಂಡಿಯಾ ಎಂಬ ಸಾರ್ವಜನಿಕ ವಲಯದ ಉದ್ದಿಮೆಯ ಶೇರು ಮಾರಾಟವನ್ನು ಭಾರತ ಸರ್ಕಾರ ಪ್ರಾರಂಭಿಸಿದೆ. ಬುಕ್ ಬಿಲ್ಡಿಂಗ್ ವಿಧಾನದಲ್ಲಿ ಈ ಮಾರಾಟವನ್ನು ವಾರ್ ಬರ್ಗ್ಸ್ ದಿಲ್ಲಾನ್ ರೀಡ್ ಎಂಬ ವಿದೇಶಿ ಕಂಪನಿಯು ಮಾಡುತ್ತಿದೆ.

ಈ ಕಂಪನಿಯ ಶೇರಿನ ಸದ್ಯದ ಬೆಲೆ ರೂ. 430 ರಷ್ಟಿದ್ದರೆ 90 ಲಕ್ಷ ಶೇರುಗಳನ್ನು 250-260 ರೂ. ಬೆಲೆಯಲ್ಲಿ ಮಾರುವ ಲಕ್ಷಣಗಳಿವೆ.

ಈ ನಡುವೆ ಮರ್ಚೆಂಟ್ ಬ್ಯಾಂಕುಗಳು (ಶೇರು ಮಾರಾಟದ ವಹಿವಾಟು ಮಾಡುವವರು) ವಿದೇಶಿ ಕಂಪನಿಯೊಂದಕ್ಕೆ ಈ ಶೇರು ಮಾರಾಟದ ಕೆಲಸ ಒಪ್ಪಿಸಿರುವುದರಲ್ಲಿ ಗೋಲ್‌ಮಾಲ್ ನಡೆದಿದೆ ಎಂದು ಆರೋಪಿಸಿದ್ದಾರೆ.

ಈ ಆರೋಪ ತಮಗೆ ಲಾಭ ಮಾಡಿಕೊಳ್ಳುವ ಅವಕಾಶ ತಪ್ಪಿದ್ದಕ್ಕಾಗಿ ಇರಬಹುದಾದರೂ ಸರ್ಕಾರ ಈ ಶೇರುಗಳನ್ನು ಸರಿಯಾದ ರೀತಿಯಲ್ಲಿ ಮಾರಾಟ ಮಾಡುತ್ತಿಲ್ಲ (ಮೂಲತಃ ಈ ಮಾರಾಟವೇ ತಪ್ಪು ಎಂಬುದು ಬೇರೆ ವಿಷಯ) ಎಂಬುದು ಸ್ಪಷ್ಟವಾಗಿ ಗೊತ್ತಾಗುತ್ತದೆ.

ಸಾರ್ವಜನಿಕ ವಲಯದ ಉದ್ದಿಮೆಗಳ ಶೇರು ಮಾರಾಟ ಆದಾಗಲೆಲ್ಲ ಭ್ರಷ್ಟಾಚಾರದ ತಾಂಡವವಾಡಿದೆ. ಬಿಜೆಪಿ ಸರ್ಕಾರ ಈ ಕಾರ್ಯ ಮಾಡುವಾಗ ಅದು ಅತ್ಯಂತ ಹೆಚ್ಚು ಪ್ರಮಾಣದಲ್ಲಿರುವುದರಲ್ಲಿ ಅನುಮಾನವಿಲ್ಲ ಅಲ್ಲವೇ?

ಮಾಹಿತಿ ತಂತ್ರಜ್ಞಾನ ಸಾಲದ ಬಲೆ?

ಬೆಂಗಳೂರಿನಲ್ಲಿ ಐಟಿ ಕಾಮ್ '98 ಎಂಬ ಮಾಹಿತಿ ತಂತ್ರಜ್ಞಾನದ ಪ್ರದರ್ಶನ ಕಳೆದ ವಾರ ನಡೆಯಿತು. ಕಂಪ್ಯೂಟರ್ ಯುಗದ ಮಾಹಿತಿ ತಂತ್ರಜ್ಞಾನ ಉದ್ಯಮ ಇಂದು ಬಹಳ ಪ್ರಭಾವೀ ಉದ್ಯಮ. ಜಗತ್ತನೇ ಒಂದು ಹಳ್ಳಿಯಾಗಿಸಿದ ಉದ್ಯಮ ಇದು ಎಂದು ಹೇಳಲಾಗುತ್ತಿದೆ. ಏಕೆಂದರೆ ಮಾಹಿತಿಯ ವಿನಿಮಯವನ್ನು ಅದು ಅತ್ಯಂತ ಶೀಘ್ರಗೊಳಿಸಿದೆ. ದೇಶ ದೇಶಗಳ ನಡುವಿನ ದೂರವನ್ನು ಅದು ಇಲ್ಲವಾಗಿಸಿದೆ.

ಇಂತಹ ಉದ್ಯಮವನ್ನು ನಿಯಂತ್ರಿಸದೇ ಹೋದಲ್ಲಿ ಭಾರತದ ಆರ್ಥಿಕ ಸಾಲದ ಬಲೆಯೊಳಗೆ ಸಿಕ್ಕಿಕೊಳ್ಳಬಹುದು ಮತ್ತು ಊಹಿಸಲಾಗದ ಗಂಡಾಂತರಗಳನ್ನು ಎದುರಿಸಬೇಕಾಗಬಹುದು ಎಂದು ಈ ಪ್ರದರ್ಶನಕ್ಕೆ ಬಂದ ಡೆಲಿಗೇಟ್‌ಗಳು ಅಭಿಪ್ರಾಯ ಪಟ್ಟಿದ್ದಾರೆ.

ಅಭಿವೃದ್ಧಿಶೀಲ ದೇಶಗಳೆಲ್ಲ ಮಾಹಿತಿ ತಂತ್ರಜ್ಞಾನದ ವಿಷಯದಲ್ಲಿ ಅಭಿವೃದ್ಧಿ ಹೊಂದಿದ ದೇಶಗಳ ಮೇಲೆ ಅವಲಂಬಿಸಿರುವುದರಿಂದ ಅಭಿವೃದ್ಧಿ ಶೀಲ ದೇಶಗಳಿಂದ ಸಂಪತ್ತು ಹೊರಗೆ ಹರಿದುಹೋಗಬಹುದು ಎಂಬ ಎಚ್ಚರಿಕೆಯನ್ನು ಅವರು ನೀಡಿದ್ದಾರೆ.

ಇಂತಹ ಆತಂಕಕಾರಿ ಪರಿಸ್ಥಿತಿಯನ್ನು ಎದುರಿಸಲು ಸೂಕ್ತ ಯೋಜನೆಗಳನ್ನು ರೂಪಿಸಿಕೊಳ್ಳಬೇಕು ಎಂದು ಅಭಿವೃದ್ಧಿಶೀಲ ದೇಶಗಳ ಸರ್ಕಾರಗಳಿಗೆ ಈ ಸಭೆ ಸಲಹೆ ನೀಡಿದೆ. ವಿಶ್ವಸಂಸ್ಥೆಯ ಅಭಿವೃದ್ಧಿ ಸಂಘಟನೆ ಯುನಿಡೋದ ದೇಶಿ ಅಧ್ಯಕ್ಷ ಡಬ್ಲ್ಯು.ಎಸ್.ನಾನಯಕ್ಕಾರ ಈ ಘೋಷಣೆಯನ್ನು ಅನುಮೋದಿಸಿದ್ದಾರೆ.

ಇದಲ್ಲದೆ ಅಭಿವೃದ್ಧಿಶೀಲ ದೇಶಗಳು ಮಾಹಿತಿ ತಂತ್ರಜ್ಞಾನ ಬೆಳವಣಿಗೆಗೆ ಬೇಕಾದ ಅಂತರ್ರಚನಾ ಸೌಲಭ್ಯಗಳನ್ನು ಸೃಷ್ಟಿಸಿ ಎಲ್ಲ ನಾಗರೀಕರಿಗೆ ಇದರ ಉಪಯೋಗ ದೊರೆಯುವಂತೆ ಮಾಡಬೇಕು ಎಂದು ಡೆಲಿಗೇಟ್‌ಗಳ ಸಭೆ ಕರೆ ನೀಡಿದೆ. ಇಲ್ಲಿ ಪಟ್ಟಭದ್ರ ಹಿತಾಸಕ್ತಿಗಳಿಗೆ ಮಾತ್ರ ಅನುಕೂಲ ದೊರೆಯುವ ಸ್ಥಿತಿ ಹೋಗಿ ಎಲ್ಲ ನಾಗರೀಕರಿಗೆ ಅನುಕೂಲ/ಸೌಲಭ್ಯಗಳು ದೊರೆಯುವಂತಾಗಬೇಕೆಂದಿದ್ದಾರೆ ಅವರು.

ಮಾಹಿತಿ ತಂತ್ರಜ್ಞಾನ ಶೋಷಣಾತ್ಮಕ ವ್ಯವಸ್ಥೆಗೆ ಬೆಂಬಲವಾಗಿರುವ ಬದಲು ಶೋಷಣೆ ರಹಿತ ಸಮಾಜದತ್ತ ಹೆಜ್ಜೆ ಹಾಕಬೇಕೆಂಬ ಹಂಬಲದ ಬುನಾದಿಯೇ ಇದು?

ಕರ್ನಾಟಕದಲ್ಲಿ ಕಳೆದವಾರ

ನವೆಂಬರ್ 6

- ತೊಗರಿ ಬೆಳೆ ಪರಿಹಾರ ವಿವಾದ: ಮೇಲ್ಮನೆಯಿಂದ ಒಂದು ದಿನಕ್ಕೆ 19 ಕಾಂಗ್ರೆಸ್ ಸದಸ್ಯರ ಉಚ್ಚಾಟನೆ.
- ಸೇಡಂನ ಮಾಣಿಕಗಿರಿ ಬೆಟ್ಟ ಕುಸಿತ, ಆಳಂದದಲ್ಲಿ ನೆಲ ಕುಸಿತ, ಗೋಡೆಗಳಲ್ಲಿ ಬಿರುಕು.
- ನಕಲಿ ಮಾರ್ಕ್ಸ್‌ಕಾರ್ಡ ಅಂತರ್ರಾಷ್ಟ್ರೀಯ ಜಾಲ ಪತ್ತೆ.

ನವೆಂಬರ್ 7

- ಮೂಲಸೌಲಭ್ಯ ಅಭಿವೃದ್ಧಿ ನಿಗಮ ಸ್ಥಾಪನೆಗೆ ಸಚಿವ ಸಂಪುಟ ಒಪ್ಪಿಗೆ
- ಗೌರಿಬಿದನೂರಿನಲ್ಲಿ ಹರಿಜನ-ಸವರ್ಣೀಯರ ಘರ್ಷಣೆ, ಅಶ್ರುವಾಯು.
- ರಾಜ್ಯದ ನಾಗಣ್ಣ ಮೋನಪ್ಪ, ಬಡಿಗೇರ, ಆರ್.ವೀರಭದ್ರಚಾರಿ, ಎಸ್.ಪುಷ್ಪಮಾಲ, ಡಿ.ಎಂ.ಶಂಭು ಮತ್ತು ಚೆನ್ನಪ್ಪಾಚಾರ್ಯ ರುಗಳಿಗೆ ಶಿಲ್ಪಕಲಾ ಪ್ರಶಸ್ತಿ.
- ಶಾಸಕರ ಟೀಕೆ ನ್ಯಾಯಾಂಗದ ಮೇಲೆ ಧಾಳಿ ಎಂದು ನ್ಯಾಯಮೂರ್ತಿ ಸಲ್ಡಾನ

ನವೆಂಬರ್ 8

- ಮೂರು ಸಾವಿರ ಮಠ ಪೀಠಕ್ಕೆ ದಿಢೀರ್ ಆಕ್ರಮಣ. ಉತ್ತರಾಧಿಕಾರಿಯಾಗಿ ರುದ್ರಮುನಿ ದೇವರು. ಮೂಜಗಂ ಅಮರಣ ನಿರಶನ.
- ಆಹಾರ ನಿಗಮದಲ್ಲಿ ಕೋಟ್ಯಾಂತರ ರೂ. ಅವ್ಯವಹಾರ ಬಯಲಿಗೆ.
- ಹೊಸ ಜಿಲ್ಲೆಗಳ ವಾರ್ತಾ ಕಚೇರಿ ಅಸ್ತಿತ್ವಕ್ಕೆ.

ನವೆಂಬರ್ 9

- ಕಬ್ಬನ್ ಪಾರ್ಕ್ ವಿವಾದ-ನ್ಯಾಯಮೂರ್ತಿ ವಜಾಕ್ಕೆ ಸದನದಲ್ಲಿ ಒತ್ತಾಯ. ನ್ಯಾ.ಸಲ್ಡಾನ ವಿರುದ್ಧ ಹಕ್ಕುಚ್ಯುತಿ ಪ್ರಸ್ತಾಪ.
- ಮೂರು ಸಾವಿರ ಮಠ - ಗಣ್ಯರ ಸಂಧಾನ ವಿಫಲ, ಉಭಯ ಸ್ವಾಮಿಗಳಿಂದ ನಿರಶನ ಆರಂಭ
- ವಿದ್ಯುತ್ ಗ್ರಾಹಕರಿಂದ ಒಂದು ತಿಂಗಳ ಬಡ್ಡಿ ವಸೂಲಿ ಸಲ್ಲದು - ಹೈಕೋರ್ಟ್ ಆದೇಶ.

ನವೆಂಬರ್ 10

- ವಿಧಾನ ಸಭೆಯಲ್ಲಿ ಪಟೇಲ್ ನೇತೃತ್ವದ ಜನತಾದಳ ಸರ್ಕಾರದ ವಿರುದ್ಧದ ಅವಿಶ್ವಾಸ ನಿರ್ಣಯಕ್ಕೆ 83-133 ರಿಂದ ಸೋಲು.
- ಪಂಚಾಯತ್ ರಾಜ್ ವಿಧೇಯಕ ತಿದ್ದುಪಡಿಗೆ ಅಸ್ತು. ಜಿಲ್ಲಾ ಪಂಚಾಯತ್ ಪುನರ್ವಿಂಗಡಣೆ ಅಧಿಕಾರ ಜಿಲ್ಲಾಧಿಕಾರಿಗೆ.

ನವೆಂಬರ್ 11

- ಮೇಲ್ಮನೆ ವಿರೋಧ ಪಕ್ಷಗಳ ವಿರೋಧದಿಂದ ನಗರ ಭೂಮಿತಿ ಭೂಸುಧಾರಣೆ ತಿದ್ದುಪಡಿ ಮಸೂದೆ ವಾಪಸ್ಸು.
- ಕ್ರೈಸ್ತ ಸಮುದಾಯದ ಮೇಲಿನ ದೌರ್ಜನ್ಯ ವಿರೋಧಿಸಿ ಕ್ರೈಸ್ತರಿಂದ ಭಾರೀ ಮೆರವಣಿಗೆ, ರ್‍ಯಾಲಿ.
- ಶೌಚಾಲಯ ಹಣದ ಅವ್ಯವಹಾರ- ಕ್ರಮಕ್ಕೆ ಸದನ ಸಮಿತಿ ಶಿಫಾರಸು.

ಜನತೆಯಲ್ಲಿ ಜಾಗೃತಿ ಮೂಡಿಸಿದ ಜಾಥಾ

'ಐಕ್ಯರಂಗ' ದಲ್ಲಿ ಕಳೆದವಾರ ಪ್ರಕಟವಾದಂತೆ ಕಳೆದ ಹತ್ತು ದಿನಗಳಲ್ಲಿ ಕರ್ನಾಟಕ ರಾಜ್ಯಾದ್ಯಂತ ಒಂಭತ್ತು ಪ್ರಮುಖ ಜಾಥಾಗಳು ಜನರ, ದೇಶದ ಸಮಸ್ಯೆಗಳ ಬಗ್ಗೆ, ಅವಕ್ಕೆ ಕಾರಣಗಳು ಹಾಗೂ ಪರಿಹಾರ ನೀಡಬಲ್ಲ ಪರ್ಯಾಯ ನೀತಿಗಳ ಬಗ್ಗೆ ಪ್ರಚಾರಾಂದೋಲನ ನಡೆಸಿದವು. ಇವುಗಳಲ್ಲಿ ಬೆಂಗಳೂರಿನಿಂದ ಆರಂಭವಾದ ಮೂರು ಜಾಥಾಗಳಲ್ಲಿ ಒಂದರಲ್ಲಿ ಭಾಗವಹಿಸಿದ ಜನವಾದಿ ಮಹಿಳಾ ಸಂಘಟನೆಯ ಪ್ರಭಾ.ಎಸ್ ಇಲ್ಲಿ ಓದುಗರೊಂದಿಗೆ ತಮ್ಮ ಅನುಭವಗಳನ್ನು ಹಂಚಿಕೊಂಡಿದ್ದಾರೆ.

ಬೆಲೆಯೇರಿಕೆ, ಕೋಮುವಾದ, ಖಾಸಗೀಕರಣಗಳ ವಿರುದ್ಧ ಹೊರಟ 9 ಜಾಥಾಗಳ ಅಂಗವಾಗಿ ಬೆಂಗಳೂರಿನಿಂದ ನವೆಂಬರ್ 2 ರಂದು 3 ಜಾಥಾಗಳು ತುಮಕೂರು- ಬೆಂಗಳೂರು- ಕೋಲಾರಗಳಲ್ಲಿ ಸಂಚರಿಸುವ ಸಲುವಾಗಿ ಹೊರಟವು.

ಜನತೆಯ ಜ್ವಲಂತ ಸಮಸ್ಯೆಗಳ ವಿರುದ್ಧ ಜನಜಾಗೃತಿ ಮೂಡಿಸುವ ಪ್ರತಿಜ್ಞೆಯೊಂದಿಗೆ ಹೊರಟ ನಮ್ಮ ಜಾಥಾ ಬೆಂಗಳೂರಿನ ಹೃದಯ ಭಾಗವಾದ ಬಸ್‌ನಿಲ್ದಾಣದಿಂದ ಹೊರಟು, ಬೆಂಗಳೂರು ಉತ್ತರ, ಆನೇಕಲ್, ಚನ್ನಪಟ್ಟಣ, ರಾಮನಗರ, ಮಾಗಡಿ, ಕುಣಿಗಲ್, ತುರುವೇಕರೆ, ತಿಪಟೂರು, ಗುಬ್ಬಿ, ಚಿಕ್ಕನಾಯಕನ ಹಳ್ಳಿ ಮುಂತಾದ ತಾಲ್ಲೂಕು ಗಳಲ್ಲಿ ಸುಮಾರು ಒಂದು ಸಾವಿರ ಕಿಲೋಮೀಟರ್‌ಗಳಷ್ಟು ಸಂಚರಿಸಿ ಸುಮಾರು ಐವತ್ತು ಸಾವಿರ ಜನರನ್ನು ತಲುಪಲು ಸಾಧ್ಯವಾಗಿದೆ. 40 ಸಭೆಗಳನ್ನು ನಡೆಸಲಾಗಿದೆ.

ಜಾಥಾದಲ್ಲಿ ಸಿಐಟಿಯು, ಎಐಟಿಯುಸಿ, ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆ, ಎಐಎಂಎಸ್‌ಎಸ್, ಎಸ್‌ಎಫ್‌ಐ, ಎಐಡಿಎಸ್‌ಓ, ಡಿವೈಎಫ್‌ಐ, ಎಐಡಿವೈಓ, ಎಐಐಇಎ, ಎಐಬಿಇಎ ಮುಂತಾದ ಸಂಘಟನೆ ಗಳು ಪಾಲ್ಗೊಂಡಿದ್ದವು. ಈ ಜಾಥಾದ ನೇತೃತ್ವ ವನ್ನು ಸಿಐಟಿಯು ಬೆಂಗಳೂರು ಜಿಲ್ಲಾ ಕಾರ್ಯ ದರ್ಶಿ ಕಾ|| ಮೀನಾಕ್ಷಿ ಸುಂದರಂ ವಹಿಸಿದ್ದರು.

ಮಳೆಯಲ್ಲೂ ನಿಲ್ಲದ ಪ್ರಚಾರ

ಬೆಂಗಳೂರಿನಲ್ಲಿ ಒಂದೇ ಸಮನೆ ಸುರಿಯುತ್ತಿದ್ದ ಮಳೆಯಲ್ಲಿಯೇ ಜಾಥಾಗಳು ಉದ್ಘಾಟನೆಗೊಂಡವು. ಇಡೀ ದಿನ ಹಾಗೆಯೇ ಮರುದಿನವೂ ಸಹ ಬಿಡದ ಮಳೆಯಲ್ಲಿಯೇ ಜಾಥಾಗಳು ಪ್ರಚಾರ ನಡೆಸಿದವು. ಅಂಗಡಿಗಳ, ಮನೆಗಳ ಮುಂದೆ, ಬಸ್ ನಿಲ್ದಾಣಗಳಲ್ಲಿ ಜನ ನೆರೆದು ನಮ್ಮ ವಿಚಾರಗಳನ್ನು ಹಂಚಿಕೊಂಡರು. ದೇಶಪ್ರೇಮಿ, ಜನಪರ ಜಾಥಾ ಮಳೆಯಿಂದ ವಿಚಲಿತಗೊಳ್ಳದೆ ಮನೆಯಿಂದ ಮನೆಗೆ, ಊರಿನಿಂದ ಊರಿಗೆ ಸಂಚರಿಸಿತು.

ಜನರ ಜೊತೆಯಲ್ಲಿ ಹಂಚಿಕೊಂಡ ವಿಚಾರಗಳು

- *1991 ರಿಂದೀಚೆಗೆ ಪಿ.ವಿ.ನರಸಿಂಹರಾವ್ - ಮನಮೋಹನ ಸಿಂಗರು ಜಾರಿಗೆ ತಂದ ಹೊಸ ಆರ್ಥಿಕ ನೀತಿಗಳ ದುಷ್ಪರಿಣಾಮಗಳು. ಸುದೀರ್ಘ ಆಳ್ವಿಕೆ ನಡೆಸಿದ ಕಾಂಗ್ರೆಸ್ ಪಕ್ಷದ ಧೋರಣೆಗಳು.... ಜನವಿರೋಧಿ ನೀತಿಗಳು.*
- *ಕಾಂಗ್ರೆಸ್ ದುರಾಡಳಿತದ ವಿರುದ್ಧ ಜನತೆಯ ಐತಿಹಾಸಿಕ ತೀರ್ಪು ನಿರಂತರ ಏಕಪಕ್ಷಾಧಿಕಾರವನ್ನು ಕೊನೆಗೊಳಿಸಿ ಪರ್ಯಾಯ 'ಸಂಯುಕ್ತ ರಂಗ' ಸರ್ಕಾರವನ್ನು ಅಸ್ತಿತ್ವಕ್ಕೆ ತಂದ ಬಗೆ.*
- *ಬೆಂಬಲ ವಾಪಸ್ ಪಡೆದ ಅಧಿಕಾರದಾಹಿ ಕಾಂಗ್ರೆಸ್ ಪಕ್ಷದ ಬೇಜವಾಬ್ದಾರಿ ವರ್ತನೆ.*
- *ದೇಶ ಹನ್ನೊಂದೇ ತಿಂಗಳಲ್ಲಿ ಬೇಡವಾದ ಚುನಾವಣೆ ಎದುರಿಸಿದ್ದು. ಇದರಿಂದಾಗಿ ಸಂಯುಕ್ತ ರಂಗ ಅಧಿಕಾರ ಕಳೆದುಕೊಂಡದ್ದು*
- *ಇದೇ ಸಂದರ್ಭವನ್ನು ಬಳಸಿ "ಅನ್ನ ಹಳಸಿತ್ತು, ನಾಯಿ ಕಾದಿತ್ತು" ಎನ್ನುವ ಹಾಗೆ ಜನತೆಯ ಅಸಮಾಧಾನ, ಬೇಸರಗಳ ಲಾಭ ಪಡೆಯಲು ಕಾಯುತ್ತಿದ್ದ ಕೋಮುವಾದಿ ಬಿಜೆಪಿ ಪಕ್ಷದ ಆಕರ್ಷಣೀಯ ಘೋಷಣೆಗಳು*
- *ಬಿಜೆಪಿಯ ಸ್ವದೇಶಿ ನೀತಿಯ ನಿಜಸ್ವರೂಪ*
- *ಆರ್‌ಎಸ್‌ಎಸ್ ನಿರ್ದೇಶಿತ ಬಿಜೆಪಿಯ ಬಚ್ಚಿಟ್ಟ ಅಜೆಂಡಾಗಳು - ಹಿಂದುತ್ವ, ರಾಮ ಮಂದಿರ ಹೀಗೆ ಎಲ್ಲಾ ವಿಚಾರಗಳ ಕುರಿತು ಜನರಿಗೆ ವಿವರಿಸಲಾಯಿತು.*

ಅಗತ್ಯ ವಸ್ತುಗಳ ಬೆಲೆಯೇರಿಕೆಯ ವಿಷಯವನ್ನು ಹೆಚ್ಚು ಪ್ರಸ್ತಾಪಿಸಲಾಯಿತು. ಇದಕ್ಕೆ ಕಾರಣವಾದ ನೀತಿಗಳ ಬಗ್ಗೆ ಅದರಲ್ಲೂ ವಿಶೇಷವಾಗಿ ಪ್ರಸ್ತುತ ಕೇಂದ್ರ ಸರ್ಕಾರ ಅನುಸರಿಸುತ್ತಿರುವ ಜನವಿರೋಧಿ ನೀತಿಗಳ ಬಗ್ಗೆ ವಿವರಿಸಲಾಯಿತು.

ಹೆಗಡೆಯ ನರಿಬುದ್ಧಿ

ಶಿರಾದಲ್ಲಿ ಕಡಲೆಕಾಯಿ ಬೆಳೆದ ರೈತರ ಮೇಲಿನ ಗೋಲಿಬಾರ್, ದಿಢೀರನೆ ಬೆಲೆ ಕುಸಿತಕ್ಕೆ ಕಾರಣವಾದ ಬಿಜೆಪಿಯ ವರ್ತಕರ ಪರವಾದ ಧೋರಣೆ, ಎಣ್ಣೆ ಕಾಳುಗಳ ಆಮದಿಗೆ ಮುಕ್ತ ಅವಕಾಶ ನೀಡಿ ರಾಜ್ಯ ಸರ್ಕಾರದ ಮೇಲೆ ಗೂಬೆ ಕೂರಿಸಲು ಹೊರಟ ವಾಣಿಜ್ಯ ಮಂತ್ರಿ ರಾಮಕೃಷ್ಣ ಹೆಗಡೆ ರೈತರ ಪ್ರಾಣದ ಜೊತೆ ಚೆಲ್ಲಾಟವಾಡಿದ ಬಗೆ.... ಈ ವಿಚಾರಗಳು ಜನತೆಗೆ ಹೊಸದಾಗಿ ಕಂಡವು. ಪೋಲೀಸರು ಹಾಗೂ ವ್ಯಾಪಾರಿಗಳಷ್ಟೇ ರೈತರ ಸಾವಿಗೆ ಕಾರಣವೆಂದು ಬಗೆದಿದ್ದ ಸಹಸ್ರಾರು ಜನರಿಗೆ ಅದರ ಹಿಂದಿರುವ ನೀತಿಗಳ ಮನವರಿಕೆ ಮಾಡಿಕೊಡಲಾಯಿತು.

ಹಿಂದೆಂದೂ ಈ ದೇಶ ಕಂಡರಿಯದ ಈರುಳ್ಳಿ ಬೆಲೆ, ದಾಖಲಾದ ಉಪ್ಪಿನ ಬೆಲೆ, ಆಲೂಗಡ್ಡೆ, ತರಕಾರಿ ಬೆಲೆಗಳ ಬಗ್ಗೆ ಹೇಳುತ್ತಾ ರೈತನಿಗಲ್ಲ ಇದರ ಲಾಭ ಎನ್ನುವಾಗ ನೆರೆದ ಜನರ ಮುಖಗಳು ಕೋಪಗೊಂಡಂತೆಯೂ, ಕಣ್ಣೀರಾಗುವಂತೆಯೂ ಕಾಣುತ್ತಿದ್ದವು.

ಅಗತ್ಯ ವಸ್ತುಗಳ ಬೆಲೆಗಳನ್ನು ಇಳಿಸುತ್ತೇವೆ, ಪಡಿತರ ವ್ಯವಸ್ಥೆಯನ್ನು ಬಲಪಡಿಸುತ್ತೇವೆಂದು ಭರವಸೆಗಳನ್ನಿತ್ತು, ರಾಮರಾಜ್ಯದ ನಿರ್ಮಾಣ ಮಾಡುವ ಬೊಗಳೆ ಹೊಡೆದು ಅಧಿಕಾರ ಗಿಟ್ಟಿಸಿದ ಸರ್ಕಾರ ಈ ದೇಶದ ಇತಿಹಾಸದಲ್ಲಿಯೇ ಕಂಡರಿಯದಂತ ರೀತಿಯಲ್ಲಿ ಎಲ್ಲ ವಸ್ತುಗಳ ಬೆಲೆಗಳನ್ನು ಗಗನಕ್ಕೇರಿಸಿ ಹಸಿವು ಸಂಕಷ್ಟಗಳಲ್ಲಿ ನರಳುವಂತೆ ಮಾಡುತ್ತಿರುವ ಬಗ್ಗೆ ಜನತೆ 'ಮೂಕವೇದನೆ' ಅನುಭವಿಸುತ್ತಿರುವುದು ಸ್ಪಷ್ಟವಾಯಿತು. ಅರಿಯದೆ ತಪ್ಪು ಮಾಡಿದ ಮಕ್ಕಳು ಮೌನವಾಗಿರುವಂತೆ ಎಲ್ಲಾ ವಿಚಾರಗಳನ್ನು ಕೇಳಿಕೊಂಡ ಜನತೆ ಒಳಗೊಳಗೆ ಪಶ್ಚಾತಾಪ ಪಡುತ್ತಾ ಮಿಂಚಿಹೋದ ಘಟನೆಗಳಿಗಾಗಿ ಮರುಗುತ್ತಿರುವಂತೆ ಕಂಡಿದ್ದು ಸ್ಪಷ್ಟ.

50 ಜನರಿಂದ ಹಿಡಿದು ಎರಡು ಸಾವಿರದವರೆಗೆ ಜನ ನಿಂತು ನಮ್ಮ ಭಾಷಣಗಳನ್ನು, ಮಾತುಗಳನ್ನು ಆಲಿಸಿದ್ದಾರೆ. ಎಲ್ಲಿಯೂ ಕೂಡ ಒಂದು ಸಣ್ಣ ಅಪಸ್ವರವೂ ಕೇಳಲಿಲ್ಲ. ಬಿಜೆಪಿಯನ್ನು ಅದರ 'ಸಮರ್ಥ' ಪ್ರಧಾನಿಯನ್ನು ಬಯ್ಯುವುದು ಬೇಡವೆಂದು ಯಾರೂ ಹೇಳಲಿಲ್ಲ. ಬಿಜೆಪಿಯ 'ದಕ್ಷ' ಆಡಳಿತವನ್ನು ಸಮರ್ಥಿಸುವ ಒಬ್ಬ ಪ್ರಜೆಯೂ ಕಾಣಲಿಲ್ಲ. ವಾಜಪೇಯಿ ಕೇವಲ ಮುಖವಾಡವೆಂದು ಜನ ನಿರ್ಧರಿಸಿದಂತಿತ್ತು. ಹಿಂದುತ್ವ ಅಜೆಂಡಾವನ್ನು ಪ್ರೋತ್ಸಾಹಿಸುವ, ಹಿಂದೂಗಳ ರಾಷ್ಟ್ರ ನಿರ್ಮಾಣವನ್ನು ಬೆಂಬಲಿಸುವ ಒಬ್ಬ ಕಾರ್ಮಿಕನೂ, ಒಬ್ಬ ರೈತನೂ, ಒಬ್ಬ ಮಹಿಳೆಯೂ ಒಬ್ಬ ಯುವಕನೂ, ಒಬ್ಬ ವಿದ್ಯಾರ್ಥಿಯೂ ಕಾಣಲಿಲ್ಲ.

ಸಾಮಾನ್ಯ ಜನ ಸಾಮರಸ್ಯಕ್ಕಾಗಿಯೇ ಕಾತರಿಸುತ್ತಿರುವುದು ಬಹುಶಃ ಕೋಮುವಾದಿ ಬಿಜೆಪಿಗೆ ನುಂಗಲಾರದ ತುತ್ತಾಗಬಹುದು. ಅನಗತ್ಯ ಕೋಮುಗಲಭೆಗಳನ್ನು ಹುಟ್ಟುಹಾಕಲು-ಮತೀಯ ಗಲಭೆಗಳನ್ನು ಹುಟ್ಟು ಹಾಕಲು ಬಿಜೆಪಿ ಹಾಗೂ ಆರೆಸ್ಸೆಸ್ ಅಪಾರ ಶ್ರಮ ತೆಗೆದುಕೊಂಡಿವೆಯೆಂದು ಯಾರಿಗಾದರೂ ಅರ್ಥವಾಗುವ ವಿಷಯ. ನವಿರಾದ ಧಾರ್ಮಿಕ ಭಾವನೆಗಳನ್ನು ಕೆರಳಿಸಿ ರಾಮನ ದಾಳದೊಂದಿಗೆ ಅಧಿಕಾರದ ಕುರ್ಚಿಗೇರಿದ ಬಿಜೆಪಿ - ಸಂಘ ಪರಿವಾರದ 'ಬಯಕೆಗಳು' ಹೆಚ್ಚು ಕಾಲ ಬಾಳುವುದಿಲ್ಲವೆಂದು ಸ್ಪಷ್ಟವಾಯಿತು.

8 ತಿಂಗಳ ಹಿಂದಷ್ಟೆ ನಡೆದ ಲೋಕಸಭಾ ಚುನಾವಣೆಯಲ್ಲಿ ಬಿಜೆಪಿ ಪಕ್ಷದ ಗೋಸುಂಬೆತನದ ಬಗ್ಗೆ, ದೇಶ ವಿರೋಧಿ ಅಜೆಂಡಾಗಳ ಬಗ್ಗೆ ವಿವರಿಸುವಾಗ ಬಿಜೆಪಿ 'ನಿಜಸ್ವರೂಪ' ಅರಿಯದ ಕೆಲ ಕಾರ್ಯಕರ್ತರು ನಮ್ಮ ಮೇಲೆರಗಿ ಹಲ್ಲೆ ನಡೆಸಲು ಮುಂದಾದ್ದನ್ನು ನೆನಪಿಸಿಕೊಂಡ ನಾನು ಜನವಿರೋಧಿ ಬಿಜೆಪಿ ಹಾಗೂ ಮಿತ್ರ ಕೂಟ ಎಷ್ಟು ಬೇಗ ಬಟಾಬಯಲಾಗಿದೆ, ಇವರನ್ನು ಎಷ್ಟು ಖಾರವಾಗಿ ಟೀಕಿಸಿದರೂ ಬೇಸರಗೊಂಡು ಪ್ರತಿಕ್ರಿಯಿಸಿದ ಒಬ್ಬರೂ ಇಲ್ಲವಲ್ಲ ಎಂದುಕೊಂಡೆ. ಕೆಲಸ ಮಾಡಿದರೆ ಜನ ನಮ್ಮೊಂದಿಗಿದ್ದಾರೆ ಎನ್ನುವ ಬಲವಾದ ವಿಶ್ವಾಸ ನಮ್ಮಲ್ಲಿ ಮೂಡಿಬಂತು.

ಜನರ ಮನದಲ್ಲಿ ಭುಗಿಲೆದ್ದಿರುವ ಕ್ರೋಧ, ನಿರಾಶೆ, ಅಸಮಾಧಾನಗಳು ಚಳುವಳಿಯಾ[illegible] ಮೂಡಿಬರಬೇಕಿದೆ. ಚಳುವಳಿಯ[illegible] ಹಾಕುವ ಹಾಗೆಯೇ ನೇತೃತ್ವ ನೀಡುವ ಜ[illegible] ಎಡಪಕ್ಷಗಳ ಮೇಲಿದೆ. ಇಲ್ಲವಾದ[illegible] ಹೋರಾಟ ಬೆಳೆದು ಬರಬೇಕಾದ ಜಾಗದಲ್ಲಿ ಶಿರಾದಂತಹ ಘಟನೆಗಳು ಮರುಕ[illegible]ಸುತ್ತಲೇ ಇರುತ್ತವೆ.

ಜನರ ಸ್ಥಳೀಯ ಸಮಸ್ಯೆಗಳಿಂದ ಹಿಡಿ[illegible] ಜನತೆಯನ್ನು ಬಾಧಿಸುವ ಸರ್ಕಾರದ ನೀತಿಗಳವರೆಗೆ ಸಾಮೂಹಿಕ ಸಂಘಟನೆಗಳು, ಎಡಪಕ್ಷಗಳು ನಿರ್ಣಾಯಕ ಪಾತ್ರ ವಹಿಸಬೇಕಾಗಿದೆ. ಈ ಮೂಲಕ ಜನತೆಯ ವಿಶ್ವಾಸಗಳಿಸಿ ಎಡ ಹಾಗೂ ಪ್ರಜಾಸತ್ತಾತ್ಮಕ ಶಕ್ತಿಗಳನ್ನು ಬಲಪಡಿಸಬೇಕಾಗಿದೆ. ಜನವಿರೋಧಿ ಸರ್ಕಾರಗಳಿಗೆ ಪಾಠ ಕಲಿಸಬೇಕಾಗಿದೆ. ○

ವಿಮಾ ಖಾಸಗೀಕರಣ ಪ್ರಯತ್ನದ ವಿರುದ್ಧ ದೇಶಾದ್ಯಂತ ಯಶಸ್ವಿ ಧರಣಿ

ಬಿಜೆಪಿ ನೇತೃತ್ವದ ಸರಕಾರ ಮತ್ತೆ ವಿಮಾ ಉದ್ದಿಮೆಯನ್ನು ದೇಶಿ-ವಿದೇಶಿ ಖಾಸಗಿಯವರಿಗೆ ತೆರೆಯುವುದನ್ನು ವಿರೋಧಿಸಿ ಒಂದು ಲಕ್ಷ ವಿಮಾ ನೌಕರರು ದೇಶಾದ್ಯಂತ ನವೆಂಬರ್ 7 ರಂದು ಧರಣಿ ಸತ್ಯಾಗ್ರಹ ನಡೆಸಿದರು. ಕಳೆದ ಏಳು ವರ್ಷಗಳಿಂದ ಈ ಖಾಸಗೀಕರಣ-ವಿರೋಧಿ ಹೋರಾಟದಲ್ಲಿ ನಿರತರಾಗಿರುವ ವಿಮಾ ನೌಕರರ ಹೋರಾಟ ರಾಷ್ಟ್ರೀಯ ಸಾಮೂಹಿಕ ಸಂಘಟನೆಗಳ ಬೇಡಿಕೆಯ ಪ್ರಸಕ್ತ ಚಳುವಳಿಯ ಹಿನ್ನೆಲೆಯಲ್ಲಿ ಇನ್ನಷ್ಟು ಪ್ರಖರಗೊಂಡಿರುವುದು ರಾಜ್ಯದ ಹಾಗೂ ದೇಶದ ಎಲ್ಲೆಡೆಗಳಿಂದ ಬರುತ್ತಿರುವ ವರದಿಗಳಿಂದ ಸ್ಪಷ್ಟವಾಗಿದೆ.

ಬೆಂಗಳೂರಿನಲ್ಲಿ ನವೆಂಬರ್ 7 ರ ಮಧ್ಯಾಹ್ನ 2.30 ರಿಂದ 6 ಗಂಟೆಯ ವರೆಗೆ ಮಹಾತ್ಮಗಾಂಧಿಯವರ ಪ್ರತಿಮೆಯ ಎದುರು ನಡೆದ ಧರಣಿ ಸತ್ಯಾಗ್ರಹದಲ್ಲಿ ಐನೂರಕ್ಕೂ ಹೆಚ್ಚು ನೌಕರರು ಭಾಗವಹಿಸಿದರು, ಅಪಾರ ಸಂಖ್ಯೆಯಲ್ಲಿ ಮಹಿಳಾ ನೌಕರರು ಹಾಗೂ ನೌಕರರ ಕುಟುಂಬದವರು ಭಾಗವಹಿಸಿದ್ದು ಈ ಧರಣಿಯ ವೈಶಿಷ್ಟ್ಯವಾಗಿತ್ತು. ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯ ಎಸ್.ವೈ.ಗುರುಶಾಂತ್, ಜನತಾದಳ ಬೆಂಗಳೂರು ನಗರ ವಿಭಾಗದ ಉಪಾಧ್ಯಕ್ಷ ರತನ್‌ಸಿಂಗ್ ಧರಣಿ ನಿರತ ನೌಕರರನ್ನುದ್ದೇಶಿಸಿ ಮಾತನಾಡಿ ತಮ್ಮ ಪಕ್ಷಗಳ ಬೆಂಬಲವನ್ನು ಸೂಚಿಸಿದರು. ಬಿಜೆಪಿ, ಕಾಂಗ್ರೆಸ್ ಪಕ್ಷದ ಮುಖಂಡರನ್ನು ಆಹ್ವಾನಿಸಿದ್ದರೂ ಅವರು ಬರಲಿಲ್ಲ. ಸಿಐಟಿಯು ರಾಜ್ಯಕಾರ್ಯದರ್ಶಿ ವಿ.ಜೆ.ಕೆ.ನಾಯರ್, ನಿವೃತ್ತ ವಿಮಾ ನೌಕರರ ಸಂಘದ ಅಖಿಲ ಭಾರತ ಕಾರ್ಯದರ್ಶಿ ಎಂ.ಬಿ.ಶಂಕರ್, ಬ್ಯಾಂಕ್ ನೌಕರರ ಒಕ್ಕೂಟ ಬಿ.ಇ.ಎಫ್.ಐ. ಮುಖಂಡ ರತ್ನಾಕರ ಶೆಟ್ಟಿ, ಅಂಚೆ ನೌಕರರ ಸಂಘದ ಹೆಚ್.ಎಸ್. ಮಂಜುನಾಥ್, ಟೆಲಿಕಾಂ ನೌಕರರ ಸಂಘದ ಹೆಚ್.ಸಿ.ಪ್ರಕಾಶ್, ವೈದ್ಯಕೀಯ ಪ್ರತಿನಿಧಿಗಳ ಸಂಘಟನೆಯ ಜೆ.ನಾಗೇಶ್, ಕರ್ನಾಟಕ ಪ್ರಾಂತ ರೈತ ಸಂಘದ ಪ್ರಧಾನ ಕಾರ್ಯದರ್ಶಿ ಪಿ.ಜಗನ್ನಾಥ್, ಇನ್ನೊಬ್ಬ ರೈತ ಮುಖಂಡ ಎಂ.ವಿ.ಗೋಪಾಲ್, ಜನವಾದಿ ಮಹಿಳಾ ಸಂಘಟನೆಯ ಅಧ್ಯಕ್ಷೆ ಕೆ.ಎಸ್.ವಿಮಲಾ ಹಾಗೂ ಎಸ್.ಎಫ್.ಐ.ನ ಬಸಮ್ಮ ಧರಣಿ ಕುಳಿತ ನೌಕರರಿಗೆ ತಮ್ಮ ಸೌಹಾರ್ದ ಬೆಂಬಲವನ್ನು ಸೂಚಿಸಿದರು.

ಧಾರವಾಡ, ರಾಯಚೂರು, ಉಡುಪಿ, ಮೈಸೂರು, ಬೆಳಗಾವಿಗಳಲ್ಲೂ ಯಶಸ್ವಿ ಧರಣಿ ಕಾರ್ಯಕ್ರಮ ನಡೆದ ಸುದ್ದಿಗಳು ಬರುತ್ತಿವೆ.

ಬಿಜೆಪಿ ಮುಖಂಡರು ಸ್ವತಃ ಒಂದು ವರ್ಷದ ಹಿಂದೆ ವಿರೋಧಿಸಿದ್ದ ವಿಮಾ ಹತೋಟಿ ಪ್ರಾಧಿಕಾರ (ಐಆರ್‌ಎ) ಮಸೂದೆಯನ್ನು ಈಗ ತಾವೇ ತರಲು ತರಾತುರಿಯಿಂದ ಪ್ರಯತ್ನ ನಡೆಸುತ್ತಿರುವ ಹಿನ್ನೆಲೆಯಲ್ಲಿ ವಿಮಾ ನೌಕರರು ಹಮ್ಮಿಕೊಂಡ ಪ್ರತಿಭಟನೆಯ ಕಾರ್ಯಕ್ರಮದ ಇತರ ಅಂಶಗಳೆಂದರೆ ಈಗ ವ್ಯಾಪಕವಾಗಿ ನಡೆಯುತ್ತಿರುವ ಅಂಚೆಕಾರ್ಡು ಚಳುವಳಿ, ಎಲ್ಲಾ ಸಂಸತ್ ಸದಸ್ಯರ ಭೇಟಿ ಮಾಡಿ ಖಾಸಗೀಕರಣ ಪ್ರಯತ್ನವನ್ನು ವಿರೋಧಿಸುವಂತೆ ಮನವಿ ಪತ್ರ ಸಲ್ಲಿಕೆ, ನವೆಂಬರ್ 13 ರಂದು ಮತಪ್ರದರ್ಶನ ಹಾಗೂ ನವೆಂಬರ್ 20 ರಂದು ಒಂದು ಗಂಟೆಯ ಮುಷ್ಕರವಲ್ಲದೆ ಡಿಸೆಂಬರ್ 11 ರಂದು ರಾಷ್ಟ್ರೀಯ ವೇದಿಕೆಯ ಕರೆಯ ಮೇರೆಗೆ ಒಂದು ದಿನದ ಮುಷ್ಕರಕ್ಕೆ ವಿಮಾ ನೌಕರರು ಸಿದ್ಧತೆ ನಡೆಸುತ್ತಿದ್ದಾರೆ. ಬೆಂಗಳೂರಿನಿಂದ ಈಗಾಗಲೇ ವಿಮಾ ಖಾಸಗೀಕರಣವನ್ನು ವಿರೋಧಿಸಿ ಸುಮಾರು 30000 ಅಂಚೆ ಕಾರ್ಡುಗಳನ್ನು ಪ್ರಧಾನ ಮಂತ್ರಿಗಳಿಗೆ ಕಳಿಸಲಾಗಿದೆ ಎಂದು ತಿಳಿದುಬಂದಿದೆ.

ವಾರಾಹಿ ನೀರಾವರಿ ಯೋಜನೆ ತ್ವರಿತ ಗೊಳಿಸುವಂತೆ ಮೆರವಣಿಗೆ

ರೈತ ಸಂಘದ ನೇತೃತ್ವದಲ್ಲಿ ಬೃಹತ್ ಮತಪ್ರದರ್ಶನ ಸಾರ್ವಜನಿಕ ಸಭೆ

ಅಕ್ಟೋಬರ್ 28 ರಂದು ತಾಲೂಕಿನ ಸಿದ್ಧಾಪುರದಲ್ಲಿ ಕರ್ನಾಟಕ ಪ್ರಾಂತ ರೈತ ಸಂಘದ ತಾಲೂಕು ಸಮಿತಿ ನೇತೃತ್ವದಲ್ಲಿ ವಾರಾಹಿ ನೀರಾವರಿ ಯೋಜನೆಯ ಸಹಾಯಕ ಕಾರ್ಯಪಾಲಕ ಅಭಿಯಂತರ ಕಛೇರಿಯ ಎದುರು ರೈತ ಕೃಷಿಕಾರ್ಮಿಕರ ಬೃಹತ್ ಪ್ರತಿಭಟನಾ ಮತಪ್ರದರ್ಶನ ನಡೆಯಿತು. ವಾರಾಹಿ ನೀರಾವರಿ ಯೋಜನೆಯನ್ನು ವಿಳಂಬ ಮಾಡದೇ ಪೂರ್ಣಗೊಳಿಸುವಂತೆ ಒತ್ತಾಯಿಸಿ ರಾಜ್ಯದ ಮುಖ್ಯ ಮಂತ್ರಿ ಯವರಿಗೆ ಹಾಗೂ ಪ್ರಧಾನ ಮಂತ್ರಿಯವರಿಗೆ ಮನವಿಗಳನ್ನು ಸಲ್ಲಿಸಲಾಯಿತು. ಪ್ರತಿಭಟನಾ ಮತ ಪ್ರದರ್ಶನದ ನೇತೃತ್ವವನ್ನು ಅಬ್ರಹಾಂ ಕರ್ಕಡ ಕೆ. ಶಂಕರ್, ಯು.ದಾಸ ಬಂಡಾರಿ, ರಾಜೀವ ಪಡುಕೋಣೆ, ಗೋವಿಂದ ಶೆಟ್ಟಿಗಾರ, ಎಚ್. ನರಸಿಂಹ ಬಿ.ಬಿ. ಮಹಮ್ಮದ್ ಶೀನ ಮರಕಾಲ ಮತ್ತು ಕರಿಯ ದೇವಾಡಿಗರವರು ವಹಿಸಿದರು.

ಸಂಜೆ ಸಿದ್ಧಾಪುರದ ಬಸ್ ನಿಲ್ದಾಣದ ಬಳಿ ಬೃಹತ್ ಸಾರ್ವಜನಿಕ ಸಭೆ ನಡೆಯಿತು ತಾಲೂಕಾ ರೈತ ಸಂಘದ ಅಧ್ಯಕ್ಷರಾದ ಗೋವಿಂದ ಶಿಬ್ಲಿಗಾರ ಸಾರ್ವಜನಿಕ ಸಭೆಯ ಅಧ್ಯಕ್ಷತೆ ವಹಿಸಿದರು. ರೈತ ಸಂಘದ ಕಾರ್ಯದರ್ಶಿ ಯು. ದಾಸ ಭಂಡಾರಿಯವರು ವಾರಾಹಿ ನೀರಾವರಿ ಯೋಜನೆಯ ಕುರಿತು, ರೈತ ಕೃಷಿಕೂಲಿಗಾರರ ಚಳುವಳಿಯ ಮಹತ್ವವನ್ನು ವಿವರಿಸಿ ಎಲ್ಲರನ್ನು ಸ್ವಾಗತಿಸಿದರು.

ಸಾರ್ವಜನಿಕ ಸಭೆಯನ್ನುದ್ದೇಶಿಸಿ ಸಿಪಿಐ(ಎಂ) ಕುಂದಾಪುರ ತಾಲೂಕು ಸಮಿತಿಯ ಕಾರ್ಯದರ್ಶಿ ಕೆ. ಶಂಕರ್‌ರವರು ಮಾತನಾಡಿ, ವಾರಾಹಿ ನೀರಾವರಿ ಯೋಜನೆಯ ಮಹತ್ವವನ್ನು ಜನಸಾಮಾನ್ಯರು ಹಾಗೂ ರೈತರು ತಿಳಿದುಕೊಂಡು ಸರಕಾರವನ್ನು ಒತ್ತಾಯಿಸುವ ಚಳುವಳಿ ತೀವ್ರ ಗೊಳಿಸಬೇಕೆಂದು 1980 ರಲ್ಲಿ ಈ ಯೋಜನೆಗೆ ಶಿಲಾನ್ಯಾಸಗೈದು 1991 ರ ವರೆಗೂ ಆರಂಭವಾಗದೇ 1992 ರಲ್ಲಿ ಕಾಮಗಾರಿ ಉದ್ಘಾಟನೆ ನಡೆದು ಅಲ್ಲಿಂದ ಇಲ್ಲಿಯವರೆಗೆ ಕುಂಟುತ್ತಾ ಸಾಗುತ್ತಿರುವುದನ್ನು ಖಂಡಿಸಿದರು. ಜನಪ್ರತಿನಿಧಿಗಳು ಹಾಗೂ ಸರಕಾರವನ್ನು ಎಚ್ಚರಿಸುವ ಚಳುವಳಿಯು ಬೆಳೆದು ಬರಬೇಕೆಂದು ಹೇಳಿದರು.

ಜಿಲ್ಲಾ ರೈತ ಸಂಘದ ಕಾರ್ಯದರ್ಶಿ ಅಬ್ರಹಾಂ ಕರ್ಕಡರವರು ಮಾತನಾಡುತ್ತಾ ವಾರಾಹಿ ನೀರಾವರಿ ಯೋಜನೆಯನ್ನು ಪೂರ್ಣಗೊಳಿಸುವ ಬಗ್ಗೆ ಜನಪ್ರತಿನಿಧಿಗಳು, ಇನ್ನೂ ವಿಳಂಬ ಮಾಡಿದರೆ ಹೆಚ್ಚು ವೆಚ್ಚವಾಗುವುದರೊಂದಿಗೆ ಉಡುಪಿ ಜಿಲ್ಲೆಯ 66 ಗ್ರಾಮದ ರೈತರಿಗೆ ದ್ರೋಹ ಮಾಡಿದಂತಾಗುತ್ತದೆಂದು ಹೇಳಿದರು. ಜನಸಾಮಾನ್ಯರು ಹಾಗೂ ರೈತರು ಜಾಗ್ರತರಾಗಿ ಇಂತಹ ಜನವಿರೋಧಿ ನೀತಿಯ ವಿರುದ್ಧ ಹೋರಾಡಲು ಮುಂದಾಗಬೇಕೆಂದರು.

ಗೋವಿಂದ ಶೆಟ್ಟಿಗಾರರು ಅಧ್ಯಕ್ಷತೆ ವಹಿಸಿದ್ದರು.

ರೈತ ಸಂಘದ ತಾಲೂಕು ಜತೆ ಕಾರ್ಯದರ್ಶಿಯವರಾದ ರಾಜೀವ ಪಡುಕೋಣೆ ವಂದಿಸಿದರು.

ಸಾರ್ವಜನಿಕ ಮತ್ತು ಖಾಸಗಿ ಕ್ಷೇತ್ರ

ಲಾಭ ಯಾರಿಗೆ? ನಷ್ಟ ಯಾರಿಗೆ?

ಸಿ.ಆರ್.ಭಟ್

1991 ರಲ್ಲಿ ಐ.ಎಂ.ಎಫ್. ಮತ್ತು ಜಾಗತೀಕ ಬ್ಯಾಂಕ್‌ಗಳ ಶರತ್ತುಗಳಿಗೆ ಶರಣಾಗಿ ಖಾಸಗೀಕರಣ ಉದಾರೀಕರಣ ಹಾಗೂ ಜಾಗತೀಕರಣ ಆಧರಿತ ಆರ್ಥಿಕ ನೀತಿ ಜಾರಿಗೊಳಿಸಿದಂದಿನಿಂದ, ಸಾರ್ವಜನಿಕ ಕ್ಷೇತ್ರದ ಮೇಲೆ ಸತತ ಗದಾ ಪ್ರಹಾರ ನಡೆಯುತ್ತಿದೆ. ಸಾರ್ವಜನಿಕ ಕ್ಷೇತ್ರ ಅಂದರೆ, ಅದಕ್ಷತೆಯ ಹಾಗೂ ನಷ್ಟದ ಸಂಕೇತ ಎಂದೂ, ಖಾಸಗಿ ಕ್ಷೇತ್ರ ಅಂದರೆ ದಕ್ಷತೆಯ ಹಾಗೂ ಲಾಭದ ಸಂಕೇತ ಎಂದೂ ದೇಶದ ಗುತ್ತೇದಾರಿ ಸಂಸ್ಥೆಗಳು ಮತ್ತು ವಿದೇಶಿ ಬಹುರಾಷ್ಟ್ರೀಯ ಕಂಪನಿಗಳು ಸುಮೂಹ ಮಾಧ್ಯಮಗಳ ಮೂಲಕ ಮತ್ತು ಅವುಗಳ ಬಾಡಿಗೆ ಬುದ್ಧಿಜೀವಿಗಳ ಮೂಲಕ ವ್ಯವಸ್ಥಿತವಾಗಿ ಪ್ರಚಾರ ಪ್ರಾರಂಭಿಸಿವೆ. ಒಂದು ವಿಷಯದ ಕುರಿತು ನೂರಾರು ಬಾರಿ ಸುಳ್ಳು ಹೇಳುತ್ತಾ, ಅದೇ ನಿಜ ಎಂದು ನಂಬಿಸಲಾಗುತ್ತಿದೆ.

ಜನರ ತೆರಿಗೆ, ಉಳಿತಾಯ ಪರಿಶ್ರಮಗಳಿಂದ ಸ್ವಾತಂತ್ರ್ಯಾನಂತರ ಕಟ್ಟಿ ಬೆಳೆಸಿದ ಸಾರ್ವಜನಿಕ ಕ್ಷೇತ್ರ ದೇಶದ ಆರ್ಥಿಕ ಸ್ವಾವಲಂಬನೆಗೆ ಜನಕಲ್ಯಾಣಕ್ಕೆ ಮತ್ತು ಖಾಸಗೀ ಕ್ಷೇತ್ರದ ಅಭಿವೃದ್ಧಿಗೂ ತನ್ನ ಅಪೂರ್ವ ಕೊಡುಗೆ ನೀಡಿರುವುದನ್ನು ಸಧ್ಯ ಜನರಿಂದ ಸಂಪೂರ್ಣವಾಗಿ ಮರೆಮಾಚಲಾಗುತ್ತಿದೆ. ನಾಯಿಗೆ ಕೆಟ್ಟ ಹೆಸರು ಇಟ್ಟು ಕೊಲ್ಲುವಂತೆ, ಸಾರ್ವಜನಿಕ ಕ್ಷೇತ್ರವನ್ನು ಅವಹೇಳನ ಮಾಡಿ ಅದನ್ನು ನಾಶ ಮಾಡಿ ಖಾಸಗಿ ಕ್ಷೇತ್ರದ ಲಾಭ ಬಡುಕ ಹದ್ದುಗಳಾದ ದೇಶಿಯ ಗುತ್ತೆದಾರಿ ಸಂಸ್ಥೆಗಳಿಗೆ ಮತ್ತು ವಿದೇಶಿ ಬಹು ರಾಷ್ಟ್ರೀಯ ಕಂಪನಿಗಳಿಗೆ ಹಂಚಿಕೊಡುವ ಪ್ರಕ್ರಿಯೆ ನಡೆಯುತ್ತಿದೆ. ಇದುವರೆಗೆ “ಸ್ವದೇಶಿ” ಮುಖವಾಡ ಹೊತ್ತ ಬಿ.ಜೆ.ಪಿ. ಈಗ ಕೇಂದ್ರದಲ್ಲಿ ಅಧಿಕಾರಕ್ಕೆ ಬಂದಂದಿನಿಂದ ಹಿಂದಿಗಿಂತಲೂ ಹೆಚ್ಚು ಶೀಘ್ರವಾಗಿ ಮತ್ತು ವ್ಯಾಪಕವಾಗಿ ಸಾರ್ವಜನಿಕ ಕ್ಷೇತ್ರವನ್ನು ಹಾಳುಗೆಡವಲು ಸಿದ್ಧತೆ ನಡೆಸುತ್ತಿದೆ. ಈ ಪ್ರಕ್ರಿಯೆಯ ಉಸ್ತುವಾರಿಯನ್ನು ತನ್ನ ಅಧ್ಯಕ್ಷತೆಯಲ್ಲಿಯೇ ನಡೆಸುವುದಾಗಿ ಪ್ರಧಾನಿ ವಾಜಪೇಯಿ ಇತ್ತಿಚೆಗೆ ನಡೆದ ಭಾರತದ ಕೈಗಾರಿಕೋದ್ಯಮಿಗಳ ಮಹಾ ಅಧಿವೇಶನದಲ್ಲಿ ಆಶ್ವಾಸನೆ ನೀಡಿದ್ದಾರೆ.

ಸಾರ್ವಜನಿಕ ಕ್ಷೇತ್ರದಲ್ಲಿ ಎಲ್ಲವೂ ಸರಿ ಇದೆ, ಅದರ ದಕ್ಷತೆ ಹೆಚ್ಚಿಸಲಾಗದು ಎಂದು ಯಾರೂ ವಾದಿಸುತ್ತಿಲ್ಲ. ಆದರೆ ಈ ಕ್ಷೇತ್ರದ ಸಂಸ್ಥೆಗಳಿಗೆ ಅಗತ್ಯವಿದ್ದ ಆಂತರಿಕ ಸ್ವಾಯತ್ತತೆ ಕೊಡದೇ ಅವುಗಳ ಆಡಳಿತ ಮಂಡಳಿಗೆ ತಜ್ಞ ಹಾಗೂ ಅಧಿಕಾರಿಗಳನ್ನು ಸಕಾಲದಲ್ಲಿ ನೇಮಿಸದೇ ಅವುಗಳ ಆಡಳಿತದಲ್ಲಿ ಸರ್ಕಾರ ಅನವಶ್ಯಕವಾಗಿ ಹಸ್ತಕ್ಷೇಪ ಮಾಡುತ್ತ, ಅವುಗಳ ಸರಕುಗಳ ಹಾಗೂ ಸೇವೆಗಳ ಬೆಲೆಗಳನ್ನು ಖಾಸಗಿ ಕ್ಷೇತ್ರದ ಹಿತಾಸಕ್ತಿಗಳ ಒತ್ತಡಕ್ಕೆ ಮಣಿದು ಉತ್ಪಾದನಾ ವೆಚ್ಚಕ್ಕಿಂತಲೂ ಕೆಳಮಟ್ಟದಲ್ಲಿಡುತ್ತಾ, ನಷ್ಟದತ್ತ ಉದ್ದೇಶ ಪೂರ್ವಕವಾಗಿ ಅವುಗಳನ್ನು ತಳ್ಳಲಾಗುತ್ತಿದೆ. ಖಾಸಗೀ ಕ್ಷೇತ್ರದ ರೋಗಗ್ರಸ್ಥ ಸಂಸ್ಥೆಗಳನ್ನು (ಉದಾ: ಬಟ್ಟೆ ಉದ್ದಿಮೆ) ಸಾರ್ವಜನಿಕ ಕ್ಷೇತ್ರಕ್ಕೆ ಸೇರಿಸಿಕೊಂಡು, ಸಾರ್ವಜನಿಕ ಕ್ಷೇತ್ರ ನಷ್ಟದಲ್ಲಿದೆ ಎಂದು ಬೊಬ್ಬಿಡಲಾಗುತ್ತಿದೆ. ಸಾರ್ವಜನಿಕ ಹಾಗೂ ಖಾಸಗಿ ಕ್ಷೇತ್ರಗಳ ಸಮೀಕ್ಷೆ ನಡೆಸಿದ ಸರ್ಕಾರದ ಹಾಗೂ ರಿಸರ್ವ್ ಬ್ಯಾಂಕಿನ ತಜ್ಞ ವರದಿಗಳನ್ನು ಆಧರಿಸಿ ಈ ಕ್ಷೇತ್ರಗಳ ಲಾಭ, ನಷ್ಟ ಮತ್ತು ಸರಕಾರಕ್ಕೆ ಕೊಟ್ಟ ತೆರಿಗೆ ಇತ್ಯಾದಿಗಳ ಸಾರಾಂಶವನ್ನು ಈ ಕೆಳಗೆ ನಮ್ಮ ಓದುಗರಿಗೆ ಒದಗಿಸಲಾಗಿದೆ. ಇವುಗಳಿಂದ ಸತ್ಯ ಯಾವುದು. ಸುಳ್ಳು ಯಾವುದು ಸ್ಪಷ್ಟವಾಗಿ ತಿಳಿಯಲು ಕಷ್ಟವಾಗದು.

ಸಾರ್ವಜನಿಕ ಕ್ಷೇತ್ರ
(ಕೇಂದ್ರ ಸರ್ಕಾರದ 245 ಸಂಸ್ಥೆಗಳು)

ವರ್ಷ	ನಷ್ಟ		ಲಾಭ		ಸರಕಾರಕ್ಕೆ ತೆರಿಗೆ, ಲಾಭಾಂಶ ಇತ್ಯಾದಿಪಾವತಿ ರೂ.ಕೋಟಿ
	ಸಂಸ್ಥೆಗಳು	ರೂ.ಕೋಟಿ	ಸಂಸ್ಥೆಗಳು	ರೂ.ಕೋಟಿ	
1990-91	-	-	-	-	19,520
1994-95	101	5,100	130	12,000	26,400
1995-96	101	4,826	134	14,704	32,096
1996-97	104	5,862	129	16,120	37,497

ವಿ.ಸೂ. ನಷ್ಟದ ಸಂಸ್ಥೆಗಳಲ್ಲಿ ಹೆಚ್ಚಿನವುಗಳು ಹಿಂದಿನ ಖಾಸಗಿ ಕ್ಷೇತ್ರದ ರೋಗಗ್ರಸ್ಥ ಕಂಪನಿಗಳು ಸಾರ್ವಜನಿಕ ಕ್ಷೇತ್ರಕ್ಕೆ ಸೇರಿಸಿಕೊಂಡಿರುವವುಗಳು.

ಖಾಸಗಿ ಕ್ಷೇತ್ರ

- *1994-95 2085 ಖಾಸಗೀಕ್ಷೇತ್ರದ ದೊಡ್ಡ ಕಂಪನಿಗಳ ಒಟ್ಟು ಲಾಭಗಳಿಕೆ ರೂ. 22790 ಕೋಟಿ.*
- *1994-95 ರಲ್ಲಿ ಈ ಎಲ್ಲಾ ಕಂಪನಿಗಳು ಸರ್ಕಾರಕ್ಕೆ ಪಾವತಿಮಾಡಿದ ಒಟ್ಟು ತೆರಿಗೆ ರೂ. 279 ಕೋಟಿ ಅಂದರೆ ಒಟ್ಟು ಲಾಭಗಳಿಕೆಯ ಶೇ.1.23.*
- *1994-95 ರಲ್ಲಿ 790 ಗುತ್ತೆದಾರಿ ಕಂಪನಿಗಳು ಒಂದೇ ಒಂದು ರೂಪಾಯಿ ತೆರಿಗೆ ಕೊಟ್ಟಿರಲಿಲ್ಲ.*
- *ಮಾಜಿ ಕೇಂದ್ರ ಹಣಕಾಸು ಸಚಿವ ಪಿ. ಚಿದಂಬರಂ ತಿಳಿಸುವಂತೆ ಖಾಸಗಿ ಕ್ಷೇತ್ರದ ಶೆ. 40 ರಷ್ಟು ಕಂಪನಿಗಳು ಆದಾಯ ತೆರಿಗೆಗೆ ಸಂಬಂಧಿಸಿ ಲೆಕ್ಕಪತ್ರಗಳನ್ನೇ ಸಲ್ಲಿಸುತ್ತಿಲ್ಲ. ಅವುಗಳ ಮೇಲೆ ವಿಧಿಸಿದ ಸರಾಸರಿ ದರದ ಕನಿಷ್ಠ ತೆರಿಗೆಯನ್ನೂ ಹಿಂತೆಗೆದುಕೊಳ್ಳಬೇಕಾಯಿತು.*
- *1994-95 ರಲ್ಲಿ 4.5 ಲಕ್ಷ ಕಂಪನಿಗಳು ಖಾಸಗಿ ಕ್ಷೇತ್ರದಲ್ಲಿ ರೋಗಗ್ರಸ್ಥವಾಗಿವೆ. ಪ್ರತಿ ವರ್ಷವೂ ಸಾವಿರಾರು ಕಂಪನಿಗಳು ದಿವಾಳಿ ಆಗುತ್ತಾ ಕಾರ್ಮಿಕರು ಬೀದಿಪಾಲಾಗುತ್ತಿದ್ದಾರೆ.*
- *1994-95 ರಷ್ಟರಲ್ಲಿ ಖಾಸಗಿ ಕ್ಷೇತ್ರದಲ್ಲಿ ತೆರಿಗೆ ತಪ್ಪಿಸುವುದೇ ಮೊದಲಾದ ಆರ್ಥಿಕ ಅಪರಾಧಗಳಿಂದಾಗಿ ಕಪ್ಪು ಹಣದ ಚಲಾವಣೆ ರೂ. 3,00,000 ಕೋಟಿ ರೂ. ಮೀರಿದೆ. ಪ್ರತಿ ವರ್ಷವೂ ರೂ. 50,000 ಕೋಟಿಯಷ್ಟು ಕಪ್ಪು ಹಣ ಹೆಚ್ಚುತ್ತಿದೆ.*
- *1997-98 ರ ಚಿಂದಂಬರಂ ಅವರ “ಕನಸಿನ ಮುಂಗಡ ಪತ್ರ” ದಲ್ಲಿ ಕಪ್ಪುಹಣವುಳ್ಳವರು ತೆರಿಗೆ ಕೊಡಲು ಆಸ್ತಿ ಆದಾಯಗಳ ಸ್ವಯಂ ಘೋಷಣೆಯ ಯೋಜನೆ ರೂಪಿಸಲಾಗಿದ್ದು, ವರ್ಷ್ಯಾಂತ್ಯದಲ್ಲಿ ಕಪ್ಪು ಹಣದ ಕೇವಲ ಶೇ.3 ರಷ್ಟು ಅಂದರೆ ರೂ.10,000 ಕೋಟಿ ತೆರಿಗೆ ಸಂಗ್ರಹ ವಾಗಿತ್ತು. ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರದ ಈ ವರ್ಷದ ಮುಂಗಡ ಪತ್ರದಲ್ಲಿ ಕಪ್ಪು ಹಣ ಖದೀಮರಿಗೆ “ಸಮಾಧಾನ” ಎಂಬ ಯೋಜನೆ ರೂಪಿಸಿದೆ. ಸಾವಧಾನವಾಗಿಯೂ ಸರ್ಕಾರಕ್ಕೆ ಈ ಮೂಲದಿಂದ ಇದುವರೆಗೆ ತೆರಿಗೆ ಹರಿದು ಬರುತ್ತಿಲ್ಲ.*
- *ಕುಪ್ರಸಿದ್ಧ ಭೂಗತ ದೊರೆ ದಾವೂದ ಇಬ್ರಾಹಿಂನ ದೆಹಲಿಯ ಏಜಂಟ್ ರೊಮೆಶ್ ಶರ್ಮ ಕಳೆದ ವರ್ಷ ತನ್ನ ಆಸ್ತಿ ಮೌಲ್ಯ ರೂ.51 ಲಕ್ಷ ಎಂದು ಘೋಷಿಸಿದ್ದು, ಈ ವರ್ಷ ಅವನ ಬಂಗಲೆಗಳನ್ನು ಜಪ್ತಿ ಮಾಡಿದಾಗ ಒಂದು ಖಾಸಗಿ ವಿಮಾನ ಹಾಗೂ ದೇಶ ವಿದೇಶಗಳ ಹತ್ತಾರು ವಾಹನಗಳೂ ಸೇರಿದಂತೆ ಅವನ ಆಸ್ತಿ ಮೌಲ್ಯ ರೂ. 5,000 ಕೋಟಿಗಿಂತಲೂ ಹೆಚ್ಚಿದೆ ಎಂದು ತಿಳಿದು ಬಂದಿದೆ.*
- *ಶೇರು ಹಗರಣದ ದಲ್ಲಾಳಿ ಹರ್ಷದ್ ಮೆಹತಾನ ಆದಾಯ ತೆರಿಗೆ ಭಾಕಿ ರೂ. 5000 ಕೋಟಿಯಷ್ಟಾ ಗಿದ್ದು ಮುಂಬೈ ನಗರದ ಒಟ್ಟು ತೆರಿಗೆ ಸಂಗ್ರಹಕ್ಕೆ ಸರಿಸಮವಾಗಿದೆ. ಇದುವರೆಗೆ ಅವನಿಂದ ಒಂದು ರೂಪಾಯಿ ಕೂಡ ವಸೂಲಿ ಮಾಡಲಿಕ್ಕೆ ಆಗಲಿಲ್ಲ.*
- *1991 ರಿಂದ ಪ್ರಾರಂಭವಾದ ಖಾಸಗೀಕರಣ, ಉದಾರೀಕರಣ, ಜಾಗತೀಕರಣದಿಂದಾಗಿ ಶೇರು, ಸಕ್ಕರೆ, ಟೆಲಿಕಾಂ, ಸಾರ್ವಜನಿಕ ಕ್ಷೇತ್ರದ ಶೇರುಗಳ ಹರಾಜು, ಸೂಟ್‌ಕೇಸ್, ಮೇವು, ಜಯಲಲಿತಾ ಮತ್ತು ಶಶಿಕಲಾ ಅವರ ಆಸ್ತಿ ಆದಾಯ ಮುಂತಾದ ಭ್ರಷ್ಟಾಚಾರದ ಹತ್ತಾರು ಹಗರಣಗಳ ಸರಮಾಲೆ ಯಿಂದ ಅಂದಾಜು ರೂ. 70,000 ಕೋಟಿ ಸರ್ಕಾರಕ್ಕೆ ವಿವಿಧ ಸಂಸ್ಥೆಗಳಿಗೆ ಜನಸಾಮಾನ್ಯರಿಗೆ ನಷ್ಟ ಸಂಭವಿಸಿದೆ.*
- *ಬ್ಯಾಂಕೇತರ ಹಣಕಾಸಿಗೆ ಸಂಬಂಧಿಸಿದ 30,000 ಸಂಸ್ಥೆಗಳು ಏರಿಕೆಯ ದರದಲ್ಲಿ ಬಡ್ಡಿ ಕೊಟ್ಟು ಜನಸಾಮಾನ್ಯರಿಂದ ಠೇವಣಿ ಸಂಗ್ರಹಿಸಿ ಇನ್ನಷ್ಟು ಏರಿಕೆ ದರದ ಬಡ್ಡಿಗೆ ಸಾಲಕೊಡುತ್ತ ಬಂದಿವೆ. ಇತ್ತೀಚೆಗೆ ಸಿ.ಆರ್.ಬಿ. ಕಂಪನಿಯು ದಿವಾಳಿ ಹೊಂದಿ ಬ್ಯಾಂಕೇತರ ಹಣಕಾಸು ಸಂಸ್ಥೆಗಳು ನೆಲಕಚ್ಚುತ್ತಿವೆ ಮತ್ತು ಸಾಮಾನ್ಯ ಜನರಿಗೆ ಸಾವಿರಾರು ಕೋಟಿ ರೂ. ನಷ್ಟ ತಂದೊಡ್ಡಿವೆ. ಇಂತಹ 46 ಕಂಪನಿಗಳಿಗೆ ಸಂಬಂಧಿಸಿ ರೂ. 195 ಕೋಟಿ ಮೊತ್ತಕ್ಕೆ ಸಂಬಂಧಿಸಿ 77,000 ಮೋಸದ ಪ್ರಕರಣಗಳು ದಾಖಲಾಗಿವೆ. ಉದಾ: ಈಶ್ವರಿ ಫೈನಾನ್ಸಸ್, ಅನುಭವ ಫೈನಾನ್ಸ್*
- *ಉದಾರೀಕರಣದ ಹಿನ್ನೆಲೆಯಲ್ಲಿ ದೇಶಾದ್ಯಂತ ನಾಯಿಕೊಡೆಗಳಂತೆ ತಲೆಎತ್ತಿರುವ ಸಾವಿರಾರು ಪ್ಲಾಂಟೇಶನ್ ಕಂಪನಿಗಳು ಇತ್ತೀಚೆಗೆ ದಿವಾಳಿ ಹೋಗುತ್ತಿದ್ದು ಮುಗ್ಧ ಠೇವಣಿದಾರರಿಗೆ ರೂ. 10,000 ಕೋಟಿಗಳಷ್ಟು ನಷ್ಟ ಉಂಟುಮಾಡಿದೆ.*
- *ಖಾಸಗಿ ಕ್ಷೇತ್ರದ ಕಂಪನಿಗಳು ಬ್ಯಾಂಕುಗಳಿಂದ ಪಡೆದ ಸಾಲ ಮರುಪಾವತಿ ಬಾಕಿ ರೂ 43.000 ಕೋಟಿ. ನೀರು, ವಿದ್ಯುತ್, ಮತ್ತು ಇತರ ತೆರಿಗೆಗಳ ಬಾಕಿ ಸಾವಿರಾರು ಕೋಟಿ ರೂ. ಸರಕಾರಕ್ಕೆ ಮತ್ತು ಸಮಾಜಕ್ಕೆ ದ್ರೋಹ ಬಗೆಯುವುದರಲ್ಲಿ ಖಾಸಗೀಕ್ಷೇತ್ರ ನಿಜವಾಗಿಯೂ ತನ್ನ ದಕ್ಷತೆಯನ್ನು ಮೆರೆಸುತ್ತಿದೆ.*

ಗೌರವಪೂರ್ಣ ಬದುಕಿಗಾಗಿ ಹೋರಾಟದ ಕಣದಲ್ಲಿ

ಕರ್ನಾಟಕ ರಾಜ್ಯ ಅಂಗನವಾಡಿ ನೌಕರರ ಸಂಘ (ಸಿಐಟಿಯು)ದ ರಾಜ್ಯ ಪದಾಧಿಕಾರಿಗಳು ನವೆಂಬರ್ 13 ರಿಂದ ರಾಜಧಾನಿ ಬೆಂಗಳೂರಿನಲ್ಲಿ ಅನಿರ್ದಿಷ್ಟ ಉಪವಾಸ ಸತ್ಯಾಗ್ರಹವನ್ನು ಪ್ರಾರಂಭಿಸಿದ್ದಾರೆ. ಬಗೆಹರಿಯದೆ ಉಳಿದಿರುವ ಬಹುದಿನಗಳ ನ್ಯಾಯಯುತವಾದ ಬೇಡಿಕೆಗಳನ್ನು ಈಡೇರಿಸುವಂತೆ ಸರ್ಕಾರವನ್ನು ಒತ್ತಾಯಿಸಿ ನಡೆಯುತ್ತಿರುವ ಈ ಹೋರಾಟದ ಸಂದರ್ಭದಲ್ಲಿ ಸಂಘದ ರಾಜ್ಯ ಪ್ರಧಾನ ಕಾರ್ಯದರ್ಶಿ ಎಸ್.ವರಲಕ್ಷ್ಮಿ ಯವರ ಜೊತೆ ಐಕ್ಯರಂಗ ನಡೆಸಿದ ಸಂದರ್ಶನ.

● *ಅಂಗನವಾಡಿ ಯೋಜನೆ ಯಾವ ಉದ್ದೇಶದಿಂದ ಜಾರಿಗೆ ಬಂತು?*

ವರಲಕ್ಷ್ಮಿ: ಈ ಯೋಜನೆಯು ಗ್ರಾಮಾಂತರ ಹಾಗೂ ಕೊಳಚೆ ಪ್ರದೇಶಗಳಲ್ಲಿನ ಬಡತನ ರೇಖೆಗಿಂತ ಕೆಳಗಿರುವ 6 ವರ್ಷ ವಯಸ್ಸಿನ ಮಕ್ಕಳು, ಗರ್ಭಿಣಿ, ಬಾಣಂತಿಯರಿಗೆ ಪೌಷ್ಟಿಕಾಂಶ ಒದಗಿಸಲು, ಪೂರ್ವ ಪ್ರಾಥಮಿಕ ಶಿಕ್ಷಣ ನೀಡಲು ಪ್ರಥಮ ಚಿಕಿತ್ಸೆ ಕೊಡಿಸುವ, ಅಪೌಷ್ಟಿಕತೆಯಿಂದ ಮರಣ ಹೊಂದುವ ಮಕ್ಕಳ ಸಂಖ್ಯೆ ಕಡಿಮೆಗೊಳಿಸುವ ಮಹತ್ತರ ಉದ್ದೇಶದಿಂದ 1975 ರಲ್ಲಿ ಸಮಗ್ರ ಬಾಲ ವಿಕಾಸ ಯೋಜನೆಯಡಿ ಅನುಷ್ಠಾನಕ್ಕೆ ಬಂದ ಕೇಂದ್ರ ಸರ್ಕಾರದ ಯೋಜನೆ.

● *ರಾಜ್ಯದಲ್ಲಿ ಎಷ್ಟು ಅಂಗನವಾಡಿ ನೌಕರರಿದ್ದಾರೆ?*

ವರಲಕ್ಷ್ಮಿ: ರಾಜ್ಯದಲ್ಲಿ ಒಟ್ಟು 39,985 ಕೇಂದ್ರಗಳಲ್ಲಿ 79,970 ಕಾರ್ಯಕರ್ತೆಯರು ಕಾರ್ಯ ನಿರ್ವಹಿಸುತ್ತಿದ್ದಾರೆ.

● *ಅಂಗನವಾಡಿ ನೌಕರರ ಮೂಲಭೂತ ಸಮಸ್ಯೆಗಳಾವುವು?*

ವರಲಕ್ಷ್ಮಿ: ಇಲ್ಲಿ ಮಹಿಳೆಯರೇ ಪ್ರಧಾನವಾಗಿ ಕೆಲಸ ನಿರ್ವಹಿಸುತ್ತಿದ್ದಾರೆ. ಅವರ ಸಮಸ್ಯೆಗಳು ಒಂದೇ ಎರಡೇ! ಅವರಿಗೆ ಕೆಲಸದ ಭದ್ರತೆಯೇ ಇಲ್ಲ, ಕನಿಷ್ಠವೇತನ ಇಲ್ಲ, ಭಡ್ತಿ ಬಹುದೂರದ ಮಾತು. ನಿವೃತ್ತಿವೇತನ ಕನಸೇ ಸರಿ. ಸಾಮಾಜಿಕ ರಕ್ಷಣೆ ಇಲ್ಲ, ಹಳ್ಳಿಯಿಂದ ಹಳ್ಳಿಗಳಿಗೆ ನಡೆದೇ ಹೋಗಿ ಕೆಲಸ ಮಾಡಬೇಕು. ಸರ್ಕಾರ ಕೊಡುವ ಆಹಾರ ಪದಾರ್ಥಗಳ ಶೇಖರಣೆಗೆ ಬೇರೆಯವರ ಮನೆ ಅವಲಂಬಿಸಬೇಕು. ಸೌದೆಗಾಗಿ ಬೇಡಬೇಕು. ಮತ್ತೆ ಮೇಲಧಿಕಾರಿಗಳಿಂದ ಕಿರುಕುಳಕ್ಕೆ ಒಳಗಾಗಬೇಕು. ಅವರು ಕೊಡುವ ದಿನ ಸಂಬಳ ಪಡೆಯಬೇಕು.

● *ಗೌರವ ಧನಕ್ಕಾಗಿ ನೇಮಿಸಿ ಕೊಂಡಿರುವಾಗ ಕೆಲಸ ಖಾಯಂ ಮಾಡುವುದಾಗಲಿ, ಕನಿಷ್ಠ ವೇತನ ನೀಡುವುದಾಗಲಿ ಹೇಗೆ ಸಾಧ್ಯ?*

ವರಲಕ್ಷ್ಮಿ: ಸಮಾಜಸೇವೆಗೆ ಬರುವ ಶಾಸಕರು, ಸಂಸದರೇ ವರ್ಷ ವರ್ಷ ವೇತನ ಸಾಕಾಗುವುದಿಲ್ಲವೆಂದು ಸಾರಿಗೆ ಭತ್ಯೆ, ಸಮೀಕ್ಷೆ, ಬಾಡಿಗೆ ಇತ್ಯಾದಿ ಹೆಸರಿನಲ್ಲಿ ಗೌರವಧನ ರೂಪದಲ್ಲಿ ಹತ್ತಾರು ಸಾವಿರ ರೂ. ಸಂಭಾವನೆ ಪಡೆಯುತ್ತಿರುವಾಗ ಅಂಗನವಾಡಿ ನೌಕರರಿಗೆ ಸರ್ಕಾರ ಕೊಡುವ 500 ರೂ. ಹಾಗೂ 250 ರೂ. ಗೌರವಧನಗಳಲ್ಲಿ ಜೀವನ ಸಾಗಿಸುವುದು ಹೇಗೆ?

ಈ ಯೋಜನೆಯಲ್ಲಿ ಗೌರವಧನ ಪಡೆದು ಕೆಲಸ ಮಾಡಲು ಯಾವುದೇ ಮಂತ್ರಿ ಮಹೋದಯರ, ಶಾಸಕ, ಸಂಸದರ, ಐಎಎಸ್, ಐಪಿಎಸ್‌ನಂತಹ ಉನ್ನತಾಧಿಕಾರಿಗಳ ಮನೆಯಿಂದ ಯಾರೂ ಬರುವುದಿಲ್ಲ. ಬದಲಿಗೆ ಸಮಾಜದಲ್ಲಿ ಕಡು ಬಡತನದಲ್ಲಿ ಜೀವನ ಸಾಗುಸುತ್ತಿರುವ ಎಲ್ಲಾ ರೀತಿಯಿಂದಲೂ ಶೋಷಣೆಗೆ ಒಳಗಾಗುತ್ತಿರುವ ಕೆಳಸ್ತರದ ಹೆಣ್ಣು ಮಕ್ಕಳೇ ಇಲ್ಲಿ ಕೆಲಸ ಮಾಡುವವರಾಗಿದ್ದಾರೆ. ಇವರಿಗೆ ಗೌರವ ಧನದ ಹೆಸರಲ್ಲಿ ಕೊಡುವ 500-250 ರೂ. ವಂಚನೆಯಲ್ಲವೇ?

● *ಅಂಗನವಾಡಿ ಕಾರ್ಯಕರ್ತೆಯರ ಕೆಲಸದ ಸ್ವರೂಪವೇನು?*

ವರಲಕ್ಷ್ಮಿ: ನಮ್ಮ ಕಾರ್ಯಕರ್ತೆಯರು ದಿನಕ್ಕೆ ನಾಲ್ಕುವರೆ ಗಂಟೆಗಳ ಕೆಲಸಕ್ಕಾಗಿ ನೇಮಕಗೊಂಡಿರುವುದು. ಜೊತೆಗೆ ಪಲ್ಸ್ ಪೋಲಿಯೋ, ಗರ್ಭಿಣಿ-ಬಾಣಂತಿಯರ ಸಮೀಕ್ಷೆ, ಬಡತನ ರೇಖೆಯೊಳಗಿನ ಮಕ್ಕಳ ಗಣತಿ, ದ್ವಾರ್ಕಾ ಯೋಜನೆ, ಮಹಿಳಾ ಸಮೃದ್ಧಿ ಯೋಜನೆ, ಡಿಪಿಇಪಿ ಹಾಗೂ ಸಮಾಜಕಲ್ಯಾಣ ಇಲಾಖೆಯ ಹಲವು ಕೆಲಸಗಳ ಜೊತೆಗೆತಮ್ಮ ಕೇಂದ್ರದ ಜೊತೆಗೆ ಬೇರೆ ಕೇಂದ್ರದಲ್ಲಿ ಕೆಲಸ ಮಾಡಿದರೆ ಹೆಚ್ಚುವರಿ ವೇತನ ಪಡೆಯಬಹುದಾಗಿದೆ. ಆದರೆ ಸರ್ಕಾರ ಇಷ್ಟೆಲ್ಲಾ ಕೆಲಸಗಳಿಗೆ ಮಾಸಿಕ 50 ರೂ. ಮಾತ್ರ ನೀಡುತ್ತಿದೆ.

● *ಅಂಗನವಾಡಿ ಕೇಂದ್ರಗಳನ್ನು ಗ್ರಾಮ ಪಂಚಾಯತ್ ಹಾಗೂ ಸರ್ಕಾರೇತನ ಸಂಸ್ಥೆಗಳಿಗೆ ವಹಿಸಿದರೆ ನೌಕರರ ಸಂಬಳ ಹಾಗೂ ಕಾರ್ಯದಕ್ಷತೆ ಹೆಚ್ಚುವುದಿಲ್ಲವೇ?*

ವರಲಕ್ಷ್ಮಿ: ಖಂಡಿತ ಹೆಚ್ಚುವುದಿಲ್ಲ. ಸರ್ಕಾರ ಗ್ರಾಮ ಪಂಚಾಯತ್‌ಗೆ ವರ್ಷಕ್ಕೆ 1 ಲಕ್ಷ ರೂ. ಬಿಡುಗಡೆ ಮಾಡುತ್ತಿದೆ. ಆ ಹಣದಲ್ಲಿ ಇಡೀ ಪಂಚಾಯ್ತಿ ವ್ಯಾಪ್ತಿಯ ಕುಡಿಯುವ ನೀರು, ರಸ್ತೆ, ಚರಂಡಿ, ಬೀದಿ ದೀಪ ಇವುಗಳಿಗೆ ಏನೇನು ಸಾಲದಾಗಿದೆ. ಇನ್ನು ಅಂಗನವಾಡಿ ನಡೆಸುವುದಾದರೂ ಹೇಗೆ? ಇನ್ನು ನಮ್ಮ ನೌಕರರಿಗೆ ಸಂಬಳ ಎಲ್ಲಿಂದ ಬರುತ್ತದೆ? ಪಂಚಾಯತ್ ನೌಕರರಿಗೆ ಕನಿಷ್ಠ ವೇತನ ಕೊಡುತ್ತಿಲ್ಲ. ಪಂಚಾಯತ್ ಅಧಿಕಾರ ಬದಲಾದ ಹಾಗೆ ಅಂಗನವಾಡಿ ಕಾರ್ಯಕರ್ತೆಯರನ್ನು ಬದಲಾಯಿಸಲಾಗುತ್ತದೆ.

ಇನ್ನು ಸರ್ಕಾರೇತರ ಸಂಸ್ಥೆಗಳಿಗೆ ವಹಿಸುವುದೆಂದರೆ ಸರ್ಕಾರದ ಸಹಾಯವಿಲ್ಲದೆ ಯಾವ ಸರ್ಕಾರೇತರ ಸಂಸ್ಥೆ ತಾನೆ ಈ ಯೋಜನೆ ನಡೆಸುತ್ತದೆ? ಮೇಲಾಗಿ ಲಾಭಾಂಶವಿಲ್ಲದೆ ಸಂಸ್ಥೆಗಳು ಇತ್ತ ಸುಳಿಯುವುದಿಲ್ಲ. ಸರ್ಕಾರವೇ ಈ ಯೋಜನೆಯನ್ನು ಸರ್ಕಾರೇತರ ಸಂಸ್ಥೆಗಳಿಗೆ ನೀಡುತ್ತೇನೆಂಬ ಯೋಚನೆಯ ಹಿಂದೆ ಬಡ ಜನತೆಯ ಕಲ್ಯಾಣ ಯೋಜನೆಗಳಿಂದ ಕೈ ತೊಳೆದುಕೊಂಡು ಬಡ ಹೆಂಗಸರ ಉದ್ಧಾರಕ್ಕೆ ಇತಿಶ್ರೀ ಹೇಳುವ ಹುನ್ನಾರವಿದೆ.

● *ಸರ್ಕಾರದ ಮುಂದಿಟ್ಟಿರುವ ಬೇಡಿಕೆಗಳಾವುವು?*

ವರಲಕ್ಷ್ಮಿ: ಅಂಗನವಾಡಿ ಕಾರ್ಯಕರ್ತೆಯರನ್ನು ಮತ್ತು ಸಹಾಯಕಿಯರನ್ನು ಖಾಯಂಗೊಳಿಸಬೇಕು. ಅಲ್ಲಿವರೆಗೆ ಕ್ರಮವಾಗಿ 2000-1200 ರೂ. ಕನಿಷ್ಠ ವೇತನ ನೀಡಬೇಕು. ಬೆಲೆ ಏರಿಕೆಗನುಗುಣವಾಗಿ ಪ್ರತಿವರ್ಷ ಶೇ 10 ರಷ್ಟು ವೇತನ ಹೆಚ್ಚಿಸಬೇಕು. ಕೇಂದ್ರಗಳನ್ನು ಗ್ರಾಮ ಪಂಚಾಯತ್ ಅಥವಾ ಖಾಸಗಿಯವರಿಗೆ ವಹಿಸಬಾರದು. ಒಂದು ತಿಂಗಳು ವೈದ್ಯಕೀಯ ರಜೆ ಬೇಕು. 135 ದಿನಗಳ ಹೆರಿಗೆ ರಜೆ ಘೋಷಿಸಬೇಕು. ಮೇಲ್ವಿಚಾರಕಿಯರ ಹುದ್ದೆಗೆ ಮೀಸಲಾತಿ ಜಾರಿಗೊಳಿಸಬೇಕು. 15 ದಿನಗಳ ಬೇಸಿಗೆ ರಜೆಗೆ ಆದೇಶ ಹೊರಡಿಸಬೇಕೆಂಬ 13 ಪ್ರಮುಖ ಬೇಡಿಕೆಗಳನ್ನು ಸರ್ಕಾರದ ಮುಂದಿಟ್ಟಿದ್ದೇವೆ.

● *ನಿಮ್ಮ ಈ ಎಲ್ಲಾ ಬೇಡಿಕೆಗಳ ಈಡೇರಿಕೆಗಾಗಿ ಎಷ್ಟು ವರ್ಷಗಳಿಂದ ಯಾವ್ಯಾವ ಹೋರಾಟ ನಡೆಸಿದ್ದೀರಿ?*

ವರಲಕ್ಷ್ಮಿ: ಅಂಗನವಾಡಿ ನೌಕರರಲ್ಲಿ ಕಳೆದ 7-8 ವರ್ಷಗಳಿಂದ ತಮ್ಮ ತೀವ್ರ ಶೋಷಣೆಯನ್ನು ಮನಗಂಡು ಹೋರಾಟದ ಪ್ರವೃತಿ ಮೂಡತೊಡಗಿದೆ. ಇದರ ಪರಿಣಾಮವಾಗಿಯೇ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಗಮನವನ್ನು ಸ್ವಲ್ಪವಾದರೂ ಸೆಳೆಯಲು ಸಾಧ್ಯವಾಗಿದೆ. ಪ್ರಥಮವಾಗಿ ಜೂನ್ '94 ರಲ್ಲಿ ಅಂಗನವಾಡಿ ಕೇಂದ್ರಗಳನ್ನು ಖಾಸಗೀಯವರಿಗೆ ನೀಡುವ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ನೀತಿ ವಿರುದ್ಧ ಸಂಯುಕ್ತ ಸಂಘರ್ಷ ಸಮಿತಿ ಆಶ್ರಯದಲ್ಲಿ ದೇಶಾದ್ಯಂತ ಪ್ರತಿಭಟನೆ ಮತ್ತು ಮುಷ್ಕರ ನಡೆಯಿತು. ಜನವರಿ '95 ರಲ್ಲಿ ಜಿಲ್ಲಾ

ಪುಟ 5 ಕ್ಕೆ

ದ.ಕ. ಜಿಲ್ಲಾ ಪಂಚಾಯತ್ ಕಛೇರಿ ಎದುರು ಸುರಿಯುವ ಮಳೆಯಲ್ಲೇ ಧರಣಿ ನಡೆಸುತ್ತಿರುವ ಅಂಗನವಾಡಿ ನೌಕರರು.



ಪುಟ 1ರಿಂದ

ಕೇಂದ್ರಗಳಲ್ಲಿ ಅನಿರ್ದಿಷ್ಟಕಾಲ ಉಪವಾಸ ಸತ್ಯಾಗ್ರಹ, ರಾಜಧಾನಿಯಲ್ಲಿ ಮೆರವಣಿಗೆ, ಮಾರ್ಚ್ '95 ರಲ್ಲಿ ಧರಣಿ, ಮೇ ತಿಂಗಳಲ್ಲಿ ಪಾರ್ಲಿಮೆಂಟ್ ಚಲೋ ನಡೆಸಿದ್ದೇವೆ.

ಆಗಸ್ಟ್ '96 ರಲ್ಲಿ ಪತ್ರ ಚಳುವಳಿ, ತಾಲೂಕು ಕೇಂದ್ರಗಳಲ್ಲಿ ಪ್ರತಿಭಟನಾ ರ್‍ಯಾಲಿ, ಡಿಸೆಂಬರ್‌ನಲ್ಲಿ ಪ್ರಥಮ ಸಮ್ಮೇಳನ ನಡೆಸಿ ಒಂದು ಬೃಹತ್ ರ್‍ಯಾಲಿ ನಡೆಯಿತು.

ಏಪ್ರಿಲ್ '98 ರಲ್ಲಿ ಸಾವಿರಾರು ಸಂಖ್ಯೆಯಲ್ಲಿ ಮುಖ್ಯಮಂತ್ರಿ ಮನೆಗೆ ಮುತ್ತಿಗೆ, ಜೂನ್‌ನಲ್ಲಿ 5 ಸಾವಿರಕ್ಕೆ ಮಿಗಿಲಾಗಿ ಬೆಂಗಳೂರಿನಲ್ಲಿ ಧರಣಿ ಸತ್ಯಾಗ್ರಹ, ಇದೇ ಅಕ್ಟೋಬರ್‌ನಲ್ಲಿ ಎಲ್ಲಾ ತಾಲೂಕು, ಜಿಲ್ಲಾ ಕೇಂದ್ರಗಳಲ್ಲಿ ಸರದಿ ಉಪವಾಸ ಸತ್ಯಾಗ್ರಹದ ಜೊತೆಗೆ ತಾಲೂಕು, ಜಿಲ್ಲಾ ಹಾಗೂ ರಾಜ್ಯ ಮಟ್ಟದ ಶಿಬಿರಗಳು ನಡೆದಿವೆ.

● *ಇಲ್ಲಿಯವರೆಗಿನ ಹೋರಾಟದ ಫಲವಾಗಿ ನಿಮ್ಮ ಎಷ್ಟು ಬೇಡಿಕೆಗಳು ಈಡೇರಿವೆ?*

ವರಲಕ್ಷ್ಮಿ: ಪ್ರಾರಂಭದಲ್ಲಿ 75-50 ರೂ. ಇದ್ದ ಗೌರವ ಧನ ನಮ್ಮ ಸತತ ಹೋರಾಟದ ಫಲವಾಗಿ 500-300 ರೂಗಳಾಗಿದೆ. TA, DA ಮಾಸಿಕ 50 ರೂ. ಸಿಗುತ್ತಿದೆ, ಗುಡಿಗೋಪುರದಲ್ಲಿ ನಡೆಸುವ ಬದಲು ಕಟ್ಟಡ ಬಾಡಿಗೆ ಪಡೆದು ಕೇಂದ್ರ ನಡೆಸುವಂತಾಗಿದೆ.. ಸೌದೆ ಬೇಡುವುದು ತಪ್ಪಿದೆ. ಹಲವು ಕೇಂದ್ರಗಳಿಗೆ ಸ್ಟವ್‌ಗಳು ಬಂದಿವೆ.

● *ನಿಮ್ಮ ಬೇಡಿಕೆಗಳ ಬಗ್ಗೆ ಸರ್ಕಾರದ ನಿಲುವೇನು?*

ವರಲಕ್ಷ್ಮಿ: ನಾವು ಈಗಾಗಲೇ ಹಲವು ಬಾರಿ ಸಂಬಂಧಪಟ್ಟ ಜಿಲ್ಲಾಧಿಕಾರಿಗಳಿಗೆ, ಜಿಲ್ಲಾ ಪಂಚಾಯತ್ ಅಧ್ಯಕ್ಷರುಗಳಿಗೆ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವರಾದ ವಿಮಲಾಬಾಯಿ ದೇಶ್‌ಮುಖ್, ಸಿಂಧ್ಯ, ಸೋಮಣ್ಣ, ಉಪಮುಖ್ಯಮಂತ್ರಿಗಳಾದ ಸಿದ್ದರಾಮಯ್ಯ, ಜೆ.ಹೆಚ್.ಪಟೇಲ್ ಮುಂತಾದವರನ್ನು ಭೇಟಿ ಮಾಡಿ ಮಾತುಕತೆ ನಡೆಸಿದ್ದೇವೆ. ಅರ್ಧ ಡಜನ್ ಸಚಿವರು ನಮ್ಮ ಹೋರಾಟ ಸ್ಥಳಗಳಿಗೆ ಭೇಟಿ ನೀಡಿದ್ದಾರೆ.

ಖಾಯಮಾತಿಯನ್ನು ಒಪ್ಪಿಲ್ಲ, ಗೌರವ ನೌಕರರೆಂದು ಪರಿಗಣಿಸಿದ್ದೇವೆಂಬ ಉತ್ತರ ಸರ್ಕಾರದಲ್ಲಿ. ಇನ್ನುಳಿದ ಬೇಡಿಕೆಗಳನ್ನು ಗಂಭೀರವಾಗಿ ಪರಿಗಣಿಸಿದ್ದೇವೆ, ಕೂಡಲೇ ಪರಿಹರಿಸುತ್ತೇವೆಂಬ ಭರವಸೆಯ ಬುತ್ತಿಯನ್ನಂತು ನೀಡಿದ್ದಾರೆ.

● *ಬೇರೆ ರಾಜ್ಯದಲ್ಲಿಯೂ ಅಂಗನವಾಡಿ ನೌಕರರ ಪರಿಸ್ಥಿತಿ ಹೀಗೆಯೇ ಇದೆಯೇ?*

ವರಲಕ್ಷ್ಮಿ: ತಮಿಳುನಾಡು ಮತ್ತು ಪಾಂಡಿಚೇರಿಯಲ್ಲಿ 900, 650 ರೂ. ಗೌರವ ಧನ ಪಡೆಯುತ್ತಿದ್ದಾರೆ. ಆಂಧ್ರ ಪ್ರದೇಶ, ತಮಿಳುನಾಡು, ಪಾಂಡಿಚೇರಿ, ಮಹಾರಾಷ್ಟ್ರ, ಪಶ್ಚಿಮ ಬಂಗಾಳ, ಪಂಜಾಬ್ ರಾಜ್ಯಗಳಲ್ಲಿ 400-900 ವರೆಗೆ ಬೋನಸ್ ಪಡೆಯುತ್ತಿದ್ದಾರೆ. ಇದೇ ರಾಜ್ಯಗಳಲ್ಲಿ ಮೇಲ್ವಿಚಾರಕಿಯರ ನೇಮಕದಲ್ಲಿ ಅಂಗನವಾಡಿ ಕಾರ್ಯಕರ್ತೆಯರಿಗೆ ಮೀಸಲಾತಿ ಸೌಲಭ್ಯವಿದೆ. ಈ ರಾಜ್ಯಗಳಲ್ಲಿ ಅಧಿಕಾರಿಗಳ ದಬ್ಬಾಳಿಕೆ ಕಡಿಮೆಗೊಂಡಿದೆ.

● *ಎಲ್ಲಾ ಸಂಘಟನೆಗಳೂ ಒಂದೇ ವೇದಿಕೆಯಡಿ ಐಕ್ಯ ಹೋರಾಟ ನಡೆಸಿದರೆ ನಿಮ್ಮ ಬೇಡಿಕೆ ಸುಲಭದಲ್ಲಿ ಈಡೇರಬಹುದಲ್ಲವೇ?*

ವರಲಕ್ಷ್ಮಿ: ನಮ್ಮ ಸಂಘಟನೆಯ ಉದ್ದೇಶವು ಕೂಡ ಇದೆ ಆಗಿದೆ. ನಮ್ಮ ಪ್ರಯತ್ನದಿಂದಾಗಿಯೇ ಅಖಿಲ ಭಾರತ ಮಟ್ಟದಲ್ಲಿ ಸಂಯುಕ್ತ ಸಂಘರ್ಷ ಸಮಿತಿ ರಚನೆಗೊಂಡಿತು. ರಾಜ್ಯದಲ್ಲಿಯೂ ಹಲವು ಬಾರಿ ಪ್ರಯತ್ನಿಸಿದ್ದೇವೆ. ಸಕಾರಾತ್ಮಕ ಪ್ರತಿಕ್ರಿಯೆ ವ್ಯಕ್ತಗೊಂಡಿದೆ.

ಇದೇ ಸಂದರ್ಭದಲ್ಲಿ ವ್ಯಕ್ತಿಪ್ರತಿಷ್ಠೆ ಹಾಗೂ ಸಂಘದ ಪ್ರತಿಷ್ಠೆ ಬಿಟ್ಟು ತೀವ್ರ ಶೋಷಣೆಗೆ ಒಳಗಾಗಿರುವ ಅಂಗನವಾಡಿ ನೌಕರರ ಐಕ್ಯಹೋರಾಟಕ್ಕೆ ಮುಂದಾಗಬೇಕೆಂದು ಎಲ್ಲಾ ಸಂಘಟನೆಗಳಿಗೆ ಮನವಿ ಮಾಡುತ್ತೇವೆ. ○



ಬೆಲೆಯೇರಿಕೆ ದುಡಿಯುವ ಜನರನ್ನು ಹಿಂಡಿ ಹಿಪ್ಪೆಮಾಡುವ ಬೆಲೆಯೇರಿಕೆಯನ್ನು ನಿರ್ಲಕ್ಷಿಸಲಾಗಿದೆ. ಬಿಜೆಪಿ ಅಧ್ಯಕ್ಷರು ಇದರಲ್ಲಿ ಸರಕಾರದ ವಿಫಲತೆಯನ್ನು ಕೊನೆಗೂ ಒಪ್ಪಿಕೊಂಡು ಇದಕ್ಕೆ 'ಸಮ್ಮಿಶ್ರ ರಾಜಕೀಯ' ಕಾರಣ ಎಂದು ತನ್ನ ಮಿತ್ರಪಕ್ಷಗಳನ್ನು ದೂರಿದರೆ, ಮಿತ್ರಪಕ್ಷಗಳು ಬಿಜೆಪಿಯನ್ನು ದೂರುತ್ತಿದ್ದಾರೆ. ಆದರೆ ಪ್ರಧಾನ ಮಂತ್ರಿಗಳು ಇದಕ್ಕೆ ನಿಜವಾದ ಕಾರಣವನ್ನು ಪರೋಕ್ಷವಾಗಿಯಾದರೂ ಒಪ್ಪಿಕೊಂಡಿದ್ದಾರೆ. - "ಅಭಾವವಿದ್ದಾಗ ಲಾಭಮಾಡಿಕೊಳ್ಳುವುದು ವ್ಯಾಪಾರದಲ್ಲಿ ಸಾಮಾನ್ಯ ಸಂಗತಿ. ಒಬ್ಬ ವ್ಯಾಪಾರಿ 'ಕಳ್ಳದಾಸ್ತಾನು' ಮಾಡುವುದು ಕಾನೂನು ಬಾಹಿರವಲ್ಲ" ಎಂದಿದ್ದಾರೆ. ಇದರ ಅರ್ಥವೇನು? ಇಂತಹ ಸರ್ಕಾರ ಇರಬೇಕೇ?

ಕಾಳಸಂತೆಕೋರರರೇ!...... ಬಾಚಿಕೊಳ್ಳಿ!

ಏರುತಿಹುದು ಹಾರುತಿಹುದು ನೋಡಿ ನಿಮ್ಮ ಬೆಲೆಗಳು!

ಈರುಳ್ಳಿ ಬೆಲೆಗಳು ಯಾವಾಗಲೂ ಆಸ್ಫೋಟಕ ರಾಜಕೀಯ ವಸ್ತು. ಚುನಾವಣೆ ಸಮಯದಲ್ಲಂತೂ ಕೇಳುವುದೇ ಬೇಡ. ಈರುಳ್ಳಿ ಬೆಲೆಗಳು ಆಗ್ರಾದಲ್ಲಿ ಕಿಲೋಗೆ 100 ರೂ. ದಾಟಿದ್ದು ಆಸ್ಫೋಟಕ ವಿಷಯವಲ್ಲವೇ? ಬಿಜೆಪಿ ಅಧಿಕಾರಕ್ಕೆ ಬಂದಾಗಿನಿಂದ ಸಾಮಾನ್ಯ ನಾಗರಿಕನ ದಿನನಿತ್ಯದ ಉಪಯೋಗದ ವಸ್ತುಗಳೆಲ್ಲಾ ಅದರಲ್ಲೂ ಹಣ್ಣು-ತರಕಾರಿಗಳ ಬೆಲೆ ಗಗನಕ್ಕೇರಿದ್ದು ಈಗ ಹಳೆಸುದ್ದಿ. ಅದೂ ಬಿಜೆಪಿ ಅಧಿಕಾರದಲ್ಲಿರುವ ಉತ್ತರ ಭಾರತದ ರಾಜ್ಯಗಳಲ್ಲೇ ಅತ್ಯಂತ ಹೆಚ್ಚು ಬೆಲೆ ಏರಿಕೆ. ಈರುಳ್ಳಿ, ಆಲೂಗಡ್ಡೆ, ಟೊಮೊಟೋ ಬೆಲೆಗಳು ಒಂದು ವರ್ಷದ ಹಿಂದಿನ ಬೆಲೆಗಿಂತ ಏಳು ಪಟ್ಟು ಹೆಚ್ಚಿದೆ. ಇತ್ತೀಚಿಗೆ ಬೆಲೆ ಏರಿಕೆಯ ಶಿಖರ ಮುಟ್ಟಿದ್ದು ಉತ್ತರ ಪ್ರದೇಶ, ದೆಹಲಿಗಳಲ್ಲಿ ಉಪ್ಪು ಮಾರುಕಟ್ಟೆಯಿಂದ ಮಾಯವಾಗಿ ಅದರ ಬೆಲೆ ಈರುಳ್ಳಿ ಬೆಲೆಗೆ ಮುಟ್ಟಿದಾಗ. ಬಿಜೆಪಿ ಮತ್ತು ಅವರ ಬೆಂಬಲಿಗ ಕಾಳಸಂತೆಕೋರರು ಇನ್ನು ಯಾವ ಅವಶ್ಯಕ ವಸ್ತುವನ್ನು ಮಾಯ ಮಾಡುತ್ತಾರೆ ಎಂದು ಜನ ಆತಂಕದಿಂದ ಕಾದಿದ್ದಾರೆ. ಬೆಲೆ ಏರಿಕೆ ಎಷ್ಟು ಆಸ್ಫೋಟಕವಾಗಿದೆಯೆಂದರೆ ಬಿಜೆಪಿ 'ಸರ್ಕಸ್'ನ ಎಲ್ಲಾ ಪಾತ್ರಧಾರಿಗಳು - ಜಾರ್ಜ್‌ರ ಸಮತಾ ಎಂಬ ವಿಚಿತ್ರ ಪಾತ್ರಧಾರಿ ಬಿಟ್ಟು - ಅಂದರೆ ಮಿತ್ರಪಕ್ಷಗಳು ಬೆಲೆ ಏರಿಕೆ ನಿಯಂತ್ರಣಕ್ಕೆ ತರದಿದ್ದರೆ ಬೆಂಬಲ ಹಿಂತೆಗೆದುಕೊಳ್ಳುವುದಾಗಿ ಘೋಷಿಸಬೇಕಾಗಿ ಬಂದಿದೆ.

ಈ ಬೆಲೆ ಏರಿಕೆ ಅಭೂತಪೂರ್ವವಾದದ್ದು ಎನ್ನುವುದಕ್ಕೆ ಏನೂ ಸಂಶಯವಿಲ್ಲ. (ಕೋಷ್ಟಕ - 1 ನೋಡಿ) ಇದು ದೆಹಲಿಯಲ್ಲಿ ಕಳೆದ ಒಂದು ವರ್ಷದ ಬೆಲೆ ಏರಿಕೆಯ ಅಂಕೆಸಂಖ್ಯೆಗಳು

ಕೋಷ್ಟಕ ಬೆಲೆ ಏರಿಕೆಯ ಪೂರ್ತಿ ಕತೆ ಹೇಳುವುದಿಲ್ಲ. ಕನಿಷ್ಟ ಬೆಲೆ ಏರಿಕೆ ಎರಡು ಪಟ್ಟು, ಗರಿಷ್ಟ 10 ಪಟ್ಟು ಎಂದು ಹೇಳಿದರೆ ಸಾಕು ಈ ಬೆಲೆ ಏರಿಕೆಯ ಅಗಾಧತೆ ಗೊತ್ತಾಗುತ್ತದೆ. ಕೆಲವು ದಿನಗಳಲ್ಲಿ ಈ ಬೆಲೆಗಳು ಈಗಿನ ಬೆಲೆಗಿಂತಲೂ ಏರಿದ್ದು ಉಂಟು - ಉದಾ: ಈರುಳ್ಳಿ ಬೆಲೆ ಕೆಲವು ಸಮಯ ಕೆಲವು ಪಟ್ಟಣಗಳಲ್ಲಿ ಗರಿಷ್ಟ ನಮೂದಿತ ಬೆಲೆಯ ಎರಡರಷ್ಟು ಅಂದರೆ ರೂ. 100 ಆಗಿತ್ತು.

ಬೆಲೆ ಏರಿಕೆಗಿಂತಲೂ ಭಯಾನಕವಾಗಿ ಕಂಡದ್ದು, ಆ ಬಗ್ಗೆ ಬಿಜೆಪಿಯ ಕೇಂದ್ರ ಸರ್ಕಾರ ಹಾಗೂ ರಾಜ್ಯ ಸರಕಾರಗಳ ಧೋರಣೆ. ದಿವ್ಯ ನಿರ್ಲಕ್ಷ್ಯದಿಂದ ಪರಿಸ್ಥಿತಿಯನ್ನು ಇನ್ನಷ್ಟು ಹದಗೆಡಿಸುವ ಕಿಡಿಗೇಡಿ ಕ್ರಮದವರೆಗೆ ಈ ವಿಚಿತ್ರ ಧೋರಣೆ, ಮಿತ್ರ ಪಕ್ಷಗಳ ಒತ್ತಡ, ಐದು ರಾಜ್ಯಗಳ ಚುನಾವಣೆ ಇಲ್ಲದಿದ್ದರೆ ಈ ಸರ್ಕಾರ ಈ ಬಗ್ಗೆ ತಲೆ ಕೆಡಿಸಿಕೊಳ್ಳುತ್ತಿರಲಿಲ್ಲ.

ಕಾರಣ ಏನು - ವರುಣ ದೇವರೇ, ಪೂರ್ವಜನ್ಮದ ಪಾಪ ಫಲವೇ?

ಒಟ್ಟಾರೆ ಗ್ರಾಹಕಬೆಲೆ ಸೂಚ್ಯಂಕ ಶೇಕಡಾ 14 ರಷ್ಟು ಏರಿಕೆ ಕಂಡಿದೆ. ಹಣದುಬ್ಬರ ಎರಡಂಕಿ ದಾಟಿದೆ. ಇದರ ಹೆಚ್ಚಿನ ಭಾಗ ಅಗತ್ಯ ವಸ್ತುಗಳ ಬೆಲೆ ಏರಿಕೆ ಎಂದು ಬೇರೆ ಹೇಳಬೇಕಾಗಿಲ್ಲ. ಹಣ್ಣು-ತರಕಾರಿಗಳ ಬೆಲೆ ಕಳೆದ ಆರು ತಿಂಗಳಲ್ಲಿ ಶೇಕಡಾ 50 ರಷ್ಟು ಹೆಚ್ಚಿದೆ.

ಈ ಭಾರೀ ಬೆಲೆ ಏರಿಕೆಗೆ ಕಾರಣವೇನು? ಬಿಜೆಪಿ ಸರ್ಕಾರ ಸಬೂಬು ಹೇಳುವಂತೆ ವರುಣದೇವರ ಕೋಪವೇ - ಅಕಾಲಿಕ ಮಳೆ, ನೆರೆ ಪ್ರಾಕೃತಿಕ ಕಾರಣಗಳೇ? ಇಲ್ಲ ಪೂರ್ವಜನ್ಮದ ಪಾಪಫಲವೇ? - ಹಿಂದಿನ ಸರ್ಕಾರಗಳ ತಪ್ಪುನೀತಿಗಳ ಫಲವೇ? ಇಲ್ಲ - ವಿರೋಧ ಪಕ್ಷಗಳ ಅಪಪ್ರಚಾರವೇ?

ಈಗ ಕುಖ್ಯಾತ ಈರುಳ್ಳಿಯನ್ನೇ ತೆಗೆದುಕೊಳ್ಳೋಣ. ಅಕಾಲಿಕ ಮಳೆ, ನೆರೆ (ಮುಖ್ಯವಾಗಿ ಮಹಾರಾಷ್ಟ್ರದಲ್ಲಿ) ಯಿಂದಾಗಿ ಸ್ವಲ್ಪ ಮಟ್ಟಿಗೆ ಈರುಳ್ಳಿ ಉತ್ಪಾದನೆ ಕಡಿಮೆಯಾದದ್ದು ನಿಜ. ಆದರೆ ಎಷ್ಟು? ಸುಮಾರು ಶೇಕಡಾ 15 ರಷ್ಟು ಉತ್ಪಾದನೆಯಲ್ಲಿ, ಅದರಿಂದಾಗಿ ಪೂರೈಕೆಯಲ್ಲಿ ಕೊರತೆ ಉಂಟಾಗಿದೆ. 7 ಪಟ್ಟು ಬೆಲೆ ಹೆಚ್ಚಿದ್ದು ಈ ಕೊರತೆಯಿಂದಾಗಿ ಖಂಡಿತ ಅಲ್ಲ. ತಜ್ಞರ ಅಂದಾಜು ಪ್ರಕಾರ ಶೇಕಡಾ 15 ಪೂರೈಕೆ ಕೊರತೆಯಿಂದ ಹೆಚ್ಚೆಂದರೆ ಶೇಕಡಾ 50 ರಷ್ಟು ಬೆಲೆ ಹೆಚ್ಚಬಹುದು. ಶೇಕಡಾ 700 ಅಲ್ಲ. ಅದೂ ಇದು ಹಠಾತ್ತನೆ ಬೆಳವಣಿಗೆ ಅಲ್ಲ. 97-98 ರ ಸಾಲಿಗೆ ಸುಮಾರು 6 ಲಕ್ಷ ಟನ್ ಈರುಳ್ಳಿ ಕೊರತೆ ಬರುತ್ತದೆ ಎಂಬುದು ಜೂನ್-ಜುಲೈ ಹೊತ್ತಿಗೆ ಖಚಿತವಾಗಿತ್ತು. ಕೊರತೆ ಬಿದ್ದಷ್ಟು ಈರುಳ್ಳಿ ಆಮದು ಮಾಡಿ ಕಾಳಸಂತೆಕೋರರಿಗೆ ಬೆಲೆ ಏರಿಸದಂತೆ ಮಾಡುವ ಬದಲು, ಬಿಜೆಪಿ ಸರ್ಕಾರ ಮಾಡಿದ್ದೇನು? 2 ಲಕ್ಷ ಟನ್ ಈರುಳ್ಳಿಯನ್ನು ಕಾಡಿ ಬೇಡಿ ಸುತ್ತಾಡಿ ಕೊಲ್ಲಿ ದೇಶಗಳಿಗೆ ರಫ್ತು ಮಾಡಿತ್ತು. ಈಗ ಐದು ರಾಜ್ಯಗಳ ಚುನಾವಣೆ ಹತ್ತಿರ ಬರುತ್ತಿದ್ದಂತೆ ಗಾಬರಿಯಿಂದ ಪುನಃ ಹುಚ್ಚುಚ್ಚಾದ ನೀತಿ ಅನುಸರಿಸುತ್ತಿದೆ. ತರಾತುರಿಯಿಂದ ಆಮದು ಮಾಡಲು ಪ್ರಯತ್ನಿಸುತ್ತಿದೆ. ಎಲ್ಲಿಂದ? ನಾವು ರಫ್ತು ಮಾಡಿದ ಕೊಲ್ಲಿ ದೇಶಗಳಿಂದಲೇ? ಈಗ ಈರುಳ್ಳಿ ರಫ್ತು ನಿಷೇಧಿಸಲಾಗಿದೆ. ಈರುಳ್ಳಿಯನ್ನು ಒಜಿಎಲ್(ಒಪನ್ ಜನರಲ್ ಲೈಸೆನ್ಸ್ - ಯಾವುದೇ ಶರತ್ತಿಲ್ಲದೆ ಎಷ್ಟು ಬೇಕಾದರೂ ಆಮದು ಮಾಡುವ ಕ್ರಮ) ನಡಿ ತರಲಾಗಿದೆ. ಅಂದರೆ ಸರ್ಕಾರಿ ಆಮದು ಸಂಸ್ಥೆಗಳಿಂದ ಈಗಿನ ಬಿಕ್ಕಟ್ಟಿಗೆ ಬೇಕಾದಷ್ಟು ಈರುಳ್ಳಿ ಆಮದು ಮಾಡುವ ಬದಲು ಇದನ್ನು ಖಾಸಗಿ ವ್ಯಾಪಾರಿಗಳ ಮರ್ಜಿಗೆ ಬಿಡಲಾಗಿದೆ. ಈ ನೀತಿಯಿಂದ ಸದ್ಯದ ಬಿಕ್ಕಟ್ಟು ಪರಿಹಾರವಾಗಲಿಕ್ಕಿಲ್ಲ. ಮಾತ್ರವಲ್ಲ, ದೂರಗಾಮಿ ಪರಿಣಾಮವಾಗಿ ಈರುಳ್ಳಿ ಬೆಳೆಗಾರರಿಗೆ ಘಾತಕವಾಗಲಿದೆ. ಹೇಗೆ? ಯಾವಾಗಲೂ ಲಾಭದತ್ತ ಮಾತ್ರ ನೋಡುವ ವ್ಯಾಪಾರಿಗಳು ಸಾಕಷ್ಟು ಪ್ರಮಾಣದಲ್ಲಿ ಆಮದು ಮಾಡದೆ ಹೋಗಬಹುದು. ಆಮದು ಮಾಡಿದರೂ ದುಬಾರಿ ಬೆಲೆಗೇ ಮಾಡಬಹುದು. ಅಗತ್ಯಕ್ಕಿಂತ ಹೆಚ್ಚು ಪ್ರಮಾಣದಲ್ಲಿ ಆಮದು ಮಾಡಿದರೆ, ಈರುಳ್ಳಿ ಮಾರಾಟವಾಗದೆ ಹಾಳಾಗಿ ಹೋಗಬಹುದು. ಈ ಬಗ್ಗೆ ಸರ್ಕಾರ ತಲೆ ಕೆಡಿಸಿಕೊಂಡಂತಿಲ್ಲ.

ಪಿತೂರಿ ಯಾರದು?

ಇವೆಲ್ಲಾ ನೋಡಿದರೆ ಈರುಳ್ಳಿ ಬೆಲೆ ಏರಿಕೆ ಕಾಳಸಂತೆಕೋರರ ಪಿತೂರಿಯೇ. ಪೂರೈಕೆ ಕೊರತೆ ಗೊತ್ತಿದ್ದರೂ ಈರುಳ್ಳಿ ಸರ್ಕಾರ ಆಮದು ಮಾಡದಿರುವುದು, ಕಾಳಸಂತೆಕೋರರು ಜನರನ್ನು ಲೂಟಿ ಮಾಡುತ್ತಿದ್ದರೂ ಅದರ ಮೇಲೆ ಕ್ರಮ ಕೈಗೊಳ್ಳದೆ ಸುಮ್ಮನಿರುವುದು, ಈಗ ಒಜಿಎಲ್ ಆಮದಿಗೆ ಅನುವು ಮಾಡಿಕೊಟ್ಟಿರುವುದು - ದೇಶದ ರೈತರ, ಬಡ ಬಳಕೆದಾರರನ್ನು ಸುಲಿಗೆ ಮಾಡಲು ಬಿಜೆಪಿ ಬೆನ್ನೆಲುಬಾದ ವರ್ತಕರಿಗೆ ಈ ಪಕ್ಷದ ಸರ್ಕಾರದ ಕೊಡುಗೆ ಎನ್ನದೆ ಬೇರೆ ಯಾವುದೇ ಅಂಶ ಇಂತಹ ಭಾರಿ ಬೆಲೆ ಏರಿಕೆಯನ್ನು ವಿವರಿಸಲು ಸಾಧ್ಯವಿಲ್ಲ.

ಹಿಂದಿನ ಸರ್ಕಾರಗಳ ನೀತಿಯ ಪರಿಣಾಮವೇ ಈ ಬೆಲೆ ಏರಿಕೆ. ಹಿಂದಿನ ಸರ್ಕಾರಗಳ ತಪ್ಪು ಆರ್ಥಿಕ ನೀತಿಗಳ ಫಲವೇ ಇದು. ಇದರ ಮಟ್ಟಿಗೆ ಸಂಶಯವಿಲ್ಲ. ಆದರೆ ಬಿಜೆಪಿ ಸರ್ಕಾರ ಅದು ತನ್ನದೇ ಆರ್ಥಿಕ ನೀತಿ, ಕಾಂಗ್ರೆಸ್ ಅದನ್ನು ಕದ್ದಿತ್ತು ಎಂದೆಲ್ಲ ಹಿಂದೆ ಇದೇ ನೀತಿಗಳನ್ನು ಹಾಡಿ ಹೊಗಳಿತ್ತು. ಅಲ್ಲದೆ ಅದೇ ನೀತಿಯನ್ನು ಇನ್ನಷ್ಟು ಬಿರುಸಿನಿಂದ ಈಗ ಮುಂದೊಯ್ಯಲಾಗುತ್ತಿದೆ.

ಮುಂದಿನ ಬಲಿ - ಅಕ್ಕಿ?

ಬಿಜೆಪಿ ಸರ್ಕಾರದ ಬೆಂಬಲದ ಭರವಸೆಯಿಂದ ಕಾಳಸಂತೆಕೋರ ವರ್ತಕರು ಇದೇ ರೀತಿ ಅಕ್ಕಿಯ ಬೆಲೆಯನ್ನು ಏರಿಸಲು ಹವಣಿಸುತ್ತಿದ್ದಾರೆ ಎಂಬ ಬಗ್ಗೆ ಸ್ಪಷ್ಟ ಸೂಚನೆಗಳು ಇವೆ. ದಕ್ಷಿಣ ಪೂರ್ವ ಏಶ್ಯಾದಲ್ಲಿ ಅಕ್ಕಿಯ ಕಣಜವಾದ ಥೈಲೆಂಡಿನಲ್ಲಿ ಭತ್ತದ ಉತ್ಪಾದನೆ ಕುಸಿತದಿಂದ ದಕ್ಷಿಣ ಪೂರ್ವ ಏಶ್ಯಾ ಅಕ್ಕಿ ಆಮದಿಗೆ ಬೇಡಿಕೆ ಏರುವ ಎಲ್ಲಾ ಸೂಚನೆಗಳು ಬಂದಿವೆ. ಈ ರಫ್ತಿಗಾಗಿ ವರ್ತಕರು ಅಕ್ಕಿ ಶೇಖರಣೆ ಮಾಡುತ್ತಿದ್ದಾರೆ ಎಂಬ ಅಂಶ ಹಲವು ತಜ್ಞರ ಗಮನಕ್ಕೆ ಬಂದಿದೆ. ಸರ್ಕಾರಿ ಏಜೆನ್ಸಿಗಳ ಲೆವಿ ಭತ್ತದ ಸಂಗ್ರಹ ಭಾರೀ ಕಡಿಮೆ ಇದೆ. ಸಾಮಾನ್ಯವಾಗಿ ಅಕ್ಟೋಬರ್ ವೇಳೆಗೆ ಶೇಕಡಾ 30 ದಾಟಬೇಕಾಗಿದ್ದ ಸಂಗ್ರಹ ಕುಂಠಿತವಾಗಿದೆ, ಅರ್ಧದಷ್ಟಿದೆ. ಆದರೆ ಖಾಸಗಿ ರೈಸ್‌ಮಿಲ್ಲಿಗೆ ಭತ್ತದ ಕೊರತೆಯೇ ಇಲ್ಲ. ಒಟ್ಟು ಮಾರುಕಟ್ಟೆಯ ಶೇಕಡಾ 44 ರಷ್ಟು ಈಗಾಗಲೇ ಖಾಸಗಿ ಮಿಲ್ಲುಗಳನ್ನು ಸೇರಿವೆ. ಇದು ಸ್ಥಳೀಯ ಬೆಲೆ ಏರಿಸಲು ಅಥವಾ ರಫ್ತಿಗೆ ಬೆಲೆ ಏರಿಸಲು ಹುನ್ನಾರ ಎಂದು ತಜ್ಞರು ಅಭಿಪ್ರಾಯ ಪಟ್ಟಿದ್ದಾರೆ.

ಪರಿಹಾರ ಏನು?

ಕಾಳಸಂತೆಕೋರರ ಮೇಲೆ ತೀವ್ರ ಕ್ರಮ, ಸರ್ಕಾರದ ದಾಸ್ತಾನಿನಲ್ಲಿರುವ ಅವಶ್ಯಕ ವಸ್ತುಗಳ ಅವಶ್ಯಕ ಪ್ರಮಾಣದಲ್ಲಿ ನಿಗದಿತ ಬೆಲೆಗೆ ವಿತರಣೆ ಕಾಳಸಂತೆ ಕೋರರ ಮೇಲೆ ಪರಿಣಾಮ ಬೀರ ಬಲ್ಲುದು. ಆದರೆ ಬಿಜೆಪಿ ಸರ್ಕಾರ ತನ್ನ ಬೆಂಬಲಿಗರ ಮೇಲೆ ಕ್ರಮ ತೆಗೆದುಕೊಳ್ಳುತ್ತದೆಯೆ?

ಆದ್ದರಿಂದ ಬಿಜೆಪಿ ಸರ್ಕಾರ ಹೋಗಲೇಬೇಕು. ಮುಂಬರುವ ಚುನಾವಣೆಗಳು ಶತಾಯಗತಾಯ ಬಿಜೆಪಿ ಪಕ್ಷ ಈ ರಾಜ್ಯಗಳಲ್ಲಿ ಅಧಿಕಾರಕ್ಕೆ ಬರದಂತೆ ನೋಡಿಕೊಳ್ಳುವುದು ಅಷ್ಟೇ ಮುಖ್ಯ.

ಇದಕ್ಕೆ ದೂರಗಾಮಿ ಪರಿಹಾರವೆಂದರೆ 14 ಅವಶ್ಯಕ ವಸ್ತುಗಳನ್ನು ನಿಗದಿತ ಬೆಲೆಯ ಅಗತ್ಯ ಪ್ರಮಾಣದಲ್ಲಿ ಸಾರ್ವಜನಿಕ ವಿತರಣ ವ್ಯವಸ್ಥೆ ಮೂಲಕ ಹಂಚುವುದು. ○

ಕೋಷ್ಟಕ - 1

ದೆಹಲಿಯಲ್ಲಿ ಬೆಲೆ ಏರಿಕೆ (ಪ್ರತಿ ಕಿಲೋಗೆ)

ತರಕಾರಿ	ಈಗ ಬೆಲೆ	ಒಂದು ವರ್ಷದ ಹಿಂದೆ	ಬೆಲೆ ಏರಿಕೆ ಪಟ್ಟು
ಈರುಳ್ಳಿ	50.-60	6.7	8 ಪಟ್ಟು
ಆಲೂಗಡ್ಡೆ	20.24	4-5	5 ಪಟ್ಟು
ಟೊಮೆಟೋ	40-45	12-16	3.5 ಪಟ್ಟು
ಕಾಲಿಫ್ಲವರ್	35-40	8-10	4 ಪಟ್ಟು
ಕ್ಯಾರಟ್	30-40	10-12	3 ಪಟ್ಟು
ಬೀನ್ಸ್	25-30	8-10	3 ಪಟ್ಟು
ಕ್ಯಾಬೇಜ್	30-35	8-12	4 ಪಟ್ಟು
ಬೆಳ್ಳುಳ್ಳಿ	40-45	20-25	2 ಪಟ್ಟು
	120-150	12-15	10 ಪಟ್ಟು
ಮೂಲಂಗಿ	15-25	4-5	3 ಪಟ್ಟು

ಬೆಲೆಯೇರಿಕೆಯ ಪ್ರಮಾಣ ಎಷ್ಟು

ಬಳಕೆದಾರರ ಬೆಲೆ ಸೂಚ್ಯಂಕ(1982 ಆಧಾರ ವರ್ಷ)

ತಿಂಗಳು	ಸೂಚ್ಯಂತ	ತಿಂಗಳು	ಸೂಚ್ಯಂಕ	% ಏರಿಕೆ
ಅಕ್ಟೋಬರ್ 96	346	ಅಕ್ಟೋಬರ್ 97	365	5.49
ನವೆಂಬರ್ 96	349	ನವೆಂಬರ್ 97	366	4.87
ಡಿಸೆಂಬರ್ 96	350	ಡಿಸೆಂಬರ್ 97	372	6.29
ಜನವರಿ 97	350	ಜನವರಿ 98	384	9.71
ಫೆಬ್ರವರಿ 97	350	ಫೆಬ್ರವರಿ 98	382	9.74
ಮಾರ್ಚ್ 97	351	ಮಾರ್ಚ್ 98	380	8.26
ಏಪ್ರಿಲ್ 97	354	ಏಪ್ರಿಲ್98	383	8.19
ಮೇ 97	352	ಮೇ 98	389	10.05
ಜೂನ್ 97	355	ಜೂನ್ 98	399	12.39
ಜುಲೈ 97	358	ಜುಲೈ 98	411	14.84
ಆಗಸ್ಟ್ 97	359	ಆಗಸ್ಟ್ 98	413	15.04
ಸೆಪ್ಟೆಂಬರ್ 97	361	ಸೆಪ್ಟೆಂಬರ್ 98	420	16.34

ಚುನಾವಣೆ: ಬಿಜೆಪಿಗೆ ಬಂಡಾಯದ ಬಿಸಿ

ಈ ತಿಂಗಳ 25 ರಂದು ನಾಲ್ಕು ರಾಜ್ಯಗಳ ವಿಧಾನಸಭೆಗಳಿಗೆ ಚುನಾವಣೆ ನಡೆಯಲಿದೆಯಷ್ಟೆ. ಮಧ್ಯಪ್ರದೇಶ, ರಾಜಸ್ಥಾನ, ದೆಹಲಿ ಮತ್ತು ಮಿಜೋರಂ ಆ ನಾಲ್ಕು ರಾಜ್ಯಗಳು.

ಈ ಚುನಾವಣೆಗಳ ಫಲಿತಾಂಶ ರಾಜಕೀಯವಾಗಿ ಮಹತ್ವದ ಪರಿಣಾಮ ಬೀರುವಂಥದ್ದಾಗಿದೆ. ಮುಖ್ಯವಾಗಿ ಕೇಂದ್ರದಲ್ಲಿ ಆಡಳಿತ ನಡೆಸುತ್ತಿರುವ ಕೂಟದ ನಾಯಕ ಪಕ್ಷವಾದ ಭಾರತೀಯ ಜನತಾ ಪಕ್ಷಕ್ಕೆ ಈ ಚುನಾವಣೆ ತುಂಬಾ ಮಹತ್ವದ್ದಾಗಲಿದೆ.

ಬೇರೆಲ್ಲಾ ಅಂಶಗಳ ಜತೆ, ಜನಸಮುದಾಯ ತತ್ತರಿಸುವಂತೆ ಮಾಡಿರುವ ಬೆಲೆಯೇರಿಕೆ ಪ್ರಶ್ನೆ ಬಿಜೆಪಿಗೆ ದೊಡ್ಡ ಹೊಡೆತ ನೀಡುವುದರಲ್ಲಿ ಅನುಮಾನವಿಲ್ಲ. ಬೆಲೆಯೇರಿಕೆ ಅಂಶ ಚುನಾವಣೆ ಮೇಲೆ ಯಾವುದೇ ಪರಿಣಾಮ ಬೀರದು ಎಂದು ಬಿಜೆಪಿ ಇದುವರೆಗೆ ಹೇಳಿಕೊಳ್ಳುತ್ತಿತ್ತು. ಆದರೆ, ಅದೂ ಒಂದು ಮುಖ್ಯ ಪ್ರಶ್ನೆಯೆ ಆಗಿದೆ. ಎಂದು ಸ್ವಂತ ಪ್ರಧಾನಿ ಅಟಲ್ ಬಿಹಾರಿ ವಾಜಪೇಯಿ ಒಪ್ಪಿಕೊಂಡಿದ್ದಾರೆ.

ಇದು ಒಂದೆಡೆಯಾದರೆ, ಮಿಜೋರಂ ಬಿಟ್ಟು ಉಳಿದ ಮೂರು ರಾಜ್ಯಗಳಲ್ಲಿ ಬಿಜೆಪಿ ಭಾರೀ ಬಿಕ್ಕಟ್ಟನ್ನು ಎದುರಿಸುತ್ತಿದೆ. ಒಂದು ಆಂತರಿಕ; ಇನ್ನೊಂದು ಅಂತರ್ ಪಕ್ಷ ಬಿಕ್ಕಟ್ಟು ಅಂದರೆ ಮಿತ್ರಪಕ್ಷಗಳ ನಿಲುವಿನ ಸಮಸ್ಯೆ.

ದೆಹಲಿ ರಾಜಸ್ಥಾನ ಮತ್ತು ಮಧ್ಯಪ್ರದೇಶ ಗಳ ಅನೇಕ ವಿಧಾನಸಭೆ ಕ್ಷೇತ್ರಗಳಲ್ಲಿ ಬಿಜೆಪಿಯ ಬಂಡಾಯ ಅಭ್ಯರ್ಥಿಗಳು ನಾಮಪತ್ರಗಳನ್ನು ಸಲ್ಲಿಸಿದ್ದಾರೆ.

ಕುಣಿಯಲು ಬಾರದವರೂ... ಬೆಲೆ ಏರಿಕೆ ನಿಯಂತ್ರಿಸಲಾಗದವರೂ...!:

ಈರುಳ್ಳಿ, ಉಪ್ಪು ಮತ್ತಿತರ ದಿನಬಳಕೆ ವಸ್ತುಗಳ ಬೆಲೆಗಳನ್ನು ತೀವ್ರವಾಗಿ ಹೆಚ್ಚಿಸುವ ಮೂಲಕ ಸರ್ಕಾರದ ವರ್ಚಸ್ಸಿಗೆ ಕುಂದುಂಟು ಮಾಡಲು ಪಟ್ಟಭದ್ರ ಹಿತಾಸಕ್ತಿಗಳು ಪಿತೂರಿ ಹೂಡಿವೆ ಎಂದು ಭಾರತೀಯ ಜನತಾ ಪಕ್ಷದ ಅಧ್ಯಕ್ಷ ಕುಶಭಾವು ಠಾಕ್ರೆ ಹೇಳಿದ್ದಾರೆ. ನಾಲ್ಕು ರಾಜ್ಯ ವಿಧಾನಸಭೆಗಳಿಗೆ ನ. 25 ರಂದು ನಡೆಯುವ ಚುನಾವಣೆಗೆ ಪಕ್ಷದ ಪರವಾಗಿ ಪ್ರಚಾರ ಕಾರ್ಯವನ್ನು ನವೆಂಬರ್ 10 ರಂದು ದೆಹಲಿಯಲ್ಲಿ ಆರಂಭಿಸಿದ ನಂತರ ಪತ್ರಿಕಾ ಗೋಷ್ಠಿಯನ್ನು ಉದ್ದೇಶಿಸಿ ಮಾತನಾಡುತ್ತಿದ್ದರು.

ಇಲ್ಲಿ ಎರಡು ವರ್ಗದ ಜನರಿದ್ದಾರೆ. ಕದಡಿದ ನೀರಿನಲ್ಲಿ ಮೀನು ಹಿಡಿಯಲು ಯತ್ನಿಸುವವರು (ಬಿಜೆಪಿ ವಿರೋಧಿಗಳು) ಮತ್ತು ಕೃತಕ ಅಭಾವ ಸೃಷ್ಟಿಸಲು ನೇರವಾಗಿ ಕಾರಣಕರ್ತರಾದ ಲಾಭಬಡುಕರು. ಅಕಾಲಿಕ ಮಳೆಯಿಂದ ಪರಿಸ್ಥಿತಿ ಮತ್ತಷ್ಟು ಹದಗೆಟ್ಟಿರುವುದೇ ಬೆಲೆ ಏರಿಕೆಗೆ ಕಾರಣವಾಗಿದೆ ಎಂದು ಠಾಕರೆ ಹೇಳಿದ್ದರು.

ಬಿಜೆಪಿ ನಾಯಕರ ಈ ಪ್ರಲಾಪ ನೋಡಿ ನಗಬೇಕೋ ಅಳಬೇಕೋ ಗೊತ್ತಾಗುವುದಿಲ್ಲ.

ಸರಕಾರದ ಆಡಳಿತ ಸೂತ್ರ ಹಿಡಿದು ಕೊಂಡಿರುವ ಮಂದಿ ಈ ರೀತಿ ವಟಗುಟ್ಟಿದರೆ ಕುಣಿಯಲು ಬಾರದವರು ರಂಗ ಸ್ಥಳ ಡೊಂಕು ಎಂದು ಹೇಳಿದಂತೆ ಎಂಬ ಮಾತು ನೆನಪಿಗೆ ಬಾರದೆ ಇರುವುದಿಲ್ಲ.

ಎಲ್ಲಾ ಆಡಳಿತ ಯಂತ್ರ ಕೈಯಲ್ಲಿಟ್ಟು ಕೊಂಡೂ ಬೆಲೆಯೇರಿಕೆಗೆ ಯಾರದೋಕಡೆ ಬೆರಳು ಮಾಡಿ ತೋರಿಸುವ ಬಿಜೆಪಿ ಕ್ರಮ ಅದರ ಅಸಮರ್ಥತೆ ಹಾಗೂ ಅಧಕ್ಷತೆಯನ್ನು ತೋರಿಸುತ್ತದೆ.

ಇನ್ನು ಲಾಭ ಮಾಡಿಕೊಳ್ಳುವ ವ್ಯಾಪಾರಿ ವರ್ಗದ ಬಗ್ಗೆ ಹೇಳುವುದಾದರೆ, ವರ್ತಕರೇ ಬಿಜೆಪಿಯ ಬೆಂಬಲಿಗ ವಿಭಾಗದಲ್ಲಿ ಪ್ರಮುಖವಾಗಿ ಬರುತ್ತರೆ ಎನ್ನುವುದು ಸುಳ್ಳಲ್ಲ. ಹಾಗಾದರೆ ಅದಕ್ಕೆ ಯಾರು ಹೊಣೆ? ಬಿಜೆಪಿಯೇ ಬೆಲೆ ಯೇರಿಕೆನ್ನು ಬೆಂಬಲಿಸುತ್ತದೆ ಎಂದಾಗುವುದಿಲ್ಲವೇ?

ಸಿದ್ಧಾಂತಕ್ಕೆ ಸಮರ್ಪಿತ ಶಿಸ್ತುಬದ್ಧ ಪಕ್ಷ ಎಂಬ ಬಿಜೆಪಿಯ ಖ್ಯಾತಿಗೆ ಈ ಬಂಡಾಯ ಕಳಂಕ ತಂದಿದೆ ಎನ್ನುವುದಕ್ಕಿಂತ ಇದು ಬಂಡವಾಳಶಾಹಿ ಪಕ್ಷವೊಂದರ ಅಸಲಿ ರೂಪ ಎನ್ನುವುದು ಹೆಚ್ಚು ಸೂಕ್ತವಾಗುತ್ತದೆ.

ಅನೇಕ ಕ್ಷೇತ್ರಗಳಲ್ಲಿ ಬಿಜೆಪಿ ಕಾರ್ಯಕರ್ತರು ತಮ್ಮ ಪಕ್ಷದ ಅಭ್ಯರ್ಥಿಗಳ ವಿರುದ್ಧವೇ ಕಣಕ್ಕಿಳಿದಿದ್ದಾರೆ. ಇನ್ನು ಅನೇಕ ಕಡೆ ಬಿಜೆಪಿ ಕಾರ್ಯಕರ್ತರು, ನಾಯಕರು ಪಕ್ಷ ತೊರೆದು ಬೇರೆ ಪಕ್ಷಗಳತ್ತ ಒಲವು ತೋರಿದ್ದಾರೆ.

ಮಧ್ಯಪ್ರದೇಶದ ಮಾಜಿ ಮುಖ್ಯಮಂತ್ರಿ ಬಿಜೆಪಿಯ ಹಿರಿಯ ನಾಯಕ ಸಕ್ಲೇಚಾ ಇಂತವರಲ್ಲಿ ಮುಖ್ಯರು. ಅವರು ಬಿಜೆಪಿ ಬಿಟ್ಟು ಸಮಾಜವಾದಿ ಪಕ್ಷದ ಟಿಕೆಟಿನಿಂದ ಸ್ಪರ್ಧೆಗೆ ಇಳಿದಿದ್ದಾರೆ. ಸಕ್ಲೇಚಾ ಪಕ್ಷತ್ಯಾಗ ಬಿಜೆಪಿಗೆ ದೊಡ್ಡ ಹೊಡೆತವಾಗಿದೆ.ಎಲ್ಲಾ ಕಡೆ ಈ ಪ್ರವೃತ್ತಿ ಕಂಡು ಬಂದಿದೆ

ಇದರ ಜತೆಗೆ ಮಿತ್ರ ಪಕ್ಷಗಳೂ ಬಿಜೆಪಿ ವಿರುದ್ಧ ಕಣಕ್ಕೆ ಇಳಿದಿರುವುದು ಬಿಜೆಪಿಯ ಚಿಂತೆ ಇಮ್ಮಡಿಗೊಳ್ಳಲು ಕಾರಣವಾಗಿದೆ.

ಮಿತ್ರಪಕ್ಷಗಳ ಸಮನ್ವಯ ಸಮಿತಿಗೆ ರಾಜಿನಾಮೆ ಕೊಟ್ಟು ಬಿಜೆಪಿಗೆ ಇರುಸು ಮುರಿಸಿನ ಸನ್ನಿವೇಶ ನಿರ್ಮಾಣಮಾಡಿದ ತೃಣಮೂಲ ಕಾಂಗ್ರೆಸಿನ ನಾಯಕಿ ಮಮತಾ ಬ್ಯಾನರ್ಜಿ ಚುನಾವಣೆ ವಿಷಯದಲ್ಲಿ ಬಿಜೆಪಿಗೆ ಸವಾಲು ಹಾಕಿದ್ದಾರೆ.

ದೆಹಲಿ ಮತ್ತು ರಾಜಸ್ಥಾನದಲ್ಲಿ ಕನಿಷ್ಠ ಒಂದೊಂದು ಸ್ಥಾನ ಬಿಟ್ಟು ಕೊಡಲು ಮಾಡಿದ ಮನವಿಯನ್ನು ತಳ್ಳಿಹಾಕಿದ ಬಿಜೆಪಿ ಮೇಲೆ ಕೋಪಗೊಂಡಿರುವ ಬ್ಯಾನರ್ಜಿ ಈ ರಾಜ್ಯಗಳ ಕೆಲವು ಕ್ಷೇತ್ರಗಳಲ್ಲಿ ಅಭ್ಯರ್ಥಿಗಳನ್ನು ಇಳಿಸಿದ್ದಾರೆ. ಮಧ್ಯಪ್ರದೇಶದ ಒಂದು ಕ್ಷೇತ್ರದಲ್ಲೂ ಪಕ್ಷೇತರ ಅಭ್ಯರ್ಥಿಯನ್ನು ಕಣಕ್ಕಿಳಿಸಿದ್ದಾರೆ.

ಸಮತಾ ಪಕ್ಷ, ಲೋಕಶಕ್ತಿ ಶಿವಸೇನೆ ಮತ್ತು ಇತರ ಕೆಲ ಮಿತ್ರಪಕ್ಷಗಳೂ ಈ ರಾಜ್ಯಗಳಲ್ಲಿ ಚುನಾವಣೆ ಕಣಕ್ಕೆ ಇಳಿಯಲು ನಿರ್ಧರಿಸಿವೆ. ಇದರಿಂದಲೂ ಬಿಜೆಪಿಯ ಗೆಲುವಿನ ಮೇಲೆ ಪರಿಣಾಮ ಉಂಟಾಗುವುದು ನಿಶ್ಚಿತ.

ಕಾದಿದೆ ಉಚ್ಚಾಟನೆ !:

ಬಿಜೆಪಿ ಅಭ್ಯರ್ಥಿಗಳ ವಿರುದ್ಧ ನಾಮಪತ್ರ ಸಲ್ಲಿಸಿರುವವರ ವಿರುದ್ಧ ಉಚ್ಚಾಟನೆಯ ಶಿಕ್ಷೆ ಕಾದಿದೆ. ನಾಮಪತ್ರಗಳನ್ನು ಹಿಂತೆಗೊಳ್ಳದಿರುವ ಪಕ್ಷದ ಬಂಡಾಯ ಅಭ್ಯರ್ಥಿಗಳನ್ನು ಪಕ್ಷವಿರೋಧಿ ಚಟುವಟಿಕೆಗಳಿಗಾಗಿ ವಜಾಮಾಡಲಾಗುವುದೆಂದು ಹೈಕಮಾಂಡ್ ಎಚ್ಚರಿಕೆ ನೀಡಿದೆ.

ಬೆಂಬಲ ನೀಡದಿರಲು ನಿರ್ಧಾರ:

ಈ ನಡುವೆ, ಚುನಾವಣೆಯಲ್ಲಿ ಬಿಜೆಪಿಗೆ ಬೆಂಬಲ ನೀಡದಿರಲು ದಿಲ್ಲಿ ಗ್ರಾಮವಿಕಾಸ ಪಂಚಾಯತ್ ನಿರ್ಧರಿಸಿದೆ. ಇದು 350ಕ್ಕೂ ಹೆಚ್ಚು ಗ್ರಾಮ ಪಂಚಾಯಿತಿಗಳನ್ನೊಳಗೊಂಡ ಸಂಸ್ಥೆಯಾಗಿದೆ.

ದೇಶದೊಳಗೆ

ವಿಶ್ವ

ಕ್ರಿಮಿನಲ್ ಜತೆ ಬಿಜೆಪಿ ಸಖ್ಯ

ಉತ್ತರ ಪ್ರದೇಶದ ಪೋಲೀಸರು ಈಚೆಗೆ ಕೊಂದು ಹಾಕಿದ ಕುಖ್ಯಾತ ವೃತ್ತಿಪರ ಕೊಲೆಗಾರ, ಭೂಗತ ಜಗತ್ತಿನ ನಾಯಕ ಶ್ರೀಪ್ರಕಾಶ್ ಶುಕ್ಲಾ ಭಾರತೀಯ ಜನತಾ ಪಕ್ಷ ಮತ್ತು ಅದರ ಮಿತ್ರ ಪಕ್ಷಗಳ ಜತೆ ಸಖ್ಯ ಹೊಂದಿದ್ದ ಎಂಬ ಅಂಶ ರಾಜ್ಯದ ರಾಜಕೀಯದಲ್ಲಿ ಅಲ್ಲೋಲ ಕಲ್ಲೋಲವನೆಬ್ಬಿಸಿದೆ. ಈ ಅಂಶ ಬಿಜೆಪಿಯ ಮುಖ್ಯಮಂತ್ರಿ ಕಲ್ಯಾಣ್ ಸಿಂಗ್ ಅವರನ್ನು ಇಕ್ಕಟ್ಟಿಗೆ ಸಿಲುಕಿಸಿದೆ.

ರಾಜ್ಯದಲ್ಲಿ ಹಾವಳಿ ನಡೆಸುತ್ತಿದ್ದ ಶುಕ್ಲಾನ ಜತೆ ಹಲವಾರು ಮಂತ್ರಿಗಳು ಸಂಬಂಧ ಹೊಂದಿದ್ದಾರೆ ಅಂತವರ ವಿರುದ್ಧ ಕ್ರಮಕೈಗೊಳ್ಳಲು ತಾನು ಹಿಂಜರಿಯುವುದಿಲ್ಲ ಎಂದು ಕಲ್ಯಾಣ್‌ಸಿಂಗ್ ಘೋಷಿಸಿದ್ದರು.

ಉತ್ತರ ಪ್ರದೇಶವಲ್ಲದೆ ಬಿಹಾರದಲ್ಲಿ ಕೂಡ ಭಯದ ವಾತಾವರಣ ಸೃಷ್ಟಿಸಿದ್ದ ಶುಕ್ಲಾನ ವಿರುದ್ಧ ಕಾರ್ಯಾಚರಣೆಗೆ ವಿಶೇಷ ದಳವನ್ನು ರಚಿಸಲಾಗಿತ್ತು. ಆತನನ್ನು ಹಾಗೂ ಇಬ್ಬರು ಸಹಚರರನ್ನು ಕೊನೆಗೂ ಹತ್ಯೆ ಮಾಡುವಲ್ಲಿ ಪೊಲೀಸರು ಯಶಸ್ವಿಯಾಗಿದ್ದರು. ಜೀವಂತವಿದ್ದಾಗ ಜನರನ್ನು ಕಾಡುತ್ತಿದ್ದ ಶುಕ್ಲಾ ಇದೀಗ ಸಾವಿನ ನಂತರ ಬಿಜೆಪಿ ಮತ್ತದರ ಮಿತ್ರಪಕ್ಷಗಳಿಗೆ ದುಃಸ್ವಪ್ನವಾಗಿ ಕಾಡುತ್ತಿದ್ದಾನೆ.

ಕಲ್ಯಾಣ್ ಸಿಂಗ್ ಸರಕಾರದ ಕೆಲವು ಮಂತ್ರಿಗಳೊಡನೆ ಶುಕ್ಲಾಗೆ ಸಂಬಂಧವಿತ್ತು ಎಂದು ಆತ ಜೀವಂತವಿದ್ದಾಗಲೇ ಅನುಮಾನವಿತ್ತು. ಈ ವಿಚಾರದಲ್ಲಿ ಪೋಲೀಸರಿಗೆ ಕೆಲವು ಸುಳಿವುಗಳು ದೊರೆತಿವೆಯಾದರೂ ಈ ಮಂತ್ರಿಗಳನ್ನು ವಿಚಾರಣೆಗೆ ಒಳಪಡಿಸಲು ಹಿಂದೆ ಮುಂದೆ ನೋಡುತ್ತಿದ್ದಾರೆ. ಶುಕ್ಲಾನ ಹತ್ಯೆಯಾದ ನಂತರ ಸಿಕ್ಕಿದ ಒಂದು ಡೈರಿಯಲ್ಲಿ ಉತ್ತರ ಪ್ರದೇಶದ ಹಲವು ಸಚಿವರ ಹೆಸರುಗಳೂ ಇವೆ. ಈ ಆಧಾರದಲ್ಲಿ ಯಾರ ವಿರುದ್ಧವೂ ಕ್ರಮ ಕೈಗೊಳ್ಳುವ ವಿಚಾರದಲ್ಲಿ ರಾಜ್ಯ ಬಿಜೆಪಿಯಲ್ಲಿ ಭಿನ್ನಾಭಿಪ್ರಾಯ ಉಂಟಾಗಿದೆ.

ಭೂಗತ ಜಗತ್ತಿನ ದೊರೆ ಜತೆ ಮಂತ್ರಿಗಳು ಸಂಬಂಧ ಹೊಂದಿದ್ದರು ಎಂಬ ವಿಚಾರದಲ್ಲಿ ಅಲಹಾಬಾದ್ ಹೈಕೋರ್ಟಿಗೆ ಒಂದು ಅರ್ಜಿ ಸಲ್ಲಿಕೆಯಾಗಿದ್ದು ವಿಚಾರಾತ್ಮಕ ಪ್ರಕರಣ ಹೊಸ ಆಯಾಮವನ್ನು ಪಡೆದು ಕೊಂಡಿದೆ.

ಅಧಿಕಾರಿಗಳಿಗೆ ಚುರುಕು ಮುಟ್ಟಿಸಿದ ಉ.ಕ.ಜಿಲ್ಲಾ ಅಂಗನವಾಡಿ ನೌಕರರ ಹೋರಾಟ

ಕಾರ್ಮಿಕರನ್ನು, ರೈತರನ್ನು, ನೌಕರರನ್ನು ಶೋಷಿಸುವುದು ಇಂದಿನ ಸರ್ಕಾರಗಳ ವಾರ್ಷಿಕ ಕಾರ್ಯಕ್ರಮದ ಪಟ್ಟಿಯಲ್ಲಿಯೇ ಇದೆಯೋ ಎನ್ನುವ ಸಂಶಯ ಬರುವಷ್ಟು ಮಟ್ಟಿಗೆ ಅವರ ಆಡಳಿತ ವೈಖರಿ ಇದೆ. ಕೆಲವರನ್ನು ಶೋಷಿಸುವಾಗ ಅಧಿಕಾರಿಗಳು, ರಾಜಕಾರಣಿಗಳು ಸ್ವಲ್ಪ ಸುತ್ತುಬಳಸಿ ವ್ಯವಹರಿಸುತ್ತಾರೆ. ಆದರೆ ಅಂಗನವಾಡಿ ಕೇಂದ್ರಗಳು ಇವರ ಹಗಲು ಶೋಷಣೆಯ ಕೇಂದ್ರಗಳಾಗಿರುವುದು ಇಲ್ಲಿಯ ಕೆಲಸಗಾರರನ್ನು ಸಾಮಾನ್ಯ ದರ್ಜೆಯ ಮನುಷ್ಯರೆಂದೂ ಪರಿಗಣಿಸದಿರುವುದು ವಿಷಾದದ ಸಂಗತಿ.

ಸಿಐಟಿಯುವಿನ ಅಡಿಯಲ್ಲಿ ಸಂಘಟಿತರಾಗುತ್ತಿರುವ ಅಂಗನವಾಡಿ ನೌಕರರು ಈ ಎಲ್ಲಾ ನಂಬಿಕೆಗಳನ್ನು ಹುಸಿಗೊಳಿಸುವಲ್ಲಿ ಮಹತ್ವದ ಹೆಜ್ಜೆ ಇಡುತ್ತಿದ್ದಾರೆ.

ಉ.ಕ.ಜಿಲ್ಲೆಯಲ್ಲಿರುವ 11 ತಾಲೂಕುಗಳಲ್ಲಿ ಸುಮಾರು 1500 ಕೇಂದ್ರಗಳಲ್ಲಿ 3000 ನೌಕರರಿದ್ದಾರೆ. ಇವುಗಳಲ್ಲಿ ಭಟ್ಕಳ, ಕುಮಟಾ, ಸಿರ್ಸಿ, ಸಿದ್ದಾಪುರ, ಅಂಕೋಲ, ಕಾರವಾರ, ಯಲ್ಲಾಪುರ ತಾಲೂಕುಗಳಲ್ಲಿ ಸಿಐಟಿಯು ಸಂಘಟನೆ ಇದ್ದು ಉಳಿದಂತೆ ಜೊಯ್ದಾ ಮುಂಡಗೋಡು, ಹಳಿಯಾಳ ತಾಲೂಕಿನಲ್ಲಿ ನೌಕರರ ಒಂದು ಭಾಗ ಸಿಐಟಿಯು ಅಡಿಯಲ್ಲಿ ಸಂಘಟಿತರಾಗಿದ್ದಾರೆ. ಹೊನ್ನಾವರ ತಾಲೂಕಿನಲ್ಲಿ ಮಾತ್ರ ಬಿಜೆಪಿ ಜನ ಇದ್ದ ಸಂಘಟನೆಯನ್ನು ಒಡೆದು ಅಲ್ಲಿಯ ಸಿ.ಡಿ.ಪಿ.ಓ.ಗಳಿಗೂ ಮತ್ತು ಅಲ್ಲಿಯ ಅಧಿಕಾರಿ ರಾಜಕಾರಣಿಗಳಿಗೆ ಹಣ ಎತ್ತಲು ನೌಕರರ ನೇಮಕಾತಿಯ ಸಂದರ್ಭದಲ್ಲಿ ಅವ್ಯವಹಾರ ನಡೆಸಲು ಒಂದು ಅವಕಾಶ ಮಾಡಿಕೊಟ್ಟಿದ್ದಾರೆ. (ಇವರ ಸಂಘಟನೆಯ ಉದ್ದೇಶ ಇದೇ ಅಲ್ಲವೇ?)

ಇವರ ಸಂಘಟಿತ ಹೋರಾಟಕ್ಕೆ ಒಂದು ಬಾರೀ ಯಶಸ್ಸು ಸಿಕ್ಕಿದ್ದು ಇವರಲ್ಲಿ ಇನ್ನಷ್ಟು ವಿಶ್ವಾಸ ತುಂಬಿತು.

ಅಕ್ಟೋಬರ್ 12 ರಿಂದ 17 ವರೆಗೆ ಉ.ಕ.ಜಿಲ್ಲಾ ಪಂಚಾಯತ್ ಕಛೇರಿಯ ಮುಂದೆ ಹಗಲುರಾತ್ರಿ ಉಪವಾಸ ಮುಷ್ಕರ ನಡೆಸಿದರು. ಪ್ರತಿ ದಿನ ಒಂದೊಂದು ತಾಲೂಕುಗಳಿಂದ ಬಂದ 200-300 ಮಹಿಳೆಯರು ಸುರಿದ ಮಳೆಯಲ್ಲಿಯೂ ಕೂಡ ಕದಲದೆ ಹೋರಾಟ ನಡೆಸಿದ್ದು ಉ.ಕ.ಜಿಲ್ಲೆಯ ಮಹಿಳಾ ಹೋರಾಟದಲ್ಲಿಯೇ ಒಂದು ಮೈಲುಗಲ್ಲು. ಸುಮಾರು 1500 ನೌಕರರು ಈ 6 ದಿನದ ಹೋರಾಟದಲ್ಲಿ ಪಾಲ್ಗೊಂಡರು. ಈ ಸ್ಥಳಕ್ಕೆ ಜಿಲ್ಲಾ ಪಂಚಾಯತ್ ಅಧ್ಯಕ್ಷೆ, ಕೆಲವು ಸದಸ್ಯರು, ಬೇರೆ ಬೇರೆ ಸಂಘಟನೆಯ ಪದಾಧಿಕಾರಿಗಳು, ಲೇಖಕರು ಭೇಟಿ ಕೊಟ್ಟು ಶುಭ ಹಾರೈಸಿದರು ಅನ್ನುವುದಕ್ಕಿಂತ ಇವರ ಸಂಬಳ ಇನ್ನಿತರ ಸವಲತ್ತುಗಳನ್ನು ಕೇಳಿ ಸರಕಾರಗಳಿಗೆ ಛೀಮಾರಿ ಹಾಕಿದರು. ಹಾಡುಗಳು, ಘೋಷಣೆಗಳು, ಭಾಷಣಗಳ ಮೂಲಕ ಸಾರ್ವಜನಿಕರ ಗಮನವನ್ನು ಸೆಳೆದರು.

ಉ.ಕನ್ನಡ ಜಿಲ್ಲಾ ವಾರ್ತಾಪತ್ರ — ವಿಠ್ಠಲ

ರಾತ್ರಿ ಹಗಲೆನ್ನದೆ ಜಿಲ್ಲೆಯ ಮೂಲೆ ಮೂಲೆಯಿಂದ ಬಂದ ನೌಕರರ ಹೋರಾಟದ ಬಿಸಿ ಅಧಿಕಾರಿಗಳನ್ನು ತಟ್ಟದೆ ಬಿಡಲಿಲ್ಲ. ತಕ್ಷಣ ಅಧಿಕಾರಿಗಳ ಸಭೆ ಸೇರಿ

1. ಈಗಾಗಲೇ ತಿಂದು ಮುಗಿಸಿದ್ದ (ಸುಮಾರು 2 ಕಾಲು ಲಕ್ಷ ರೂಪಾಯಿ) ಪಲ್ಸ್ ಪೋಲಿಯೋ ಹಣವನ್ನು ತಕ್ಷಣ ವಿತರಿಸುವಂತೆ
2. ತಿಂಗಳ 15 ನೇ ತಾರೀಕಿನ ಒಳಗಡೆ ಎಲ್ಲಾ ವೇತನ ಪಾವತಿಸುವಂತೆ
3. ಕಟ್ಟಿಗೆ ವೆಚ್ಚವನ್ನು ಪಂಚಾಯತ್ ಬದಲು ಆಯೋಜನಾಧಿಕಾರಿಗಳ ಮೂಲಕ ವಿತರಿಸುವಂತೆ
4. ಬಟ್ಕಳದ ಕಾರ್ಯಕರ್ತೆಯರ ಪ್ರಭಾರ ಭತ್ಯೆಯನ್ನು ತಕ್ಷಣ ವಿತರಿಸುವಂತೆ
5. ರಿಜಿಸ್ಟರ್, ಫಾರಂ, ಪಾತ್ರೆಗಳನ್ನು ಹಂತ ಹಂತವಾಗಿ ಪೂರೈಸುವಂತೆ
6. ಆಹಾರ ಸಾಗಾಣಿಕೆಯನ್ನು ರಜಾದಿನಗಳಲ್ಲಿ ಮತ್ತು ರಾತ್ರಿವೇಳೆಯಲ್ಲಿ ಸರಬರಾಜು ಮಾಡದಿರುವಂತೆ ನಿರ್ಣಯ ತೆಗೆದು ಕೊಂಡು ಅದರ ಪ್ರತಿಯನ್ನು ನೌಕರರ ಸಂಘದ ಭದ್ರತಾ ಅಧಿಕಾರಿಗಳಿಗೆ ಕೊಡುವ ಮೂಲಕ ಬೀಸುವ ದೊಣ್ಣೆಯಿಂದ ತಪ್ಪಿಸಿಕೊಂಡರು.

ಇದೇ ತಮ್ಮ ಹೋರಾಟದ ಯಶಸ್ಸು ಎಂಬ ಭ್ರಮೆಗೇನೂ ಇವರು ಒಳಗಾಗಿಲ್ಲ. ತಮ್ಮ ಉಪವಾಸ ಮುಷ್ಕರ ಮುಗಿಸುವ ಮೊದಲು ಕಾರವಾರದ ಬೀದಿಗಳಲ್ಲಿ ಬೃಹತ್ ಮೆರವಣಿಗೆ ನಡೆಸಿದ ನಂತರ ನಾಗರತ್ನ ಪಡಿಯಾರ ಅವರು ಜಿಲ್ಲಾಧಿಕಾರಿಗಳಿಗೆ ಮನವಿ ಅರ್ಪಿಸಿದರು. ಸಾರ್ವಜನಿಕ ಸಭೆಯನ್ನುದ್ದೇಶಿಸಿ ರಾಜ್ಯಕಾರ್ಯದರ್ಶಿ ವರಲಕ್ಷ್ಮಿಯವರು ಮಾತನಾಡಿ 'ಇದು ಅಂಗನವಾಡಿ ಕಾರ್ಯಕರ್ತೆಯರ ಅಳಿವು ಉಳಿವಿನ ಪ್ರಶ್ನೆ. ಈ ಹೋರಾಟ ಇನ್ನಷ್ಟು ತೀವ್ರಗೊಳ್ಳುತ್ತದೆಂದು ಅಧಿಕಾರಿಗಳಿಗೆ, ಸರ್ಕಾರಕ್ಕೆ ಎಚ್ಚರಿಕೆ ಕೊಟ್ಟರು. ಅಂಗನವಾಡಿ ಕೇಂದ್ರಗಳನ್ನು ಗ್ರಾಮ ಪಂಚಾಯತ್‌ಗೆ ಯಾ ಖಾಸಗಿಯವರಿಗೆ ವಹಿಸಿ ಕೊಡಬಾರದು, ಕಾರ್ಯಕರ್ತೆಯರನ್ನು ಸರ್ಕಾರಿ ನೌಕರರೆಂದು ಪರಿಗಣಿಸಿ ಖಾಯಂ ಮಾಡಬೇಕು ಮತ್ತು ಅಲ್ಲಿಯವರೆಗೆ ಕಾರ್ಯಕರ್ತೆಯರಿಗೆ 2000 ರೂ. ಮತ್ತು ಸಹಾಯಕಿಯರಿಗೆ 1200 ವೇತನ ಕೊಡಬೇಕು ಎಂದು ಒತ್ತಾಯಿಸಿದರು.

ಮೆರವಣಿಗೆಯಲ್ಲಿ ಉ.ಕ.ಜಿಲ್ಲಾ ಅಂಗನವಾಡಿ ನೌಕರರ ಸಂಘದ ಪದಾಧಿಕಾರಿಗಳು, ಸಿಐಟಿಯುನ ಎಂ.ಬಿ. ನಾಯ್ಕ, ಸಿ.ಆರ್.ಶ್ಯಾನಭಾಗ, ಡಿ.ವೈ.ಎಫ್.ಐ.ನ ವಿಠ್ಠಲ ಬಂಡಾರಿ, ಕರ್ನಾಟಕ ಪ್ರಾಂತ್ಯ ರೈತ ಸಂಘದ ಬಿ.ಎಲ್.ನಾಯ್ಕ ಎ.ಎಫ್.ಐ.ನ ಯಮುನಾ ಮೊದಲಾದವರು ಪಾಲ್ಗೊಂಡಿದ್ದರು.

ಅಧ್ಯಯನ ಶಿಬಿರ:

ಈ ಹೋರಾಟಕ್ಕೆ ಪೂರ್ವಭಾವಿಯಾಗಿ ಜಿಲ್ಲಾ ಮಟ್ಟದ ಎರಡು ದಿನಗಳ ಅಧ್ಯಯನ ಶಿಬಿರ ಮುರ್ಡೇಶ್ವರದಲ್ಲಿ ನಡೆಯಿತು. ಸುಮಾರು 45 ಜನ ಜಿಲ್ಲೆಯ ಪ್ರಮುಖ ಕಾರ್ಯಕರ್ತೆಯರು ಪಾಲ್ಗೊಂಡ ಈ ಶಿಬಿರದಲ್ಲಿ ಸಂಘಟನೆ ಮತ್ತು ಹೋರಾಟಕ್ಕೆ ಪೂರಕವಾದ ಶಿಕ್ಷಣವನ್ನು ಅವರಿಗೆ ಒದಗಿಸಲಾಯಿತು. ಹೋರಾಟಗಳಿಗೆ ಪೂರಕವಾದ ಸೈದ್ಧಾಂತಿಕ ತಿಳುವಳಿಕೆಯನ್ನು ಒದಗಿಸಿಕೊಡುವುದೇ ಈ ಶಿಬಿರದ ಮುಖ್ಯ ಉದ್ದೇಶಗಳಲ್ಲೊಂದಾಗಿತ್ತು. ಈ ಶಿಬಿರವನ್ನು ಮಾವಳ್ಳಿ ಗ್ರಾಮ ಪಂಚಾಯತ್ ಅಧ್ಯಕ್ಷ ಗೋಪಾಲ ಬೋರಿ ಉದ್ಘಾಟಿಸಿದರು. ಮುಖ್ಯ ಅತಿಥಿಗಳಾಗಿ ಸಿ.ಡಿ.ಪಿ.ಓ. ಕೃಷ್ಣರಾವ್, ವಿಮಾ ನೌಕರರ ಸಂಘದ ಸಿ.ಆರ್. ಶ್ಯಾನಭಾಗ, ಮಾತನಾಡಿದರು. ನಾಗರತ್ನ ಪಡಿಯಾರ ಅಧ್ಯಕ್ಷತೆ ವಹಿಸಿದ್ದರು. ಶ್ರೀ ದೇವಿಭಟ್ ಸ್ವಾಗತಿಸಿದರೆ, ಗೀತಾ ಪಿ. ನಾಯ್ಕ ವಂದಿಸಿದರು. ಯಮುನಾ ಗಾಂವಕರ್ ಕಾರ್ಯ ಕ್ರಮ ನಿರ್ವಹಿಸಿ ದರು. ಸಭೆಯಲ್ಲಿ ಸುಭಾಷ ಕೊಪ್ಪಿಕರ ಮತ್ತು ರಾಜ್ಯ ಸಮಿತಿ ಸದಸ್ಯೆ ಸವಿತಾ ತೆಂಡೂಲ್ಕರ್ ಗಿ ಉಪಸ್ಥಿತರಿದ್ದರು. ಮುಕ್ತಾಯ ಸಮಾರಂಭದಲ್ಲಿ ಡಿ.ವೈ.ಎಫ್.ಐನ ರಾಜ್ಯಅಧ್ಯಕ್ಷ ಶಾಂತರಾಮ ನಾಯ್ಕ ಮತ್ತು ವಿಠ್ಠಲ ಭಂಡಾರಿ ಪಾಲ್ಗೊಂಡು ಮಾತನಾಡಿದರು. ಸರಿತಾ ತನ್ನಡಗಿ ಶಿಬಿರ ಯಶಸ್ವಿಯಾದ ಬಗ್ಗೆ ಹರ್ಷ ವ್ಯಕ್ತಪಡಿಸಿ ಎಲ್ಲರನ್ನು ವಂದಿಸಿದರು.

ಎರಡು ದಿನ ನಡೆದ ಶಿಬಿರದಲ್ಲಿ 'ಸಂಘಟನೆ ಮತ್ತು ಹೋರಾಟ'ದ ಬಗ್ಗೆ ಕುರಿತು ಸಿ.ಆರ್.ಶ್ಯಾನಭಾಗ, 'ಸಿಐಟಿಯು ಪ್ರಾರಂಭ, ಇತಿಹಾಸ, ಧ್ಯೇಯ'ದ ಕುರಿತು ಸಿ. ನಂಜುಂಡಪ್ಪ, 'ನಮ್ಮ ಸವಾಲುಗಳು ಮತ್ತು ಹೋರಾಟದ ಸ್ವರೂಪ' ಕುರಿತು ವರಲಕ್ಷ್ಮಿ ಪಾಠವನ್ನು ನಡೆಸಿಕೊಟ್ಟರು.

ಗ್ರಾಮ ಪಂಚಾಯತ್ ನೌಕರರ ಸಮಾವೇಶ:

ಕರ್ನಾಟಕ ರಾಜ್ಯ ಗ್ರಾಮ ಪಂಚಾಯತ್ ನೌಕರರ ಸಂಘದ ಉತ್ತರ ಕನ್ನಡ ಜಿಲ್ಲಾ ಸಮಾವೇಶ ಇತ್ತೀಚೆಗೆ ಕಾರವಾರದಲ್ಲಿ ಯಶಸ್ವಿಯಾಗಿ ನಡೆಯಿತು.

"ತಮ್ಮ ನ್ಯಾಯಯುತ ಬೇಡಿಕೆಗಳಿಗಾಗಿ ಕಳೆದ ಅನೇಕ ವರ್ಷಗಳಿಂದ ವಿವಿಧ ಹಂತದ ಚಳುವಳಿ ಕಾರ್ಯಕ್ರಮ ನಡೆಸುತ್ತಿದ್ದು ಕೇರಳ, ಪಶ್ಚಿಮ ಬಂಗಾಳ ರಾಜ್ಯಗಳಲ್ಲಿನ ಗ್ರಾಮಪಂಚಾಯತ್ ನೌಕರರ ವೇತನ ಭತ್ಯೆ ಹಾಗೂ ಸೇವಾ ನಿಯಮಗಳನ್ನು ರಾಜ್ಯದಲ್ಲೂ ಜಾರಿ ಮಾಡಬೇಕೆಂದರಲ್ಲದೆ ಈ ಕುರಿತು ಮುಂದಿನ ದಿನಗಳಲ್ಲಿ ರಾಜ್ಯದಾದ್ಯಂತ ಹೋರಾಟವನ್ನು ಬಲಿಷ್ಠಗೊಳಿಸಲು ಕ್ರಮವಹಿಸಲು ವಿ.ಪಿ.ಕುಲಕರ್ಣಿ ಕರೆ ನೀಡಿದರು. ಇವರು ಈ ಸಮಾವೇಶವನ್ನು ಉದ್ಘಾಟಿಸಿ ಮಾತನಾಡುತ್ತಿದ್ದರು.

ಸಮಾವೇಶದ ಅಧ್ಯಕ್ಷತೆಯನ್ನು ಸಿಐಟಿಯು ಜಿಲ್ಲಾ ಅಧ್ಯಕ್ಷ ಟಿ.ಎಸ್. ನಾಯ್ಕ ಅವರು ವಹಿಸಿ ಮಾತನಾಡಿ ಸಿಐಟಿಯು ನೇತೃತ್ವದ ಈ ಹೋರಾಟ ಸರ್ಕಾರ ನಮ್ಮ ನ್ಯಾಯಯುತ ಬೇಡಿಕೆಗಳನ್ನು ಈಡೇರಿಸುವವರೆಗೆ ಮುಂದುವರಿಯುತ್ತದೆ ಎಂದರು.

ಮುಖ್ಯ ಅತಿಥಿಗಳಾಗಿ ಡಿ.ವೈ.ಎಫ್.ಐ.ನ ರಾಜ್ಯ ಅಧ್ಯಕ್ಷ ಶಾಂತರಾಮ ನಾಯ್ಕ, ಕರ್ನಾಟಕ ಪ್ರಾಂತ ರೈತ ಸಂಘದ ಬಿ.ಎಲ್. ನಾಯ್ಕ ಮಾತನಾಡಿ ಹೋರಾಟಕ್ಕೆ ತಮ್ಮ ಬೆಂಬಲ ಸೂಚಿಸಿದರು. ಜಿಲ್ಲೆಯ ನೂರಾರು ನೌಕರರು ಭಾಗವಹಿಸಿ ಚರ್ಚೆಯಲ್ಲಿ ಪಾಲ್ಗೊಂಡು ಮಾತನಾಡಿದರು. ಸಂಘದ ಜಿಲ್ಲಾ ಗೌರವಾಧ್ಯಕ್ಷ ಸುಭಾಶ್ ಕೊಪ್ಪಿಕರ ಪ್ರಸ್ತಾವಿಕವಾಗಿ ಮಾತನಾಡಿದರು.

ಜಿಲ್ಲಾ ಪ್ರಧಾನ ಕಾರ್ಯದರ್ಶಿ ನಾಗೇಶ್ ನಾಯ್ಕ ಆರಂಭದಲ್ಲಿ ಸ್ವಾಗತಿಸಿದರು. ಸಂಘಟನಾ ಕಾರ್ಯದರ್ಶಿ ತುಕಾರಾಂ ನಾಯ್ಕ ವಂದಿಸಿದರು.

ದೇವಳಿಮಕ್ಕಿ ಗ್ರಾಮ ಪಂಚಾಯತ್ ವಾಚ್‌ಮೇನ್ ಆಗಿ ಸೇವೆ ಸಲ್ಲಿಸುತ್ತಿದ್ದ ಚಂದ್ರಕಾಂತ್‌ನಾಯ್ಕ ಅವರನ್ನು ಕೆಲಸದಿಂದ ತೆಗೆದು ಹಾಕಿದ್ದನ್ನು ಖಂಡಿಸಿ ಸಾಮೂಹಿಕ ಸಂಘಟನೆಗಳ ರಾಷ್ಟ್ರೀಯ ವೇದಿಕೆ ಜಾಥಾ ಕಾರ್ಯಕ್ರಮಕ್ಕೆ ಬೆಂಬಲ ಸೂಚಿಸಿ, ಅಂಗನವಾಡಿ ಕೇಂದ್ರಗಳನ್ನು ಗ್ರಾಮ ಪಂಚಾಯತ್‌ಗೆ ವಹಿಸಿ ಕೊಡುವ ಖಾಸಗೀಕರಿಸುವ ನೀತಿಯನ್ನು ಖಂಡಿಸಿ ನಿರ್ಣಯ ತೆಗೆದುಕೊಳ್ಳಲಾಯಿತು.

ಶರತ್ ಚಂದ್ರ

ರಿಪಬ್ಲಿಕನ್ ಬಲಪಂಥೀಯ ವಿಭಾಗಕ್ಕೆ ಅಮೆರಿಕನ್ ಮತದಾರನ ಕೆನ್ನೆಯೇಟು

'ಪೋಲಿ ವಿಚಾರಗಳಲ್ಲಿ ಹಣ ಪೋಲು ಬೇಡ ನಮ್ಮ ಸಮಸ್ಯೆಗಳತ್ತ ಗಮನ ಕೊಡಿ'

ನವೆಂಬರ್ 3 ರಂದು ಅಮೆರಿಕನ್ ಮತದಾರ ತನ್ನ ತೀರ್ಪು ಇತ್ತಿದ್ದಾನೆ- ಮೇಲೆ ಹೇಳಿದ ರೀತಿಯಲ್ಲಿ. ಪಾರ್ಲಿಮೆಂಟಿನ ಎರಡೂ ಸದನಗಳಲ್ಲಿ ಬಹುಮತ ಏರಿಸಿಕೊಂಡು ಕ್ಲಿಂಟರನ್ನು ಅಧ್ಯಕ್ಷ ಪದವಿಯಿಂದ ಕೆಳಗಿಳಿಸಿ ತನ್ನ ಅಭ್ಯರ್ಥಿಯನ್ನು ಅಧ್ಯಕ್ಷರನ್ನಾಗಿಸಲು ಪ್ರಯತ್ನಿಸಿದ ರಿಪಬ್ಲಿಕನ್ ಬಲಪಂಥೀಯ ವಿಭಾಗದ ಪ್ರಯತ್ನಕ್ಕೆ ಆ ಮತದಾರ ತಣ್ಣೀರೆರಚಿ ದ್ದಾನೆ. ಅದಕ್ಕಾಗಿ ಸ್ಪೀಕರ್ ಆಗಿದ್ದ ನ್ಯೂಟ್ ಗಿಂಗ್ರಿಚ್ ಮತ್ತು ಆತನ ಗ್ಯಾಂಗ್ ಬಳಸಿದ ಫ್ಯಾಸಿಸ್ಟ್-ಕ್ರಮಗಳನ್ನು, ಮತ್ತು ಕ್ಲಿಂಟನ್ - ಲೆವಿನ್‌ಸ್ಕಿ ಲೈಂಗಿಕ ಹಗರಣದ ಅತಿ ದುರ್ಬಳಕೆಯನ್ನು ತಾನು ಒಪ್ಪಿಲ್ಲ ಎಂದು ಸ್ಪಷ್ಟಪಡಿಸಿದ್ದಾನೆ. ಮತದಾರನ ತೀರ್ಪು ಎಷ್ಟು ಸ್ಪಷ್ಟವಾಗಿತ್ತೆಂದರೆ ಫಲಿಂತಾಶ ಪ್ರಕಟವಾಗುತ್ತಿದ್ದಂತೆ ಗಿಂಗ್ರಿಚ್‌ಮತ್ತು ಇತರ ಪ್ರಮುಖ ರಿಪಬ್ಲಿಕನ್ ನಾಯಕರ ರಾಜೀನಾಮೆಗೆ ಪಕ್ಷದೊಳಗಿಂದ ಒತ್ತಡ ಬಂತು. ಭಾರಿ ಭಂಡ ಎಂಬ ಕುಖ್ಯಾತಿಯಿದ್ದ ನ್ಯೂಟ್ ಗಿಂಗ್ರಿಚ್ ತಾನು ಸ್ಪೀಕರ್ ಆಗಿ ಮುಂದುವರೆಯುವುದಿಲ್ಲ ಎಂದು ಪ್ರಕಟಿಸಬೇಕಾಯಿತು. ಇಷ್ಟಕ್ಕೂ ರಿಪಬ್ಲಿಕನ್ ಪಕ್ಷವೇನೂ ಬಹುಮತ ಕಳೆದುಕೊಂಡಿಲ್ಲ.

ಆಗಿದ್ದು ಇಷ್ಟೇ - ಸನದಕ್ಕೆ ನಡೆದ ಚುನಾವಣೆಗಳಲ್ಲಿ ರಿಪಬ್ಲಿಕನ್ ಪಕ್ಷ ತನಗೆ ಇದ್ದ ಸೀಟುಗಳಲ್ಲಿ 5 ಸೀಟುಗಳನ್ನು ಕಳೆದು ಕೊಂಡಿದೆ. ಈಗ ಕೆಳಮನೆಯಲ್ಲಿ ರಿಪಬ್ಲಿಕನ್ 223-212 ಸೀಟುಗಳಿಂದ ಬಹುಮತ ಪಡೆದಿದೆ. ಸೆನೆಟ್‌ನಲ್ಲಿ ಯಥಾಸ್ಥಿತಿ ಉಳಿದಿದೆ. ರಿಪಬ್ಲಿಕನ್ 55, ಡೆಮಾಕ್ರಾಟ್ 45. ರಾಜ್ಯ ಗವರ್ನರುಗಳ ಆಯ್ಕೆಯಲ್ಲಿಯೂ ರಿಪಬ್ಲಿಕನ್ನರು ಒಂದು ಏರಿಕೆ ಮಾತ್ರ ಸಾಧಿಸಲು ಸಾಧ್ಯವಾಗಿದೆ. ಆದರೆ ಗವರ್ನರುಗಳ ಚುನಾವಣೆಯಲ್ಲಿ ಪ್ರತಿಷ್ಟಿತ ಕ್ಯಾಲಿಫೋರ್ನಿಯಾ, ನ್ಯೂಯಾರ್ಕ್‌ಗಳಲ್ಲಿ ಡೆಮೊಕ್ರಾಟರು ಗೆದ್ದಿದ್ದಾರೆ. ದಕ್ಷಿಣದ ರಾಜ್ಯಗಳಲ್ಲಿ ಹಿಂದೆ ರಿಪಬ್ಲಿಕನ್ನರ ಕೋಟೆಯಾಗಿದ್ದ ಎರಡು ಮೂರು ರಾಜ್ಯಗಳಲ್ಲಿ ಡೆಮೊಕ್ರಾಟರು ಗೆದ್ದಿದ್ದಾರೆ. ಮಿನ್ನೆಸೊಟಾ ಎಂಬ ರಾಜ್ಯದಲ್ಲಿ ಪೆರೋರ ಮೂರನೇ ಪಕ್ಷದ ಅಭ್ಯರ್ಥಿ ಮಾಜಿ ಬಾಕ್ಸರ್ ಗೆದ್ದು ಮೂರನೇ ಪಕ್ಷದ ಸಾಧ್ಯತೆಯತ್ತ ಬೊಟ್ಟುಮಾಡಿದ್ದಾರೆ. ಎಲ್ಲರನ್ನೂ ಚಕಿತಗೊಳಿಸಿದ್ದಾರೆ. ಜಾರ್ಜ್‌ನ ಇಬ್ಬರು ಮಕ್ಕಳು ಟೆಕ್ಸಾಸ್, ಫ್ಲೋರಿಡಾದ ಗವರ್ನರು ಗಳಾಗಿ ಆಯ್ಕೆಯಾಗಿ ಕೆನಡಿಗಳ ನಂತರ 'ವಂಶಾನುಗತ' ರಾಜಕೀಯದ 'ಬೆದರಿಕೆ' ಹಾಕಿದ್ದಾರೆ! ರಿಪಬ್ಲಿಕನ್ ಬಲಪಂಥೀಯ 'ಗಿಂಗ್ರಿಚ್ ಗ್ಯಾಂಗ್'ನ ಹಲವಾರು ಕುಖ್ಯಾತ ಅಭ್ಯರ್ಥಿಗಳು ನೆಲ ಕಚ್ಚಿದ್ದಾರೆ. ಆರೋಗ್ಯ ಕಲ್ಯಾಣ ಯೋಜನೆ ಕಡಿತಮಾಡಿ 'ಗರ್ಭಪಾತ ವಿರೋಧಿ' ಪ್ರಚಾರದಲ್ಲಿ ಪ್ರಮುಖರಾಗಿದ್ದವರು ಇದರಲ್ಲಿ ಗಮ ನಾರ್ಹರು. ಡೆಮೊಕ್ರಾಟರಲ್ಲಿ 'ಆರೋಗ್ಯ' 'ಶಿಕ್ಷಣ' ಯೋಜನೆಗಳ ಪರ, 'ಕಲುಷಿತ ಚುನಾವಣಾ ನಿಧಿ'ಯ ವಿರುದ್ಧ ಪ್ರಾಮಾಣಿಕ ವಾಗಿ ಹೋರಾಡಿದವರು ಚುನಾಯಿತರಾಗಿ ದ್ದಾರೆ. ರಾಜ್ಯಗಳ ವಿಧಾನ ಸಭೆಗಳಲ್ಲಿ ರಿಪಬ್ಲಿಕನ್ನರಿಗೆ 17 ಮಾತ್ರ ದೊರಕಿದೆ. ಹಲವು ದಕ್ಷಿಣದ ರಾಜ್ಯಗಳಲ್ಲಿ ರಿಪಬ್ಲಿಕನ್ನರು ಸೋತಿದ್ದಾರೆ.

ಇದರರ್ಥ ಈ ಚುನಾವಣಾ ಫಲಿತಾಂಶ ದಿಂದ ಅಮೇರಿಕದ ರಾಜಕೀಯದಲ್ಲಿ ಭಾರಿ ಬದಲಾವಣೆ ಆಗಿದೆ ಎಂದಲ್ಲ. ಅಮೇರಿಕ ಬಂಡವಾಳಶಾಹಿ ಕಬಂಧ ಬಾಹುಗಳ ಎರಡು ಪಕ್ಷ ವ್ಯವಸ್ಥೆಯಲ್ಲಿ ಸಿಕ್ಕಿಹಾಕಿ ಕೊಂಡಿದೆ. ಪ್ರಗತಿಪರ ಮೂರನೇ ಪರ್ಯಾಯದತ್ತ ಹೊರಳಲಿಲ್ಲ. ಚುನಾವಣೆ ಯಲ್ಲಿ ದೊಡ್ಡ ಪ್ರಮಾಣದಲ್ಲಿ ಜನ ಭಾಗವಹಿಸಿ, ಅದನ್ನು ಹೆಚ್ಚು ಪ್ರಾತಿನಿಧಿಕ ವಾಗಿಸಲಿಲ್ಲ. ಈ ಬಾರಿಯೂ ಮೂರನೇ ಎರಡರಷ್ಟು ಅಮೆರಿಕನ್ನರು ಈ 'ನಾಲಾಯಕ್ಕು' ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಅವಿಶ್ವಾಸ ವ್ಯಕ್ತಪಡಿಸಿದರು. ಇದು ಜಗತ್ತಿನ ಎರಡನೇ ಅತಿ ದೊಡ್ಡ ವಿದ್ಯಾವಂತ ಶ್ರೀಮಂತ ಪ್ರಜಾಪ್ರಭುತ್ವ ದೇಶದ ಹಳೆ ರೆಕಾರ್ಡು. ಈ ದೇಶದಲ್ಲಿ ಮತ ಹಾಕದಿರು ವವರು ಬಡವರು, ಬಳಿಯೇತರರು ಹೆಚ್ಚು. ಅವರು ಅಮೇರಿಕನ್ ವ್ಯವಸ್ಥೆಯ ಅಚೆಗಿರು ವವರು. ಈ ಬಾರಿಯೂ ಚುನಾವಣೆಗಳು ಭಾರಿ ದೈತ್ಯ ಕಂಪನಿಗಳು ಲಾಭದಾರರ ಕಲುಷಿತ ಭಾರಿ ಹಣದ ಮೇಲನೆ ನಡೆಯಿತು-ಅಲ್ಲೊಂದು ಇಲ್ಲೊಂದು ಅಪವಾದ ಬಿಟ್ಟರೆ. ಜನರಿಗೆ ಸಂಬಂಧ ವಿಲ್ಲದ ಜನವಿರೋಧಿ ವಿಷಯಗಳು ದೊಡ್ಡ ಚುನಾವಣಾ ವಿಷಯ ವಾಗುವುದರಲ್ಲಿ ಈ ಬಾರಿಯದ್ದೇ ರೆಕಾರ್ಡು ಎನ್ನಬಹುದು.

ಅಧ್ಯಕ್ಷ ಕ್ಲಿಂಟನ್ನರ ಲೈಂಗಿಕ ಹಗರಣವೇ ದೊಡ್ಡ ಚುನಾವಣಾ ವಿಷಯವಾಗಿ ರಿಪಬ್ಲಿಕನ್ ಪಾರ್ಟಿ ಹೊರಟಿತ್ತು. ಲೈಂಗಿಕ ಹಗರಣವೇ ವಿಷಯವಾಗಿ ಉಳ್ಳ ಅಸಭ್ಯ ಟಿ.ವಿ. ಪತ್ರಿಕಾ ಜಾಹೀರಾತಿಗೆ ರಿಪಬ್ಲಿಕನ್ ಪಕ್ಷ ಒಂದು ಕೋಟಿ ಡಾಲರು ಚುನಾವಣೆಯ ಹಿಂದಿನ ಒಂದೇ ದಿನದಲ್ಲಿ ಖರ್ಚುಮಾಡಿತ್ತು.

ಇವೆಲ್ಲ ಇದ್ದರೂ ಚುನಾವಣಾ ಫಲಿತಾಂಶದ ಮಹತ್ವವಿರುವುದು ರಿಪಬ್ಲಿಕನ್ ಪಕ್ಷದ ಅತಿ-ಬಲ ಪಂಥೀಯ ಗುಂಪಿನ ಜನ-ವಿರೋಧಿ ಫ್ಯಾಸಿಸ್ಟ್ ಹುನ್ನಾರಗಳಿಗೆ ಜನ ತಕ್ಕ ಉತ್ತರ ನೀಡಿದ್ದು. ಎರಡನೇ ಮಹಾ ಯುದ್ಧದ ನಂತರ ಅಧ್ಯಕ್ಷರ ಪಕ್ಷ ಅವರ ಅವಧಿಯ ಮಧ್ಯದಲ್ಲಿ ಬರುವ ಸಾರ್ವತ್ರಿಕ ಚುನಾವಣೆಗಳಲ್ಲಿ ಸೀಟುಗಳ ಏರಿಕೆ ಗಳಿಸಿರಲಿಲ್ಲ. (ಅಂದರೆ ಎಲ್ಲಾ ಅಧ್ಯಕ್ಷರೂ ಜನಸಮೂಹಗಳ ಘೋಷಣೆಗಳ ಮೇಲೆ ಗೆದ್ದು, ಎರಡು ವರ್ಷದೊಳಗೆ ಅವರ ಜನ-ವಿರೋಧಿ ನೀತಿ ಬಯಲಾಗುತ್ತಿತ್ತು. ಎಂದರ್ಥ) ಎಂಬ ರೆಕಾರ್ಡು ಮುರಿದಿದ್ದು, ಅಮೆರಿಕದ ಕಮ್ಯುನಿಸ್ಟ್ ಪಕ್ಷ ಮತ್ತು ಅತಿದೊಡ್ಡ ಟ್ರೇಡ್‌ಯೂನಿಯನ್ ಸಂಘಟನೆಯಾದ AFL-CIO ರಿಪಬ್ಲಿಕನ್ನರನ್ನು ಸೋಲಿಸಲು ವಹಿಸಿದ ದೊಡ್ಡ ಪಾತ್ರ. AFL-CIO ನ ಸದಸ್ಯರು ಮತದಾನ ಮಾಡಿದವರಲ್ಲಿ ಶೇಕಡಾ 22 ಎಂದು ಎಕ್ಸಿಟ್ ಪೋಲ್‌ಗಳಿಂದ ತಿಳಿದು ಬಂದಿವೆ. ಇದು ಕಳೆದ ಚುನಾವಣೆಗಿಂತ ಶೇಕಡಾ 8 ರಷ್ಟು ಹೆಚ್ಚಿದೆ. ಇದೇ ರೀತಿ ಬಿಳಿಯೇತರರು (ಕರಿಯರು, ಸ್ಪಾನಿಷ್ ಜನ, ಇತರರು) ಮತದಾನದ ಶೇಕಡಾವಾರು ಸಹ 12 ರಿಂದ 16 ಕ್ಕೇರಿದೆ. ಅಮೆರಿಕದಲ್ಲಿ ಎರಡು-ಪಕ್ಷ ವ್ಯವಸ್ಥೆಯ ಕಬಂಧ ಬಾಹುಗಳನ್ನು ಕಡಿದು, ಮೂರನೇ ಪ್ರಗತಿಪರ ರಾಜಕೀಯ ಬರ ಬೇಕಾದರೆ ಕಾರ್ಮಿಕವರ್ಗ ಬಿಳಿಯೇತರರು ತಮ್ಮ ರಾಜಕೀಯ ನಿರಾಸಕ್ತಿ, ನಿರ್ಲಕ್ಷ ಬಿಡುವುದು ಮುಖ್ಯ. ಆ ಸೂಚನೆಗಳು ಹೆಚ್ಚುತ್ತಿವೆ. ಕುಖ್ಯಾತ ರಿಪಬ್ಲಿಕನ್ನರನ್ನು ಸೋಲಿಸಲು ಈ ವಿಭಾಗಗಳಿಂದ ದೊಡ್ಡ ಸಂಖ್ಯೆಯಲ್ಲಿ ಮತದಾನ ಮಾಡಿದರಂತೆ (ಉದಾ:- ನ್ಯೂಯಾರ್ಕ್ ಮತ್ತು ಕ್ಯಾಲಿಫೋರ್ನಿಯಾದಲ್ಲಿ). ಒಟ್ಟಾರೆಯಾಗಿ ಈ ಚುನಾವಣೆ ಕಳೆದ ಒಂದು ದಶಕದಿಂದ ಅಮೆರಿಕದ ರಾಜಕೀಯ ಬಲದತ್ತ ವೇಗ ವಾಗಿ ಹೋಗುತ್ತಿದ್ದುದನ್ನು ನಿಲ್ಲಿಸಿ ಮಧ್ಯದತ್ತ ನಡೆಸುತ್ತಿದೆ (ಯುರೋಪಿನಲ್ಲಿ ಈ ವರ್ಷದ ಹಲವು ಚುನಾವಣೆಗಳಲ್ಲಿ ಆದಂತೆ).

ಮಧ್ಯ ಅಮೆರಿಕಾದಲ್ಲಿ ಚಂಡಮಾರುತ-ಏಳುಸಾವಿರಕ್ಕೂ ಹೆಚ್ಚುಬಲಿ

ಮಧ್ಯ ಅಮೆರಿಕದಲ್ಲಿ ದಕ್ಷಿಣ ಮೆಕ್ಸಿಕೊ ಹೊಂಡೂರಸ್, ಎಲ್ ಸಾಲ್ವಡೋರ್, ನಿಕರಾಗುವಗಳು ಸೇರಿರುವ ಸುಮಾರು 800 ಕಿ.ಮೀ. ಪ್ರದೇಶ ಇತ್ತೀಚಿನ ವರ್ಷಗಳಲ್ಲಿ ಕಾಣದ ಬಾರಿ ಚಂಡಮಾರುತ ಭಯಾನಕ ದಾಳಿಯಿಂದ ನರಳುತ್ತಿವೆ. 290 ಕಿ.ಮೀ. ವೇಗವನ್ನು ಮುಟ್ಟಿದ ಚಂಡಮಾರುತ ಭಾರಿ ಸೇತುವೆಗಳು ಮನೆಗಳನ್ನು ನಾಶಮಾಡಿ ಭಾರಿ ಸಾವು-ನೋವಿಗೆ ಕಾರಣವಾಗಿದೆ. ಈ ಪ್ರದೇಶದ ಏಳು ಸಾವಿರಕ್ಕೂ ಹೆಚ್ಚು ಜನ ಸತ್ತಿದ್ದಾರೆ. ಸಾವಿರಾರು ಜನ ಮನೆ ಮಾರು ಕಳೆದು ಕೊಂಡಿದ್ದಾರೆ. ಇನ್ನೂ ಸಾವಿರಾರು ಜನ ಕಾಣೆಯಾಗಿದ್ದಾರೆ. ಚಂಡಮಾರುತದಿಂದಾಗಿ ಬಾರಿ ಮಳೆ, ನೆರೆ, ಭೂಕುಸಿತಗಳು ಆಗಿವೆ. ಈ ದೇಶದ ಸರಕಾರಗಳ ಪರಿಹಾರ ಕೆಲಸಗಳು ಈ ಭಾರಿ ದುರಂತವನ್ನು ಎದುರಿಸಲು ಏನೇನೂ ಸಾಲದಂತಾಗಿದೆ. ನಿರೀಕ್ಷಣೆಗೆ ಹೊರಟಿದ್ದ ನಿರಾವರಿ ಅಧ್ಯಕ್ಷರನ್ನು ಕುಪಿತ ಜನ ಗೇಲಿ ಮಾಡಿದರಂತೆ-ನಿಮ್ಮ ಇನ್ಸ್‌ಪೆಕ್ಷನ್ ಬೇಡ, ಆಹಾರ ಎಲ್ಲಿ? ಪರಿಹಾರ ಎಲ್ಲಿ ಅಂತ.

ಇರಾಕ್ ಮೇಲೆ ಇನ್ನೊಂದು ಯುದ್ಧದ ತಯಾರಿಯಲ್ಲಿ ಅಮೇರಿಕ

ಇರಾಕ್ ಮೇಲೆ ಇನ್ನೊಂದು ಯುದ್ಧದ ತಯಾರಿಯಲ್ಲಿದೆ ಅಮೆರಿಕನ್ ಸರ್ಕಾರ ಇತ್ತೀಚೆಗೆ ವಿಶ್ವಸಂಸೆಯ (ಅಮೆರಿಕದ ಎಂದು ಓದಿಕೊಳ್ಳಿ) ನಿಶ್ಶಸ್ತ್ರಕರಣ ನಿರೀಕ್ಷಣಾ ಮಂಡಳಿಯ ಜತೆ ಎಲ್ಲಾ ಸಹಕಾರ ನಿಲ್ಲಿಸಲು ಇರಾಕ್ ಸರ್ಕಾರ ನಿರ್ಧರಿಸಿತ್ತು. ಇದಕ್ಕೆ ಪ್ರತಿಕ್ರಿಯೆಯಾಗಿ ವಿಶ್ವಸಂಸ್ಥೆ ಭದ್ರತಾ ಸಮಿತಿ ಅದನ್ನು ಖಂಡಿಸಿ ಸಹಕಾರ ಪುನರಾರಂಭಿಸಲು ಒತ್ತಾಯಿಸಿತ್ತು. ಅಮೆರಿಕಾ, ಬ್ರಿಟನ್ ಬಯಸಿದಂತೆ ಮಿಲಿಟರಿ ಕಾರ್ಯಚರಣೆಯ ಬೆದರಿಕೆ ಹಾಕಲಿಲ್ಲ. ಭದ್ರತಾ ಸಮಿತಿ ನಿರ್ಣಯ ಇರಾಕ್ ವಿರುದ್ಧ ದಿಗ್ಬಂಧನ ಕೊನೆಗಾಣಿಸಲು ಶರತ್ತುಗಳು ತಾರೀಕು ತಿಳಿಸುವ ವರೆಗೆ ಸಹಕಾರ ಸಾಧ್ಯವಿಲ್ಲ ಎಂದು ಪಟ್ಟುಹಿಡಿದಿದೆ ಸದ್ದಾಂ ಹುಸೇನ್ ಸರಕಾರ. ಇದು ಅಮೆರಿಕ ವನ್ನು ವಿಚಿತ್ರ ಪಜೀತಿಗೆ ಗುರಿಮಾಡಿದೆ. ಆದ್ದರಿಂದ ಅಮೆರಿಕ ಇರಾಕ್ ವಿರುದ್ಧ ಏಕ ಪಕ್ಷೀಯ ಮಿಲಿಟರಿ ಆಕ್ರಮಣದ ತರಾತುರಿ ಯಲ್ಲಿದೆ. ಈ ನಿರ್ಣಯಕ್ಕೆ ಬ್ರಿಟನ್, ಇಸ್ರೇಲ್ ಬಿಟ್ಟರೆ ಯಾರ ಬೆಂಬಲವೂ ಇಲ್ಲ. ಮಧ್ಯ ಏಶ್ಯದ ಅಮೆರಿಕದ ಮಿತ್ರರೂ ಇದನ್ನು ವಿರೋಧಿಸಿದ್ದಾರೆ.

ರಶ್ಯನ್ ಬಿಕ್ಕಟ್ಟು-ಪರಿಹಾರ ಯೋಜನೆಗೆ ಸಂಪುಟ ಸಮಿತಿ

ರಶ್ಯದ ಹೊಸ ಸಂಪುಟ ಪ್ರಧಾನಿ ಪ್ರಿಯಕೊವರ ಆರ್ಥಿಕ-ಬಿಕ್ಕಟ್ಟು ಪರಿಹಾರ ಯೋಜನೆಗೆ ಸಮ್ಮತಿ ನೀಡಿದೆ. ಈ ಯೋಜನೆ ಕಳೆದ ಆರು ವರ್ಷಗಳ ಮುಕ್ತ ಮಾರುಕಟ್ಟೆ ನೀತಿಯ ಹಲವು ಅಂಶಗಳನ್ನು ಬದಲಾಯಿಸಿದೆ. ಬಿಗಿಯಾದ ಕರೆನ್ಸಿ ನಿಯಂತ್ರಣ, ಪೆಟ್ರೋಲ್, ವಿದ್ಯುತ್ ಮತ್ತು ಔಷಧಿಗಳ ಬೆಲೆ ಮೇಲೆ ನಿಯಂತ್ರಣ, ದೇಶಿಯ ಕೈಗಾರಿಕೆಗಳಿಗೆ ಸರಕಾರದ ನೆರವು ಮುಂತಾದವು ಯೋಜನೆಯ ಅಂಶಗಳು. ಬಾಕಿ ಇರುವ ವೇತನ, ಪೆನ್‌ಶನ್ ಮತ್ತು ಇತರ ಪಾವತಿಗಳನ್ನು ಮಾಡುವುದಾಗಿ ಯೋಜನೆ ಭರವಸೆ ನೀಡುತ್ತದೆ. ಬಂಡವಾಳ ಪಲಾಯನದ ಮೇಲೆ ಬಿಗಿ ನಿಯಂತ್ರಣ ಮಾಡಲಾಗಿದೆ. ಪ್ರಿಯಕೊವರ ಯೋಜನೆಗಳು IMF ನ ಸಾಲ ಮತ್ತು ಉತ್ತಮಗೊಳಿಸಿದ ರೆವಿನ್ಯೂ ಸಂಗ್ರಹಣೆ ಮೇಲೆ ಆಧಾರಿತವಾಗಿದೆ. IMF ರಶ್ಯನ್ ಸರ್ಕಾರದ ಯೋಜನೆಯನ್ನು ವಿರೋಧಿಸಿದೆ. ರಶ್ಯನ್ ಪ್ರಧಾನಿ IMF ತನ್ನ ಸಾಲ ನಿಲ್ಲಿಸಿದರೂ ತನ್ನ ಬಿಕ್ಕಟ್ಟು ಪರಿಹಾರ ಯೋಜನೆಯನ್ನು ಜಾರಿ ಮಾಡಲು ಬೇಕಾದ ಸಂಪನ್ಮೂಲಗಳನ್ನು ಜೋಡಿಸುತ್ತದೆ. ರಶ್ಯ ಮೊಣಕಾಲೂರುವುದಿಲ್ಲ ಅಥವಾ ಬಿದ್ದು ಹೋಗುವುದಿಲ್ಲ ಎಂದು ಎಚ್ಚರಿಸಿದ್ದಾರೆ. ಇದು ಸಾಮ್ರಾಜ್ಯ ಶಾಹಿ ದೇಶಗಳಲ್ಲಿ ಕಳವಳಕ್ಕೆ ಕಾರಣವಾಗಿದೆ.

ಇಂಡೋನೇಶ್ಯಾದ ಚೀನಿ ವಿರೋಧಿ ದಂಗೆಯಲ್ಲಿ ಸೈನ್ಯದ ಕೈವಾಡ

ಇಂಡೋನೇಶ್ಯದಲ್ಲಿ ಈ ವರ್ಷದ ಮೇ ನಲ್ಲಿ ಸುಹಾರ್ತೋ ಸರ್ವಾಧಿಕಾರದ ವಿರುದ್ಧ ನಡೆದ ಭಾರಿ ಪ್ರತಿಭಟನೆಯ ಸಮಯದಲ್ಲಿ ನಡೆದ ಚೀನಿ-ವಿರೋಧಿ ದಂಗೆಗಳಲ್ಲಿ ಸೈನ್ಯದ ಕೈವಾಡ ಇತ್ತು. ಇದು ಈ ಬಗ್ಗೆ ನೇಮಿಸಲಾದ 18 ಸದಸ್ಯರ ಕಮಿಶನ್‌ನ ತೀರ್ಮಾನ. ಇದರಲ್ಲಿ ಸರ್ಕಾರ ಸೈನ್ಯ ಮತ್ತು ಮಾನವಹಕ್ಕು ಕಮೀಶನ್, ಖಾಸಗಿ ಗುಂಪುಗಳ ಪ್ರತಿನಿಧಿಗಳು ಇದ್ದರು. 1200 ಚೀನಿಯರ ಕೊಲೆ, ನೂರಕ್ಕೂ ಹೆಚ್ಚು ಚೀನಿ ಮಹಿಳೆಯರ ಮೇಲೆ ಅತ್ಯಾಚಾರ, ಚೀನಿಯರ ಅಂಗಡಿಗಳ ಲೂಟಿಗೆ ಕಾರಣವಾದ ಈ ದಂಗೆಯನ್ನು ಸುಹಾರ್ತೋ ವಿರೋಧಿ ಪ್ರತಿಭಟನಾ ಚಳುವಳಿಯ ಹೆಸರು ಕೆಡಿಸಲು ಸಂಘಟಿಸ ಲಾಗಿತ್ತು ಎಂದು ತೀವ್ರ ಗುಮಾನಿ ವ್ಯಕ್ತ ವಾಗಿದೆ. ಇಂತಹ ನಿಗೂಢ ಕೊಲೆ, ದಾಳಿಗಳು ಈಗ ಕೆಲವು ಇಸ್ಲಾಮಿಕ್ ಗುರುಗಳು, ಪಂಡಿತರ ಮೇಲೆ ನಡೆಯುತ್ತಿದೆ. ಇದೂ ಇಂತಹುದೇ ಪಿತೂರಿ ಇರಬಹುದು ಎನ್ನ ಲಾಗಿದೆ. ಸುಹಾರ್ತೊ ಇಳಿದರೂ ಆತ ಸ್ಥಾಪಿಸಿದ ಸರ್ವಾಧಿಕಾರ ವ್ಯವಸ್ಥೆ ವಿರುದ್ಧ ಪ್ರತಿಭಟನೆ ಮುಂದುವರೆದಿದೆ. ಎಂದು ಇಲ್ಲಿ ನೆನಪಿಸಿಕೊಳ್ಳಲಾಗಿದೆ.

ಸಾಮೂಹಿಕ ಸಂಘಟನೆಗಳ ಜಿಲ್ಲಾ ಸಮಾವೇಶ

ದಾವಣಗೆರೆ: ಅಕ್ಟೋಬರ್ 24 ರಂದು ಕಾಂ|| ಸೂರಿಯವರು ಧ್ವಜಾರೋಹಣ ನಡೆಸುವುದರ ಮೂಲಕ ಜಿಲ್ಲಾಧಿವೇಶನ ಇಲ್ಲಿನ ಕಿರುವಾಡಿ ವೀರಬಸಪ್ಪ ಕಲ್ಯಾಮ ಮಂಟಪದಲ್ಲಿ ಆರಂಭವಾಯಿತು. ಕಾಂ|| ಹೆಚ್.ವಿ. ಅನಂತಸುಬ್ಬರಾವ್ ಸಮಾವೇಶವನ್ನು ಉದ್ಘಾಟಿಸಿದರು. ಎಐಟಿಯುಸಿಯ ಹೆಚ್.ಕೆ. ರಾಮಚಂದ್ರಪ್ಪ ಅಧ್ಯಕ್ಷತೆ ವಹಿಸಿದ್ದರು.

ಸಮಾವೇಶದಲ್ಲಿ ಸುಮಾರು 400 ಜನ ಪ್ರತಿನಿಧಿಗಳು ಭಾಗವಹಿಸಿದ್ದರು. ಇದರಲ್ಲಿ ಸಿಐಟಿಯು, ಎಐಐಇಎ, ಬಿಇಎಫ್‌ಐ, ಎಫ್‌ಎಂಆರ್‌ಐ, ಎಸ್‌ಎಫ್‌ಐ, ಡಿವೈಎಫ್‌ಐಗೆ ಸೇರಿದ ಹಲವು ಸಂಘಟನೆಗಳ ಕಾರ್ಯಕರ್ತರು ಭಾಗವಹಿಸಿದ್ದರು.

ಸಿಐಟಿಯುವಿನ ಎ.ಎಸ್.ಮೂರ್ತಿ, ಎಐಟಿಯುಸಿ ಬೈರಪ್ಪ, ಅಂಗನವಾಡಿಯ ಶಾರದಮ್ಮ, ಡಿವೈಎಫ್‌ಐನ ಬ್ರಹ್ಮದೇವ ಹದಳಗಿ, ಎಐಐಇಎ ನ ಡಿ.ಯೂಕೂಬ್ ರವರು ಅಧ್ಯಕ್ಷ ಮಂಡಳಿಯಲ್ಲಿದ್ದರು. ವರದಿಯ ಮೇಲೆ ಸುಮಾರು 20 ಜನ ಪ್ರತಿನಿಧಿಗಳು ಮಾತನಾಡಿದರು. ಸಕ್ಕರೆ ಉದ್ಯಮ, ವಿಮೆ, ಸಾಮಾನ್ಯ ವಿಮೆ, ಬ್ಯಾಂಕಿಂಗ್ ಉದ್ಯಮ, ರೈತ ಸಂಘ, ಜನವಾದಿ ಮಹಿಳಾ ಸಂಘಟನೆ, ಪಾಲಿಫೈಬರ್ಸ್, ಹತ್ತಿಗಿರಣಿ, ಡಿವೈಎಫ್‌ಐ, ಎಸ್‌ಎಫ್‌ಐ, ಹಮಾಲರ ಸಂಘ, ವಕೀಲರ ಸಂಘ, ಬೀಡಿ ಕಾರ್ಮಿಕರು, ಎನ್‌ಟಿಸಿ, ಕೋ-ಆಪರೇಟಿವ್ ಬ್ಯಾಂಕ್, ಆಟೋಚಾಲಕರು, ಪೌರ ನೌಕರರು ಹೀಗೆ ಹಲವಾರು ಕ್ಷೇತ್ರದವರು ತಮ್ಮ ಉದ್ಯಮಗಳ ಬಗ್ಗೆ ಹೊಸ ಆರ್ಥಿಕ ನೀತಿ ಬಗ್ಗೆ, ಕೋಮುವಾದದ ಅಪಾಯದ ಬಗ್ಗೆ ಮಾತನಾಡಿದರು.

ಅಕ್ಟೋಬರ್ 3 ರಿಂದ ಲಾಕ್‌ಔಟ್ ಆಗಿರುವ ಚಂದ್ರೋದಯ ಮಿಲ್ ತೆರೆಯುವ ಬಗ್ಗೆ, ಸಕ್ಕರೆ ಉದ್ಯಮದ ಸಮಸ್ಯೆಗಳನ್ನು ಬಗೆಹರಿಸುವ ಬಗ್ಗೆ, ಕೊಳಚೆ ಪ್ರದೇಶದ ನಿವಾಸಿಗಳಿಗೆ ಕನಿಷ್ಠ ಸೌಲಭ್ಯ ಒದಗಿಸುವ ಬಗ್ಗೆ, ನಿರ್ಣಯಗಳನ್ನು ಅಂಗೀಕರಿಸಲಾಯಿತು.

ಕಾಂ|| ಸೂರಿಯವರು ಸಮಾರೋಪ ಭಾಷಣ ಮಾಡಿದರು. ಅಧ್ಯಕ್ಷ ಮಂಡಳಿಯ ಪರವಾಗಿ ಎ.ಎಸ್. ಮೂರ್ತಿ ಮಾತನಾಡಿ ಸಮಾವೇಶ ನಿಭಾಯಿಸಬೇಕಾದ, ಜಾಥಾ, ನವೆಂಬರ್ ರ್‍ಯಾಲಿ ಮತ್ತು ಡಿಸೆಂಬರ್ 11 ರ ಸಾರ್ವತ್ರಿಕ ಮುಷ್ಕರವನ್ನು ಯಶಸ್ವಿಗೊಳಿಸಲು ಕರೆ ನೀಡಿದರು. ವಕೀಲರ ಸಂಘದ ಎ.ವೈ.ಕೃಷ್ಣಮೂರ್ತಿ ವಂದಿಸಿದರು. 'ಗೆಲುವು ನಮ್ಮದು' ಗೀತೆಯೊಂದಿಗೆ ಸಮಾವೇಶ ಮುಕ್ತಾಯಗೊಂಡಿತು.

ಬೀದರ್: ನವೆಂಬರ್ 1 ರಂದು ಸಾಮೂಹಿಕ ಸಂಘಟನೆಗಳ ರಾಷ್ಟ್ರೀಯ ವೇದಿಕೆಯ ಜಿಲ್ಲಾ ಸಮಾವೇಶವು ಯಶಸ್ವಿಯಾಗಿ ನಡೆಯಿತು. ನೂರು ಪ್ರತಿನಿಧಿಗಳು ಭಾಗವಹಿಸಿದ್ದರು. ವೇದಿಕೆಯ ಜಿಲ್ಲಾ ಸಂಚಾಲಕ ಬಸವರಾಜ ಮೊಳಗೆ ಪ್ರಸ್ತಾವಿಕ ಭಾಷಣ ಮಾಡಿದರು. ಸಮಾವೇಶದಲ್ಲಿ ಹಲವು ಪ್ರತಿನಿಧಿಗಳು ಭಾಗವಹಿಸಿ ಮಾತನಾಡಿ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ವಿನಾಶ ನೀತಿಯ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

ಸಿಐಟಿಯು ಗೆ ಭಾರೀ ಜಯ

ಹರಿಹರ: ಪ್ರತಿಷ್ಠಿತ ಗ್ವಾಲಿಯರ್ ರೇಯಾನ್ ಕಾರ್ಮಿಕರ ಚುನಾವಣೆಯಲ್ಲಿ ಸಿಐಟಿಯು ಅಧಿಕ ಸ್ಥಾನ ಗಳಿಸಿ ಜಯಶಾಲಿಯಾಗಿದೆ.

ಅಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸಿದ್ದ ಸಿಐಟಿಯು ರಾಜ್ಯ ಪ್ರಧಾನ ಕಾರ್ಯದರ್ಶಿ ವಿ.ಜೆ.ಕೆ.ನಾಯರ್ ತಮ್ಮ ಪ್ರತಿಸ್ಪರ್ಧಿಗಳಾದ ಬಿಎಂಎಸ್ ನ ಡಿ.ಕೆ.ಸದಾಶಿವ, ಎಐಟಿಯುಸಿಯ ಹೆಚ್.ವಿ.ಅನಂತ ಸುಬ್ಬರಾವ್ ಮತ್ತು ಇಂಟಕ್‌ನ ಕೆ.ಟಿ.ಗೋವಿಂದೇ ಗೌಡರನ್ನು ಪರಾಭವ ಗೊಳಿಸಿ ವಿಜಯಶಾಲಿ ಯಾಗಿದ್ದಾರೆ.

ಸಿಐಟಿಯುವಿನ ಹುಲಮನಿ, ಕೆ.ಬಸವರಾಜು, ಶಿವಾನಂದಪ್ಪ, ಸೈಯದ್ ಫಜಲುರವರು ಕ್ರಮವಾಗಿ ಉಪಾಧ್ಯಕ್ಷ, ಪ್ರಧಾನ ಕಾರ್ಯದರ್ಶಿ ಹಾಗೂ ಇಬ್ಬರು ಸಹ ಕಾರ್ಯ ದರ್ಶಿಗಳಾಗಿ ಚುನಾಯಿತರಾಗಿದ್ದಾರೆ. 20 ಕಾರ್ಯಕಾರಿ ಸಮಿತಿ ಸದಸ್ಯರುಗಳಲ್ಲಿ 9 ಜನ ಎಐಟಿಯುಸಿ, 4 ಜನ ಬಿಎಂಎಸ್, 4 ಜನ ಎಐಟಿಯುಸಿ, ಇಬ್ಬರು ಇಂಟಕ್ ಮತ್ತು ಒಬ್ಬರು ಸ್ವತಂತ್ರ ಅಭ್ಯರ್ಥಿಗಳಾಗಿ ಜಯಶೀಲರಾಗಿದ್ದಾರೆ. ವಿಜಯಶಾಲಿಗಳಾದ ಸಿಐಟಿಯು ಪದಾಧಿಕಾರಿಗಳು, ಸಮಿತಿ ಸದಸ್ಯರು ಮತ್ತು ಕಾರ್ಮಿಕರನು ದ್ದೇಶಿಸಿ ವಿರೂಪಾಕ್ಷಪ್ಪ, ಕೆ.ಬಸವರಾಜು, ಎಂ.ಎಂ.ಹುಲಮನಿ ಮತ್ತು ಜಿಲ್ಲಾ ಕಾರ್ಯದರ್ಶಿ ಎ.ಎಸ್.ಮೂರ್ತಿ ಯವರು ಮಾತನಾಡಿ ಉದ್ಯಮ ಹಾಗೂ ಎಲ್ಲಾ ಕಾರ್ಮಿಕರ ಹಿತಾಸಕ್ತಿಗಳನ್ನು ಕಾಪಾಡುವಂತೆ ಕೋರಿ ಅಭಿನಂದಿಸಿದರು.

ಬಾಗೂರು ನವಿಲೆ ರೈತರ ಹೋರಾಟಕ್ಕೆ ಪ್ರಾಂತ ರೈತ ಸಂಘದ ಬೆಂಬಲ

ಕಳೆದ ಹತ್ತು ದಿನಗಳಿಂದ ಬಾಗೂರು ನವಿಲೆ ಸುರಂಗ ಸಂತ್ರಸ್ಥರು ನಡೆಸುತ್ತಿರುವ ಧರಣಿಯನ್ನು ಬೆಂಬಲಿಸಿರುವ ಕರ್ನಾಟಕ ಪ್ರಾಂತ ರೈತ ಸಂಘವು, ಕೂಡಲೇ ರೈತರ ಹೋರಾಟಕ್ಕೆ ಮನ್ನಣೆ ನೀಡಿ ಅವರ ಸಮಸ್ಯೆಗಳಿಗೆ ಪರಿಹಾರ ಘೋಷಿಸಬೇಕೆಂದು ಸರ್ಕಾರಕ್ಕೆ ಆಗ್ರಹಿಸಿದೆ. ಬೆಂಗಳೂರು ಜಿಲ್ಲಾ ಸಮಿತಿಯು ಬೆಂಬಲ ವ್ಯಕ್ತಪಡಿಸಿ ಒಂದು ದಿನ ಧರಣಿಯಲ್ಲಿ ಪಾಲ್ಗೊಳ್ಳಲು ತೀರ್ಮಾನಿಸಿದೆ.

ಈಗ ಇತಿಹಾಸದ ಸಂಶೋಧನಾ ಯೋಜನೆಗೆ ಕತ್ತರಿ

ಕೇಂದ್ರದ ಮಾನವ ಸಂಪನ್ಮೂಲ ಮಂತ್ರಾಲಯ ಆರ್.ಎಸ್.ಎಸ್. ನ 'ಬಚ್ಚಿಟ್ಟ ಅಜೆಂಡಾ' ವನ್ನು ಕಾರ್ಯಗತ ಗೊಳಿಸುವ ಒಂದು ದೊಡ್ಡ ಪಟ್ಟಿಯನ್ನೇ ತಯಾರಿಸಿಕೊಂಡಂತಿದೆ. ಇತಿಹಾಸ ಸಂಶೋಧನಾ ಮಂಡಳಿಯಲ್ಲಿ ಆರ್.ಎಸ್.ಎಸ್. ಮಂದಿಯನ್ನು ತೂರಿಸಿದ್ದು, ಶಿಕ್ಷಣ ರಂಗದಲ್ಲಿ 'ಹಿಂದುತ್ವ' ತುರುಕಿಸುವ ಯತ್ನದ ನಂತರ ಈಗ ಭಾರತೀಯ ಇತಿಹಾಸ ಸಂಶೋಧನಾ ಮಂಡಳಿಯ ಒಂದು ಪ್ರಮುಖ ಯೋಜನೆಗೆ ಕತ್ತರಿ ಹಾಕಿದೆ ಹಾಗೂ ಭಾರತೀಯ ಸಾಮಾಜಿಕ ವಿಜ್ಞಾನ ಸಂಶೋಧನಾ ಮಂಡಳಿಯನ್ನು 'ಪುನರ್ರಚಿಸುವ' ಬಗ್ಗೆ ವಿವಾದ ಸೃಷ್ಟಿಸಿದೆ.

ಭಾರತೀಯ ಇತಿಹಾಸ ಸಂಶೋಧನಾ ಮಂಡಳಿಯ 'ಭಾರತೀಯ ಶಾಸನಗಳಲ್ಲಿ ಸಾಮಾಜಿಕ, ಆರ್ಥಿಕ ಮತ್ತು ಆಡಳಿತ ಪದಗಳ ಕೋಶ' ಸಿದ್ಧಪಡಿಸುವ ಬೃಹತ್ ಯೋಜನೆಯೊಂದನ್ನು ಮಾನವ ಸಂಪನ್ಮೂಲ ಮಂತ್ರಾಲಯ ರದ್ದುಪಡಿಸಿದೆ ಎಂದು ತಿಳಿದು ಬಂದಿದೆ. ಐದು ವರ್ಷಗಳ ಹಿಂದೆ ಆರಂಭವಾದ ಈ ಯೋಜನೆಯಡಿ ಈಗಾಗಲೇ 50000 ಪದಗಳ ಸಂಗ್ರಹವಾಗಿದ್ದು ಎರಡು ಸಂಪುಟಗಳು ಪ್ರಕಟಣೆಗೆ ಸಿದ್ಧವಾಗಿದ್ದವು. ಆರು ಸಂಪುಟಗಳ ಈ ಪದಕೋಶದಲ್ಲಿ ಭಾರತ, ಪಾಕಿಸ್ತಾನ, ಬಾಂಗ್ಲಾದೇಶ ಹಾಗೂ ಅಫಘಾನಿಸ್ತಾನದಲ್ಲಿ ದೊರೆತಿರುವ ಎಲ್ಲಾ ಶಾಸನಗಳ ಸಂಗ್ರಹ ಮಾಡುವ ಯೋಜನೆಯಿತ್ತು. ಪ್ರತಿಯೊಂದು ಶಾಸನದ ಪ್ರಮಾಣತೆಯ ಮೌಲ್ಯಮಾಪನವನ್ನು 54 ಚಾರಿತ್ರಿಕ ನೀತಿಗಳ ಆಧಾರದಲ್ಲಿ ಮಾಡಲು ನಿರ್ಧರಿಸಲಾಗಿತ್ತು. ಅಪ್ರಕಟಿತ ಶಾಸನಗಳನ್ನು ಸಾಮಾನ್ಯವಾಗಿ ಈ ಪದಕೋಶದಲ್ಲಿ ಸೇರಿಸಬಾರದು ಎಂದೂ ನಿರ್ಧರಿಸಲಾಗಿತ್ತು. ಪ್ರಮುಖ ಆರ್.ಎಸ್.ಎಸ್. ಮುಖಂಡ ಮುರುಳಿ ಮನೋಹರ ಜೋಷಿ ಯವರ ಮಾನವ ಸಂಪನ್ಮೂಲ ಇಲಾಖೆ ಈ ಕಾರಣಕ್ಕೇ ಈ ಯೋಜನೆಯನ್ನು ರದ್ದುಪಡಿಸಿದೆ ಎಂದು ಸಂದೇಹ ಪಡಲಾಗುತ್ತಿದೆ.

ವಾಸ್ತವ ಸಂಗತಿಗಳಿಗಿಂತ 'ನಂಬಿಕೆ'ಗೇ ಆದ್ಯತೆ ನೀಡುವ ಸಂಘ ಪರಿವಾರಕ್ಕೆ ಇಂತಹ ಒಂದು ದಸ್ತಾವೇಜಿನಿಂದ ಕಸಿವಿಸಿಯಾಗುವುದು ಸಹಜ ಎಂದು ಇತಿಹಾಸಜ್ಞರ ಅಭಿಪ್ರಾಯ. ಏಕೆಂದರೆ ಹಾಗಾದಾಗ ಶಾಸನಗಳಿಗೆ ತಮಗೆ ಬೇಕಾದಂತೆ ವಿವರಣೆ ಕೊಡಲು ಇವರಿಗೆ ಅವಕಾಶ ಉಳಿಯುವುದಿಲ್ಲ ಎನ್ನುತ್ತಾರೆ ಅವರು. ಅಯೋಧ್ಯಾ ವಿವಾದದಲ್ಲಿ ಬಿಜೆಪಿ-ಪರ ಇತಿಹಾಸಜ್ಞರು, ಪ್ರಾಚ್ಯ ಸಂಶೋಧನಜ್ಞರು ಇಂತಹ ಸಾಬೀತಾಗಿರದ 'ಸಾಕ್ಷಿ'ಗಳಿಂದಲೇ ತಾನೇ ವಿವಾದ ಸೃಷ್ಟಿಸಿದ್ದು. ಇಂತಹ ಒಂದು ಪ್ರಮಾಣಿತ ಪರಾಮರ್ಶನಾ ಗ್ರಂಥವಿದ್ದಾಗ ಯಾವ್ಯಾವುದೋ 'ಸಂಶೋಧನೆ'ಗಳನ್ನು ಉದ್ಧರಿಸಿ ಇತಿಹಾಸವನ್ನು ಮನಬಂದಹಾಗೆ ತಿರುಚಿ ಅಯೋಧ್ಯಾ ವಿನಾಶದಂತಹವುಗಳನ್ನು ಸೃಷ್ಟಿಸಲು ಸಾಧ್ಯವಾಗುವುದಿಲ್ಲ ಎಂಬುದೇ ಈ ಯೋಜನೆಗೆ ಕತ್ತರಿ ಹಾಕಲು ಏಕೈಕ ಕಾರಣ ಎಂದು ಈ ಮಂಡಳಿಯಲ್ಲಿ ದುಡಿಯುತ್ತಿರುವ ತಜ್ಞರು ಅಭಿಪ್ರಾಯ ಪಟ್ಟಿದ್ದಾರೆ.

ವಾಸ್ತವವಾಗಿ ಇಂತಹ ವಿವಾದ ಸೃಷ್ಟಿಸಿ ಬಾಬರಿ ಮಸೀದಿ ಧ್ವಂಸದಂತಹ ಹೀನ ಕೃತ್ಯ ನಡೆಯುತ್ತಿದ್ದ ಹಿನ್ನೆಲೆಯಲ್ಲಿ 1992-93 ರಲ್ಲಿ ಈ ಯೋಜನೆಯನ್ನು ಕೈಗೆತ್ತಿಕೊಳ್ಳಲಾಗಿತ್ತು. ಹತ್ತು ವರ್ಷಗಳ ಈ ಯೋಜನೆಗೆ ಈಗಾಗಲೇ 4.5 ಲಕ್ಷ ರೂ. ಖರ್ಚಾಗಿತ್ತು. ಹಲವು ಪ್ರಸಿದ್ಧ ಇತಿಹಾಸಜ್ಞರು ಈ ಯೋಜನೆಯಲ್ಲಿ ಕೆಲಸ ಮಾಡುತ್ತಿದ್ದರು. ಈಗ ಈ ಯೋಜನೆಯನ್ನು ರದ್ದು ಮಾಡಲು ಯಾವುದೇ ಅಧಿಕೃತ ಕಾರಣ ನೀಡಿಲ್ಲ. 'ಆಮೂಲಾಗ್ರ ಚರ್ಚೆಯ ನಂತರ" ಈ ಯೋಜನೆಯನ್ನು ರದ್ದು ಮಾಡಲು ನಿರ್ಧಾರ ಮಾಡಲಾಗಿದೆ ಎಂದು ತಿಳಿಸಲಾಗಿದೆ.

ವಿಶ್ವಾದ್ಯಂತ ಸಂಶೋಧನೆಗಳು ವಿಸ್ತೃತಗೊಂಡು, ನಿರ್ದಿಷ್ಟ ವಿಷಯಗಳ ಮೇಲೆ ಗಮನ ಕೇಂದ್ರೀಕರಿಸುತ್ತಿರುವಾಗ, ಇದರಿಂದಾಗಿ ವಿಶ್ವಕೋಶಗಳು, ಪದಕೋಶಗಳು, ಇತರ ಇಂತಹ ಪರಾಮರ್ಶನಾ ಗ್ರಂಥಗಳು ಸಿದ್ಧಗೊಳ್ಳುತ್ತಿರುವಾಗ ಭಾರತದಲ್ಲಿ ಇಂತಹ ಒಂದು ಉತ್ತಮ ಪ್ರಯತ್ನವನ್ನು ಕೇಂದ್ರದ ಮಾನವ ಸಂಪನ್ಮೂಲ ಇಲಾಖೆ ಅದರ ಸದ್ಯದ ಮುಖಂಡರ ಸಂಕುಚಿತ ಉದ್ದೇಶಕ್ಕಾಗಿ ಮೊಟಕುಗೊಳಿಸಿದೆ ಎಂದು ಪ್ರಮುಖ ಪತ್ರಿಕೆಯೊಂದು ಈ ನಿರ್ಧಾರವನ್ನು ಟೀಕಿಸಿದೆ.

ಭಾರತೀಯ ಸಮಾಜ ವಿಜ್ಞಾನ ಸಂಶೋಧನಾ ಮಂಡಳಿಯನ್ನು ಇಂತಹ ಇತಿಹಾಸ ಸಂಶೋಧನಾ ಮಂಡಳಿಯ ಮಾದರಿಯಲ್ಲಿ 'ಪುನರ್ರಚಿಸಿ' ಸಂಘ ಪರಿವಾರದ ಪರವಾಗಿರುವವರನ್ನು ತುರುಕಿಸುವುದು ಮಾನವ ಸಂಪನ್ಮೂಲ ಇಲಾಖೆಯಲ್ಲಿನ ಮುಂದಿನ ಅಜೆಂಡಾ ವಿದ್ದಂತಿದೆ ಎಂದೂ ವರದಿಯಾಗಿದೆ.

ಈರುಳ್ಳಿ ಬೆಲೆಗಳನ್ನು ನಿಯಂತ್ರಿಸಲಾಗದ ಸರಕಾರ ವಿದ್ಯುತ್ ಬೆಲೆಯನ್ನು ನಿಯಂತ್ರಿಸಬಲ್ಲುದೇ?

ವಿದ್ಯುತ್ ವಲಯದಲ್ಲಿ ಬಿಜೆಪಿ ನೇತೃತ್ವದ ಸರಕಾರ ಇತ್ತೀಚೆಗೆ ಪ್ರಕಟಪಡಿಸಿದ ಹೊಸಕ್ರಮಗಳು ಭಾರತೀಯ ಸಾರ್ವಜನಿಕ ವಲಯದ ಉದ್ದಿಮೆಗಳನ್ನು ಮೂರು ಕಾಸಿಗೆ ವಿದೇಶಿ ಕಂಪನಿಗಳಿಗೆ ಮಾರುವುದೇ ಬಿಜೆಪಿಯ ಸ್ವದೇಶಿ ಅಜೆಂಡಾದ ತಿರುಳು ಎಂಬುದನ್ನು ಮತ್ತೊಮ್ಮೆ ಸಾಬೀತುಪಡಿಸಿದೆ ಎಂದು ಈ ವಲಯದಲ್ಲಿನ ಪರಿಣತರು ಅಭಿಪ್ರಾಯ ಪಟ್ಟಿದ್ದಾರೆ.

10 ಸಾವಿರದಿಂದ 15 ಸಾವಿರ ಮೆಗಾವಾಟ್ ಸಾಮರ್ಥ್ಯದ ಬೃಹತ್ ಖಾಸಗಿ ವಿದ್ಯುತ್ ಸ್ಥಾವರಗಳಿಗೆ ಅವಕಾಶ, ಒಂದು ಪ್ರತ್ಯೇಕ ವಿದ್ಯುತ್ ವ್ಯಾಪಾರ ಕಾರ್ಪೊರೇಷನ್ ಹಾಗೂ ವಿದ್ಯುತ್ ಉತ್ಪಾದನಾ ಸಾಧನಗಳಿಗೆ ಶೂನ್ಯ ಆಮದು ಸುಂಕ- ಇವೇ ಆ ಪ್ರಮುಖ ಕ್ರಮಗಳು. ವಾಸ್ತವವಾಗಿ ಇದರ ಅರ್ಥ ವಿದೇಶಿ ಬಹುರಾಷ್ಟ್ರೀಯ ವಿದ್ಯುತ್ ಕಂಪನಿಗಳು ತಮ್ಮ ಉತ್ಪಾದನೆಗಳನ್ನು ಒಂದು ಡಾಲರೂ ಸುಂಕ ನೀಡದೆ ಇಲ್ಲಿ ಮಾರಬಹುದು, ಆದರೆ ಭಾರತೀಯ ವಿದ್ಯುತ್ ಉತ್ಪಾದನಾ ಯಂತ್ರಗಳ ತಯಾರಕ ಕಂಪನಿಗಳು ಆಮದು ಮಾಡುವ ಕಚ್ಚಾ ಸಾಮಾಗ್ರಿಗಳಿಗೆ ಸುಂಕ ತೆರಬೇಕು! ಹಿಂಜರಿತದಲ್ಲಿರುವ ಈ ಕೈಗಾರಿಕೆಯನ್ನು, ಅದರಲ್ಲೂ ಮುಖ್ಯವಾಗಿ ಸಾರ್ವಜನಿಕ ವಲಯದ ಪ್ರಖ್ಯಾತ ಉದ್ದಿಮೆ ಬಿ.ಹೆಚ್.ಇ.ಎಲ್. ನ್ನು ಛಿದ್ರಗೊಳಿಸಿ, ರೋಗಗ್ರಸ್ತಗೊಳಿಸಿ ನಂತರ ಅದನ್ನು ಅತ್ಯಂತ ಅಗ್ಗ ದರದಲ್ಲಿ ಬಹುರಾಷ್ಟ್ರೀಯ ಕಂಪನಿಗಳಿಗೆ ಮಾರುವುದೇ ಈ ಕ್ರಮಗಳ ಹಿಂದಿರುವ ಹುನ್ನಾರ ಎನ್ನುತ್ತಾರೆ ತಜ್ಞರು.

ಎನ್ರೋನ್, ಕೊಜೆಂಟ್ರಿಕ್ಸ್‌ಗಳಿಗೆ ತಮ್ಮ ಬೃಹತ್ ಸ್ಥಾವರಗಳಿಗೆ ಬೇಕಾದ ಯಂತ್ರಗಳನ್ನು, ಉರುವಲನ್ನು ತರಲು ಸುಂಕವೇ ಇಲ್ಲದೆ ಅವಕಾಶ ನೀಡಲಾಗಿದೆ ಯಷ್ಟೇ ಅಲ್ಲ, ತಮ್ಮ 'ಬಂಡವಾಳವನ್ನು ಹಿಂದಕ್ಕೆ ಪಡೆಯಲು' ಬೇಕಾದಷ್ಟು ಬೆಲೆಯನ್ನು ವಸೂಲಿ ಮಾಡಲು ಕೂಡಾ ಗ್ಯಾರಂಟಿ ನೀಡಲಾಗಿದೆ. ಇದರಿಂದ ಒಂದೆಡೆ ಬಿ.ಹೆಚ್.ಇ.ಎಲ್. ನ ಜಗದ್ವಿಖ್ಯಾತ ವಿದ್ಯುತ್ ಉತ್ಪಾದನಾ ಸಾಧನಗಳಿಗೆ ದೇಶದಲ್ಲೇ ಮಾರುಕಟ್ಟೆ ಇಲ್ಲದಂತೆ ಮಾಡುವುದಷ್ಟೇ ಅಲ್ಲ, ದೇಶದ ವಿದ್ಯುತ್ ಮಂಡಳಿಗಳು ತಮ್ಮ ಅಗ್ಗದ ವಿದ್ಯುತ್‌ನ್ನು ಮಾರಲಾಗದಂತೆ ಮಾಡಿ ಅವನ್ನು ದಿವಾಳಿಯೆಬ್ಬಿಸುವುದೇ ಬಿಜೆಪಿಯ 'ರಾಷ್ಟ್ರೀಯ ಅಜೆಂಡಾ' ವಿದ್ದಂತೆ ಕಾಣುತ್ತದೆ.

ಇಡೀ ವಿದ್ಯುತ್ ವಲಯವನ್ನು ಕಳಚಿಹಾಕಿ ಖಾಸಗೀಕರಿಸುವ ದಿಕ್ಕಿನಲ್ಲಿ ಹೊರಟ ಈ ಸರಕಾರ ಮುಂದೆ ವಿದ್ಯುತ್ ಬೆಲೆಯನ್ನು ಈಗ ಈರುಳ್ಳಿ ಬೆಲೆಯನ್ನು 'ಮಾರುಕಟ್ಟೆ' ನಿರ್ಧರಿಸುವ ರೀತಿಯಲ್ಲಿ ನಿರ್ಧರಿಸಲು ಬಿಟ್ಟು ಹಾಗಾದಾಗ ಅದಕ್ಕೆ ತಾನು ಕಾರಣ ಅಲ್ಲ, ಪ್ರಕೃತಿ ಕಾರಣ ಎನ್ನುತ್ತಾ ವಿದ್ಯುತ್ ಮಂತ್ರಿಗಳ ಸಮ್ಮೇಳನದಲ್ಲಿ 'ಶಕ್ತಿ ವಂದನಾ' ಪ್ರಾರ್ಥನೆ ಮಾಡಿಸುತ್ತದೆಯೋ ಎಂದು ಈ ಪರಿಣತರು ಪ್ರಶ್ನಿಸಿದ್ದಾರೆ. ○


ಪೇಟೆಂಟ್ ಪ್ರಶ್ನೆಗಳ ಕುರಿತು ಜನತಾ ಆಯೋಗ

ಪೇಟೆಂಟ್ ಕಾನೂನುಗಳನ್ನು ಕುರಿತ ರಾಷ್ಟ್ರೀಯ ಕಾರ್ಯತಂಡ ಬೌದ್ಧಿಕ ಆಸ್ತಿ ಹಕ್ಕು ಪ್ರಶ್ನೆಗಳ ವಿವಿಧ ಆಯಾಮಗಳನ್ನು ಪರಿಶೀಲಿಸುವ ನಾಲ್ವರು ಸದಸ್ಯರುಳ್ಳ ಒಂದು ಜನತಾ ಆಯೋಗವನ್ನು ರಚಿಸಿದೆ. ನ್ಯಾಯಮೂರ್ತಿ ವಿ.ಆರ್.ಕೃಷ್ಣ ಅಯ್ಯರ್ ಅಧ್ಯಕ್ಷರಾಗುಳ್ಳ ಈ ಆಯೋಗದ ಇತರ ಸದಸ್ಯರೆಂದರೆ ಯುಜಿಸಿಯ ಮಾಜಿ ಅಧ್ಯಕ್ಷ ಪ್ರೊ. ಯಶಪಾಲ್, ಜವಹರಲಾಲ್ ನೆಹರೂ ವಿಶ್ವ ವಿದ್ಯಾಲಯದ ಡಾ. ಪ್ರಭಾತ್ ಪಟ್ನಾಯಕ್ ಹಾಗೂ ಭಾರತೀಯ ಕೃಷಿ ಸಂಶೋಧನಾ ಮಂಡಳಿಯ ಮಾಜಿ ನಿರ್ದೇಶಕ ಡಾ. ಎಸ್.ಕೆ.ಸಿನ್ಹಾ.

'ಗ್ಯಾಟ್'ನ ವ್ಯಾಪಾರ ಸಂಬಂಧ ಬೌದ್ಧಿಕ ಹಕ್ಕುಗಳ (TRIPS) ಒಪ್ಪಂದ ಭಾರತೀಯ ಜನತೆಯ ಮೇಲೆ ಬೀರುವ ಪರಿಣಾಮಗಳ ಬಗ್ಗೆ ವಿಶೇಷವಾಗಿ ಈ ಆಯೋಗ ಪರಿಶೀಲಿಸಲಿದೆ. ವಿದೇಶಿ ತಂತ್ರಜ್ಞಾನದ ಆಮದು, ಸಂಶೋಧನೆಯ ಮೇಲೆ ಹೂಡಿಕೆ, ಸ್ಥಳೀಯ ತಾಂತ್ರಿಕ ಸಂಶೋಧನೆ, ಜೈವಿಕ ಲೂಟಿ, ಸ್ಥಳೀಯ ಜ್ಞಾನಭಂಡಾರ, ಭೌತಿಕ ವಸ್ತುಗಳ ರಕ್ಷಣೆ, ಕೈಗಾರಿಕಾ ಬೆಳವಣಿಗೆ ಮತ್ತು ಗ್ರಾಹಕರ ರಕ್ಷಣೆ ಕುರಿತಾದ ಪ್ರಶ್ನೆಗಳನ್ನು ಇದು ಪರಿಶೀಲಿಸಲಿದೆ.

ಬೇರೆ-ಬೇರೆ ದೇಶಗಳಲ್ಲಿ ಬೌದ್ಧಿಕ ಹಕ್ಕುಗಳನ್ನು ಕುರಿತಂತೆ ಕಾನೂನುಗಳು ಮತ್ತು ಸಂಬಂಧಪಟ್ಟ ಪ್ರಶ್ನೆಗಳ ಬಗ್ಗೆಯೂ ಈ ಸಮಿತಿ ಪರಿಶೀಲಿಸಲಿದೆ. ಅಭಿವೃದ್ಧಿ ಹೊಂದುತ್ತಿರುವ ದೇಶಗಳ ಜನಗಳ ಹಿತಾಸಕ್ತಿಗಳನ್ನು ರಕ್ಷಿಸುವಂತೆ ಈ TRIPS ಒಪ್ಪಂದವನ್ನು ತಿದ್ದುಪಡಿ ಮಾಡುವ ಪ್ರಶ್ನೆಯ ಮೇಲೆ ಈ ದೇಶಗಳ ನಿಲುವುಗಳಲ್ಲಿ ಸಾಮರಸ್ಯ ತರುವ ಬಗ್ಗೆಯೂ ಪರಿಶೀಲಿಸಲಿರುವ ಈ ಆಯೋಗ ತಕ್ಷಣದ ಪ್ರಶ್ನೆಗಳ ಮೇಲೆ ಒಂದು 'ತ್ವರಿತ ಪ್ರಥಮ ವರದಿ'ಯನ್ನು ಸಲ್ಲಿಸಲಿದೆ.

ವಾರದ ವ್ಯಂಗ್ಯಚಿತ್ರ 'ದಿ ಹಿಂದು'ನಲ್ಲಿ ಕೇಶವ್



ಎಂಟು ಸಾರ್ವಜನಿಕ ವಲಯದ ಘಟಕಗಳ ಮುಚ್ಚಿಕೆಗೆ ವ್ಯಾಪಕ ಪ್ರತಿಭಟನೆ

"ವಿದೇಶಿ ಕಂಪನಿಗಳಿಗೆ ಮಾರುಕಟ್ಟೆ ಒದಗಿಸುವ ದೇಶ-ವಿರೋಧಿ ಕ್ರಮ"

ಎಂಟು ಸಾರ್ವಜನಿಕ ವಲಯದ ಉದ್ದಿಮೆಗಳನ್ನು ಮುಚ್ಚುವ ಹಾಗೂ ಇ.ಸಿ.ಎಲ್. ನಡೆಯಿರುವ ಕಲ್ಲಿದ್ದಲು ಗಣಿಗಳನ್ನು ಮುಚ್ಚುವ ಕೇಂದ್ರ ಸರ್ಕಾರದ ನಿರ್ಧಾರವನ್ನು ಸಿಐಟಿಯು ಮತ್ತಿತರ ಕೇಂದ್ರ ಕಾರ್ಮಿಕ ಸಂಘಟನೆಗಳು ಹಾಗೂ ಸಾರ್ವಜನಿಕ ವಲಯದ ಕಾರ್ಮಿಕ ಸಂಘಗಳ ಸಮಿತಿ CPSTU ಬಲವಾಗಿ ವಿರೋಧಿಸಿವೆ.

ಸೈಕಲ್ ಕಾರ್ಪೊರೇಷನ್ ಆಫ್ ಇಂಡಿಯಾ, ವೇಬರ್ಡ್ ಇಂಡಿಯಾ, ನ್ಯಾಶನಲ್ ಇನ್‌ಸ್ಟ್ರುಮೆಂಟ್, ಎಂ.ಎ.ಎಂ.ಸಿ., ಟಿ.ಎಫ್.ಸಿ.ಐ., ಭಾರತ್ ಒಪ್ತಾಲ್ಮಿಕ್ ಗ್ಲಾಸ್, ಆರ್.ಐ.ಸಿ. ಹಾಗೂ ಎನ್.ಬಿ.ಸಿ.ಐ. ಈ ಎಂಟು ಸಾರ್ವಜನಿಕ ವಲಯದ ಕಾರ್ಖಾನೆಗಳನ್ನು ಮುಚ್ಚುವ ಕ್ರಮ ಆಘಾತಕಾರಿ ಎಂದು ಕೇಂದ್ರ ಕಾರ್ಮಿಕ ಸಂಘಟನೆಗಳ ಮುಖಂಡರು ಹೇಳಿದ್ದಾರೆ. ಸಂಸತ್ ಸದಸ್ಯ ಜೆ.ಚಿತ್ತರಂಜನ್(ಎಐಟಿಯುಸಿ) ತಪನ್ ಸೇನ್(ಸಿಐಟಿಯು), ಆರ್.ವಿ.ಮಿತ್ತಲ್ (ಹೆಚ್.ಎಂ.ಎಸ್), ಆರ್.ಕೆ.ಭಕ್ತ (ಬಿಎಂಎಸ್) ಹಾಗೂ ಚಂಡೀದಾಸ್ ಸಿಗ್ರ್ಯಾ(ಇಂಟಕ್) ಪ್ರಧಾನ ಮಂತ್ರಿಗಳಿಗೆ ಒಂದು ಮನವಿ ಪತ್ರ ಸಲ್ಲಿಸಿ ಈ ನಿರ್ಣಯವನ್ನು ಹಿಂತೆಗೆದುಕೊಳ್ಳಬೇಕೆಂದು ಆಗ್ರಹಪಡಿಸಿದ್ದಾರೆ. ಈ ಎಂಟೂ ಉದ್ದಿಮೆಗಳು ರೋಗಗ್ರಸ್ತವಾದದ್ದು ಸಂಬಂಧಪಟ್ಟ ಆಡಳಿತ ಮತ್ತು ಸಂಬಂಧಪಟ್ಟ ಮಂತ್ರಾಲಯದ ನಿರ್ಲಕ್ಷ್ಯದಿಂದಾಗಿ, ಸೂಕ್ತ ರೀತಿಯಲ್ಲಿ ಅವುಗಳ ತಂತ್ರಜ್ಞಾನವನ್ನು ಆಧುನಿಕಗೊಳಿಸಲು ಅಗತ್ಯವಾದ ಬಂಡವಾಳ ಹೂಡಿಕೆಗೆ ವ್ಯವಸ್ಥೆ ಮಾಡಿದ್ದರೆ, ಈ ಉದ್ದಿಮೆಗಳ ಉತ್ಪಾದನೆಗಳ ವಿರುದ್ಧ ಪಕ್ಷಪಾತಪೂರ್ಣ ತೆರಿಗೆಗಳು, ಸುಂಕಗಳನ್ನು ಹಾಕಿರದಿದ್ದರೆ ಹಾಗಾಗುತ್ತಿರಲಿಲ್ಲ ಎಂದು ಈ ಕಾರ್ಮಿಕ ಮುಖಂಡರು ಪ್ರಧಾನ ಮಂತ್ರಿಗಳಿಗೆ ಹೇಳಿದ್ದಾರೆ.

ಈ ಎಲ್ಲಾ ಘಟಕಗಳು ಬಹಳ ಸಮಯದಿಂದ ಬಿ.ಐ.ಎಫ್.ಆರ್. ಮುಂದಿದ್ದವು. ಇವುಗಳ ಪುನಶ್ಚೇತನದ ಸ್ಪಷ್ಟ ಪ್ರಸ್ತಾವಗಳಿಗೆ ಅನುಮೋದನೆ ಕೊಡುವಲ್ಲಿ ಸರ್ಕಾರಿ ಇಲಾಖೆಗಳ ವಿಳಂಬ ನೀತಿಯೇ ಇದಕ್ಕೆ ಕಾರಣ. ಇದರಿಂದಾಗಿ ಅನಿಶ್ಚಿತತೆ ಹೆಚ್ಚಿ, ಪುನಶ್ಚೇತನಕ್ಕೆ ತಗಲುವ ವೆಚ್ಚವೂ ಹೆಚ್ಚಿ ಸಾಲಗಳ ಪ್ರಮಾಣವೂ ಹೆಚ್ಚಿತು. ಈಸ್ಟರ್ನ್ ಕೋಲ್ಡ್ ಫೀಲ್ಡ್‌ನ 68 ಕಲ್ಲಿದ್ದಲು ಗಣಿಗಳನ್ನು ಮುಚ್ಚುವ ಕ್ರಮವೂ ಈ ಉದ್ದಿಮೆಯನ್ನು ಹಾಳುಗೆಡವುತ್ತದೆ ಎಂದು ಕಾರ್ಮಿಕ ಮುಖಂಡರ ನಿಯೋಗದ ಮನವಿ ಪತ್ರ ನೆನಪಿಸಿದೆ.

"ಈ ಸಾರ್ವಜನಿಕ ವಲಯ ಘಟಕಗಳನ್ನು ಮುಚ್ಚುವ ನಿರ್ಧಾರ ಸಾವಿರಾರು ಕಾರ್ಮಿಕರನ್ನು ಕೆಲಸದಿಂದ ಹೊರಗೆಸೆಯುತ್ತದೆ. ಸರಕಾರದ ಯಾವುದೇ ಪರಿಹಾರ ಕ್ರಮ ಇದನ್ನು ಸರಿಪಡಿಸಲಾಗದು ಎಂಬುದನ್ನು ದಯವಿಟ್ಟು ಗಮನಿಸಿ" ಎಂದು ಈ ಕಾರ್ಮಿಕ ಮುಖಂಡರು ಪ್ರಧಾನಿಗಳಿಗೆ ಮನವಿ ಮಾಡಿದ್ದಾರೆ.

ಸ್ವಯಂ ನಿವೃತ್ತಿ ಯೋಜನೆಯಂತವುಗಳಿಗೆ ಸರಕಾರ ವ್ಯಯಿಸಬೇಕಾದ ಹಣಕ್ಕಿಂತ ಕಮ್ಮಿ ಮೊತ್ತದಲ್ಲೇ ಈ ಘಟಕಗಳನ್ನು ಪುನಶ್ಚೇತನಗೊಳಿಸಲು ಸಾಧ್ಯ, ಒಮ್ಮೆ ಅವು ಪುನಶ್ಚೇತನಗೊಂಡವೆರೆಂದರೆ ರಾಷ್ಟ್ರೀಯ ಸಂಪತ್ತಿಗೆ ಅವು ಇನ್ನು ಮುಂದೆಯೂ ಕೊಡುಗೆ ನೀಡಬಲ್ಲವು. ಬದಲಿಗೆ ಅವನ್ನು ಮುಚ್ಚಿದರೆ ಇದರಿಂದ ಸಾರ್ವಜನಿಕ ಅಸಂತೃಪ್ತಿ ಹೆಚ್ಚಾಗುವುದಲ್ಲದೆ ಈ ಕೈಗಾರಿಕೆಗಳಲ್ಲಿನ ಉತ್ಪಾದಕ ಸಾಮರ್ಥ್ಯ ಹಾಗೂ ಕೌಶಲ್ಯವನ್ನು ಕೊಂಡಂತಾಗುತ್ತದೆ ಎಂದು ಕಾರ್ಮಿಕ ಮುಖಂಡರು ಪ್ರಧಾನ ಮಂತ್ರಿಗಳನ್ನು ಆಗ್ರಹಪಡಿಸಿದರು. ಈ ಘಟಕಗಳ ಮುಚ್ಚಿಕೆ ಯಾವ ರೀತಿಯಲ್ಲೂ ದೇಶಕ್ಕೆ ಪ್ರಯೋಜನಕಾರಿಯಲ್ಲ ಎಂದಿರುವ ಈ ನಿಯೋಗ ಪ್ರಧಾನ ಮಂತ್ರಿಗಳು ಮಧ್ಯಪ್ರವೇಶಿಸಿ ಈ ನಿರ್ಣಯವನ್ನು ಬದಲಿಸಬೇಕು ಎಂದು ಮನವಿ ಮಾಡಿತು.

ಪ್ರತಿಗಾಮಿ ಹೊಲಸು ಕ್ರಮ ಎಂದು ಸಿಐಟಿಯು ಖಂಡನೆ

ಸಿಐಟಿಯು ಕೇಂದ್ರ ಕಾರ್ಯದರ್ಶಿ ಮಂಡಳಿ ನೀಡಿದ ಒಂದು ಹೇಳಿಕೆಯಲ್ಲಿ ಈ ಕ್ರಮವನ್ನು ಬಲವಾಗಿ ಖಂಡಿಸಿದೆ. ಕೇಂದ್ರದಲ್ಲಿನ ಬಿಜೆಪಿ ಸರ್ಕಾರಕ್ಕೆ ಬೆಲೆಯೇರಿಕೆಯಿಂದ ತತ್ತರಿಸುತ್ತಿರುವ ಜನಸಾಮಾನ್ಯರಿಗೆ, ಕಾರ್ಮಿಕರಿಗೆ ಪರಿಹಾರ ಒದಗಿಸುವ ಬಗ್ಗೆ, ನಿರುದ್ಯೋಗ, ಕೈಗಾರಿಕಾ ರೋಗಗ್ರಸ್ತತೆ ಬಗ್ಗೆ ಚರ್ಚಿಸಲು ಸಮಯವೇ ಇಲ್ಲ, ಆದರೆ ಸಾರ್ವಜನಿಕ ವಲಯದ ಘಟಕಗಳನ್ನು ಮುಚ್ಚುವ ಬಹುರಾಷ್ಟ್ರೀಯ ಕಂಪನಿಗಳಿಗೆ, ದೊಡ್ಡ ಬಂಡವಾಳಶಾಹಿಗಳಿಗೆ ಮಾರುಕಟ್ಟೆ ಒದಗಿಸುವ ಬಗ್ಗೆ ಚರ್ಚಿಸಲು ಬೇಕಾದಷ್ಟು ಸಮಯವಿದೆ, ಇದು ಅತ್ಯಂತ ಹೊಲಸು ಹಾಗೂ ಖಂಡನೀಯ ಸಂಗತಿ ಎಂದು ಅದು ಹೇಳಿದೆ. ಆರ್ಥಿಕವನ್ನು, ಸಾಮಾಜಿಕ, ಶಾಂತಿ ಹಾಗೂ ಮತೀಯ ಸೌಹಾರ್ದವನ್ನು ನಾಶ ಮಾಡ ಹೊರಟಿರುವ ಈ ಬಿಜೆಪಿ ಸರಕಾರವನ್ನು ಕಿತ್ತು ಹಾಕಲು ಎಲ್ಲಾ ಕಾರ್ಮಿಕ ಸಂಘಗಳು, ಪ್ರಜಾಪ್ರಭುತ್ವವಾದೀ ಜನ ತಮ್ಮ ಹೋರಾಟವನ್ನು ತೀವ್ರಗೊಳಿಸಬೇಕು ಎಂದು ಅದು ಕರೆ ನೀಡಿದೆ. ಇಂತಹ ಪ್ರತಿಗಾಮಿ ಕ್ರಮಗಳ ಹಿನ್ನೆಲೆಯಲ್ಲಿ ಕಾರ್ಮಿಕ ವರ್ಗ ಐಕ್ಯತೆಯಿಂದ ಪ್ರತಿಭಟಿಸಬೇಕು, ಡಿಸೆಂಬರ್ 10-11ರ ಸಾರ್ವಜನಿಕ ವಲಯದ ಮುಷ್ಕರವನ್ನು ಯಶಸ್ವಿಗೊಳಿಸಬೇಕು ಎಂದು ಅದು ಕರೆ ನೀಡಿದೆ.

ದೇಶ ಹಿತಾಸಕ್ತಿಯನ್ನು ಬಲಿಗೊಟ್ಟ ಕ್ರಮ ಎಂದು ಸಿಪಿಎಸ್‌ಟಿಯು

ಸಿಐಟಿಯು, ಎಐಟಿಯುಸಿ, ಹೆಚ್.ಎಂ.ಎಸ್., ಬೆಂಗಳೂರಿನ ಸಾರ್ವಜನಿಕ ವಲಯ ಘಟಕಗಳ ಜಂಟಿ ಕ್ರಿಯಾ ಸಮಿತಿ(ಜೆ.ಎ.ಎಫ್.) ಹಾಗೂ ಹೈದರಾಬಾದಿನಲ್ಲಿನ ಸಂಯೋಜನಾ ಸಮಿತಿ ಜಂಟಿ ಹೇಳಿಕೆಯೊಂದರಲ್ಲಿ ಬಿಜೆಪಿ ಸರಕಾರದ ಈ ನಿರ್ಣಯವನ್ನು ಖಂಡಿಸುತ್ತಾ ಕಾರ್ಮಿಕ ಸಂಘಗಳು ಬಲವಾದ ವಿರೋಧ ವ್ಯಕ್ತಪಡಿಸಿದರೂ ಕೇಂದ್ರ ಸರ್ಕಾರ ಐಎಂಎಫ್-ವಿಶ್ವಬ್ಯಾಂಕ್ ಒತ್ತಡಕ್ಕೆ ಬಲಿಯಾಗಿ ರೋಗಗ್ರಸ್ತ ಘಟಕಗಳನ್ನು ಮುಚ್ಚಿ, ಲಾಭ ತರುತ್ತಿರುವ ಘಟಕಗಳನ್ನು ಮಾರಿ ವಿದೇಶಿ ಕಂಪನಿಗಳಿಗೆ ಮಾರುಕಟ್ಟೆ ಒದಗಿಸುತ್ತಿದೆ ಎಂದು ಟೀಕಿಸಿದೆ. ಇದು ಬಹುರಾಷ್ಟ್ರೀಯ ಕಂಪನಿಗಳ ಹಿತಾಸಕ್ತಿ ಮಾತ್ರ ಈಡೇರಿಸುವಂತಹ ಕ್ರಮ, ದೇಶದ ಹಿತಾಸಕ್ತಿಯನ್ನು ಬಲಿಗೊಟ್ಟು ಸಾವಿರಾರು ಕಾರ್ಮಿಕರನ್ನು ನಿರುದ್ಯೋಗಿಗೊಳಿಸುವ ಕ್ರಮ ಎನ್ನುತ್ತಾ ಸಿಪಿಎಸ್‌ಟಿಯು ಇಂತಹ ಕ್ರಮವನ್ನು ಪ್ರತಿರೋಧಿಸದೆ ಬಿಡುವುದಿಲ್ಲ ಎಂದು ಅದು ಘೋಷಿಸಿದೆ.

Reg. No. 17015/64 KRNM/BGS-405 MAG (2) PRB DECR 319-79/79 AIKYARANGA WEEKLY
ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ), ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ಮುದ್ರಣ ಮತ್ತು ಪ್ರಕಾಶನ: ಎಸ್.ಸೂರ್ಯನಾರಾಯಣ ರಾವ್
ಸಂಪಾದಕರು ಜಿ.ಎನ್.ನಾಗರಾಜ್, ಸಂಪಾದಕೀಯ ಕಛೇರಿ: ನಂ.12, 18ನೇ ಅಡ್ಡರಸ್ತೆ, ಸಂಪಂಗಿರಾಮನಗರ, ಬೆಂಗಳೂರು-27 ಫೋನ್ ನಂ. 2236462,
ಮುದ್ರಣ: ಹಸಿ ಪ್ರಿಂಟರ್ಸ್, ಕ್ವೀನ್ ರಸ್ತೆ, ಬೆಂಗಳೂರು-1
Printed & Published by Communist Party of India(Marxist), Karnataka State Committee. Editor: G.N. NAGARAJ